ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಅಕ್ಟೋಬರ್ 2019. ಬೆಲೆ ರೂ.5/-

## ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ
## ವಾರ್ಷಿಕ ಬ್ರಹ್ಮೋತ್ಸವ

30-09-2019 ರಿಂದ
08-10-2019 ರ ವರೆಗೆ



ಶ್ರೀ ವೆಂಕಟೇಶ್ವರನು ಶ್ರೀ ಹರಿಯು ಈತನೇ।
ಪಾವನಮಯವಾದ ವೈಕುಂಠ ಪತಿಯೂ ಈತನೇ॥

- ಅನ್ನಮಯ್ಯ



ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಾರ್ಷಿಕ ಬ್ರಹ್ಮೋತ್ಸವ

**23-11-2019**
ರಿಂದ
**01-12-2019**
ರ ವರೆಗೆ

**23-11-2019**
ಶನಿವಾರ
ಹಗಲು : ಧ್ವಜಾರೋಹಣ
ರಾತ್ರಿ : ಚಿಕ್ಕಶೇಷವಾಹನ

**24-11-2019**
ಭಾನುವಾರ
ಹಗಲು: ದೊಡ್ಡಶೇಷವಾಹನ
ರಾತ್ರಿ: ಹಂಸವಾಹನ

**25-11-2019**
ಸೋಮವಾರ
ಹಗಲು: ಮುತ್ತಿನಚಪ್ಪರ ವಾಹನ
ರಾತ್ರಿ: ಸಿಂಹವಾಹನ

**26-11-2019**
ಮಂಗಳವಾರ
ಹಗಲು:ಕಲ್ಪವೃಕ್ಷವಾಹನ
ರಾತ್ರಿ: ಹನುಮದ್ವಾಹನ

**27-11-2019**
ಬುಧವಾರ
ಹಗಲು:ಪಲ್ಲಕ್ಕಿ ಉತ್ಸವ
ಸಾಯಂಕಾಲ : ವಸಂತೋತ್ಸವ
ರಾತ್ರಿ: ಗಜವಾಹನ

**28-11-2019**
ಗುರುವಾರ
ಹಗಲು: ಸರ್ವಭೂಪಾಲವಾಹನ
ರಾತ್ರಿ:ಗರುಡವಾಹನ

**29-11-2019**
ಶುಕ್ರವಾರ
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**30-11-2019**
ಶನಿವಾರ
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**01-12-2019**
ಭಾನುವಾರ
ಹಗಲು: ಚಕ್ರಸ್ನಾನ, ಪಂಚಮೀತೀರ್ಥ
ರಾತ್ರಿ: ಧ್ವಜಾವರೋಹಣ

# ಭಗವದ್ಗೀತೆ



**ಪಶ್ಯೈತಾಂ ಪಾಂಡುಪುತ್ರಾಣಾಂ ಆಚಾರ್ಯ ಮಹತೀಂ ಚಮೂಮ್**
**ವ್ಯೂಢಾಂ ದ್ರುಪದ ಪುತ್ರೇಣ ತವ ಶಿಷ್ಯೇಣ ಧೀಮತಾ**

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 3)

**ಗುರುಗಳೇ, ದ್ರುಪದರಾಜನ ಮಗ ನಿಮ್ಮ ಶಿಷ್ಯ ಬುಧಿಶಾಲಿಯಾದ ಧೃಷ್ಟದ್ಯುಮ್ನ ಪಾಂಡವರ ಈ ದೊಡ್ಡ ದಂಡನ್ನು ಸಜ್ಜುಗೊಳಿಸಿರುವುದನ್ನು ನೋಡಿರಿ.**




ಅಭಯ ಗಿರಿವಾಸ ಶ್ರೀನಿವಾಸನೊ ನಮಗೆ
ಶುಭವೀವ ನಿತ್ಯ ಮಂದಹಾಸನೊ

ಧೇನಿಪರ ಮನೆಯ ಚಿಂತಾಮಣಿಯೊ ಸ್ವಾಮಿ
ನೀನೆ ಗತಿ ಎಂಬುವರ ಹೊಣೆಯೊ
ಜ್ಞಾನಮಯ ಜಗದ ಸಂದಣಿಯೋ ಪುಣ್ಯ -
ಕಾನನನಿವಾಸ ಸುರಖಣಿಯೋ

ಶರಣರಿಗೆ ವಜ್ರ ಪಂಜರನೊ ದುಷ್ಟ -
ದುರುಳ ದೈತ್ಯರಿಗೆಝು ಝರನೊ
ದುರಿತಕದಳಿಗೆ ಕುಂಜರನೊ ದೇವ -
ವರ ಕಲ್ಪ ಕಲ್ಪ ವಿಜರನೊ

ಪರಮೇಷ್ಠಿ ಶಿವರೊಳಗೆ ಇಪ್ಪನೊ ಇಂದು
ಮರುತನ್ನ ಪೆಗಲೇರಿ ಒಪ್ಪನೊ
ಶರಣರಿಗೆ ವರವೀಯಲು ತಪ್ಪನೊ ಚನ್ನ
ಸಿರಿ ವಿಜಯವಿಠಲ ತಿಮ್ಮಪ್ಪನೊ

- ಶ್ರೀ ವಿಜಯದಾಸರು



# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಪರಹಿತಮನುಕಂಪೇ ಭಾವಯಂತ್ಯಾಂ ಭವತ್ಯಾಂ ಸ್ಥಿರಮನುಪಧಿ ಹಾರ್ದಂ ಶ್ರೀನಿವಾಸೋ ದಧಾನಃ।

ಲಲಿತರುಚಿಷು ಲಕ್ಷ್ಮೀಭೂಮಿನೀಳಾಸು ನೂನಂ ಪ್ರಥಯತಿ ಬಹುಮಾನಂ ತ್ವತ್ಪ್ರತಿಚ್ಛಂದಬುದ್ಧ್ಯಾ ॥೩೬॥

ಹಿಂದಿನ ಪದ್ಯದಲ್ಲಿ ದಯಾದೇವಿಯ ನಿಯಮನದಿಂದ ಸರ್ವೇಶ್ವರನು ಪಡುವ ಪಾಡುಗಳನ್ನು ವರ್ಣಿಸಿದರು. ಹೀಗೆ ತನ್ನನ್ನು ಅನೇಕ ವಿಧವಾದ ಶ್ರಮಗಳಿಗೆ ಒಳಪಡಿಸುವ ದಯಾದೇವಿಯ ವಿಷಯದಲ್ಲಿ ಸರ್ವೇಶ್ವರನಿಗೆ ಸ್ವಲ್ಪವಾದರೂ ಮನಃಕಾಲುಷ್ಯವುಂಟೋ? ಎಂದರೆ, ಅದೇ ಒಂದು ಆಶ್ಚರ್ಯಕರವಾದ ಸಂಗತಿಯೆಂದು ಕವಿಯು ನಿರೂಪಿಸುತ್ತಾರೆ. ದಯಾದೇವಿಯ ವಿಷಯದಲ್ಲಿ ಮನಃಕಾಲುಷ್ಯವಿಲ್ಲದಂತೆ ವಿಶೇಷವಾದ ಪ್ರೇಮವನ್ನೇ ಇಟ್ಟಿರುವನೆಂಬುದು ಮಾತ್ರವಲ್ಲ - ತನ್ನ ವಕ್ಷಃ ಸ್ಥಲದಲ್ಲಿ ಸರ್ವದಾ ವಾಸಿಸುತ್ತಿರುವ ಶ್ರೀದೇವಿ, ಭೂದೇವಿ, ನೀಳಾದೇವಿಗಳಲ್ಲಿಯೂ, ದಯೆಯ ಪ್ರತಿಬಿಂಬಗಳೇ ಅವರೆಂಬ ಭಾವನೆಯಿಂದ ವಿಶೇಷವಾದ ಗೌರವವನ್ನಿಟ್ಟಿರುತ್ತಾನೆ. ಇದು ನಿಶ್ಚಯ. ಆದರಿಂದಲೇ ದಯಾದೇವಿಯ ಮಹಿಮೆಯು ಅದ್ಭುತವಾದುದೆಂದು ಒಂದು ಉತ್ಪ್ರೇಕ್ಷೆಯಿಂದ ಹಿಂದೆ ಬಂದ ಸಂದೇಹಕ್ಕೆ (ದಯಾದೇವಿಯ ವಿಷಯದಲ್ಲಿ ಮನಃ ಕಾಲುಷ್ಯವುಂಟೋ ಎಂಬ ಸಂದೇಹಕ್ಕೆ) ಸಮಾಧಾನವನ್ನು ಹೇಳುತ್ತಾ ಈ ಪದ್ಯದಲ್ಲಿ ದಯಾದೇವಿಯನ್ನು ಹೊಗಳುತ್ತಾರೆ. ದಯಾದೇವಿಯು ಎಲ್ಲ ಕಾಲದಲ್ಲಿಯೂ ಪ್ರತಿಕೂಲಾಚರಣೆಯುಳ್ಳ ಸಂಸಾರಿಗಳಾದ ಚೇತನರ ವಿಷಯದಲ್ಲಿ ಹಿತವನ್ನೇ ಚಿಂತಿಸುತ್ತಲೂ ಮಾಡುತ್ತಲೂ ಇರುವಳು. ಆದ್ದರಿಂದಲೇ ಅವರ ವಿಷಯವಾಗಿ ಭಗವಂತನಿಗೆ ಸ್ಥಿರವಾದುದೂ, ಅವ್ಯಾಜವಾದುದೂ ಆದ ಒಂದು ಪ್ರೇಮ. ಹೀಗಿರುವಾಗ, ಭಗವಂತನು ದಯಾದೇವಿಯಲ್ಲಿರುವ ಪರಹಿತ ಚಿಂತನವೆಂಬ ಗುಣವನ್ನು ಶ್ರೀ ಭೂ ನೀಳಾದೇವಿಗಳಲ್ಲಿಯೂ ವಿಶೇಷವಾಗಿ ಕಂಡಾಗ - 'ಇವರು ದಯಾದೇವಿಯ ಪ್ರತಿಬಿಂಬಗಳೇ ಸರಿ; ಏಕೆಂದರೆ ಬಿಂಬದಲ್ಲಿರುವ ಗುಣಗಳೇ ಅಲ್ಲವೇ ಪ್ರತಿಬಿಂಬಗಳಲ್ಲಿಯೂ ತೋರುವುದು ನಾನು ಇದುವರೆಗೂ ದಯಾದೇವಿಯಲ್ಲಿ ಅನುಭವಿಸಿಕೊಂಡು ಬರುತ್ತಿರುವ ಗುಣವು ಇವರಲ್ಲಿಯೂ ಕಂಡು ಬರುವುದರಿಂದ ಇವರು ದಯಾದೇವಿಯ ಪ್ರತಿಬಿಂಬಗಳೆ' ಎಂದು ನಿಶ್ಚಯಿಸಿ, ಅವಳಲ್ಲಿರುವಂತೆ ಅವರಲ್ಲಿಯೂ ವಿಶೇಷವಾದ ಗೌರವವನ್ನಿಟ್ಟು ತನ್ನ ಎದೆಯಲ್ಲಿಯೂ ಸಮೀಪದಲ್ಲಿಯೂ ಅವರನ್ನು ಇಟ್ಟು ಕೊಂಡಿರುವನು. ಇದೇ ಸರ್ವೇಶ್ವರನು ದಯೆಯನ್ನು ಕೊಂಡಾಡುವ ರೀತಿ ಎಂಬುದು ಕವಿಯ ಚತುರೋಕ್ತಿ. ಸರ್ವೇಶ್ವರನ ದೇವಿಯರೆಲ್ಲರೂ ಚೇತನ ಸಂರಕ್ಷಣದಲ್ಲಿ ಒಂದೇ ಅಭಿಪ್ರಾಯವುಳ್ಳವರಾಗಿ ಪರಮ ದಯೆಯಿಂದ ಪರಮ ಪುರುಷನಿಗೆ ಪುರುಷಕಾರವನ್ನು ಮಾಡಿ ಚೇತನನನ್ನು ರಕ್ಷಿಸುವರೆಂಬ ಶಾಸ್ತ್ರಾರ್ಥವು ಇಲ್ಲಿ ವಿವಕ್ಷಿತವಾದುದು.

ಈ ಪದ್ಯದಲ್ಲಿರುವ "ಪರಹಿತಮನುಕಂಪೇ ಭಾವಯಂತ್ಯಾಂ ಭವತ್ಯಾಂ" ಎಂಬುದು ತಾತ್ಪರ್ಯ ಚಂದ್ರಿಕೆಯಲ್ಲಿರುವ "ಪರಹಿತಪ್ರಾವಣ್ಯಂ ದಯಾ" - ಎಂದರೆ, ಪರಹಿತದಲ್ಲಿ ಆಸಕ್ತವಾಗಿರುವಿಕೆಯೇ ದಯೆಯೆಂದು ನಿಷ್ಕರ್ಷಿಸಿರುವ ಅರ್ಥವನ್ನು ಸ್ಮರಣೆಗೆ ತರುತ್ತದೆ. "ಸ್ಥಿರಮನುಪಧಿ ಹಾರ್ದಂ" ಎನ್ನುವುದರಿಂದ "ಜಲಧೇರಿವ ಶೀತತಾ" - ಎಂಬ ಪದ್ಯದಲ್ಲಿ ಹೇಳಿರುವಂತೆ ಸರ್ವೇಶ್ವರನಿಗೆ ದಯೆಯು ಸ್ವಾಭಾವಿಕವಾದ ಗುಣವೆಂಬುದು ವ್ಯಕ್ತವಾಗುವುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸಂಪುಟ - 50 ಸಂಚಿಕೆ - 5

ಶ್ರೀ ವಿಕಾರಿನಾಮ ಸಂವತ್ಸರ
ಆಶ್ವಯುಜ - ಕಾರ್ತಿಕ ಮಾಸ
ಸಂಚಿಕೆ




## ಅಕ್ಟೋಬರ್ 2019

## ವಿಷಯಸೂಚಿಕೆ


| | |
|---|---|
| ಸಂಪಾದಕೀಯ | 6 |
| ಶ್ರೀ ದೇವಿ ಭೂದೇವಿ ಸಮೇತ ಶ್ರೀವೇಂಕಟೇಶ್ವರ ಸ್ವಾಮಿಯ ದೇವಾಲಯ- ತೊಂಡಮನಾಡು | 7 |
| - ಶ್ರೀಮತಿ. ಗೀತಾ | |
| ಜಯ ಜಯ ಹೇ ಮಹಿಷಾಸುರ ಮರ್ದಿನಿ | 11 |
| - ಎಸ್. ವೆಂಕಟರಾಘವನ್ | |
| ಪೃಥುಮಹಾರಾಜನ ಭಗವದ್ಧಾಮ ಗಮನ | 15 |
| - ಡಿ.ಎಸ್.ಬದ್ರಿನಾಥ್ | |
| ತಿರುಪತಿ ಶ್ರೀ ವೆಂಕಟೇಶ್ವರ | 18 |
| - ದಿ॥ಬಿ.ಎನ್. ಶ್ರೀನಿವಾಸನ್ | |
| ನವರಾತ್ರಿಯ ಸರಸ್ವತಿ ಪೂಜೆಯು ಹೀಗಿರಲಿ | 21 |
| - ಬಿ. ಗೋಪಾಲಾಚಾರ್ | |
| ವಾಲ್ಮೀಕಿ ಜಯಂತಿ | 23 |
| - ಶ್ರೀಮತಿ. ಕೆ.ವಿ. ಪದ್ಮಾವತಿ | |
| ಕಾರ್ತೀಕ ದೀಪ ಸಂಭ್ರಮ | 31 |
| - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | |
| ಹಸಿರು ತೋರಣ | |
| ತಿರುಮಲೆಯಲ್ಲಿ ಅಖಂಡ ಬ್ರಹ್ಮೋತ್ಸವದಲ್ಲಿ ಅಷ್ಟದಿಕ್ಪಾಲಕರು | 34 |
| - ಕೆ. ನರಸಿಂಹಮೂರ್ತಿ | |
| ಎಚ್ಚರಿಕೆ - ಕರ್ತವ್ಯೋಪದೇಶ | 39 |
| - ಡಿ.ಎಸ್. ಭೂಮಿಕ | |
| ಆರೋಗ್ಯದ ಮಹಾಪುರ ನೇರಳೆ | 41 |
| - ಶ್ರೀಮತಿ | |
| ದಿವ್ಯಕ್ಷೇತ್ರ ತಿರುಮಲೆ | 43 |
| - ಶ್ರೀಮತಿ.ಬಿ.ಪದ್ಮಜ | |
| ಕರ್ನಾಟಕದಲ್ಲಿ ಕಾವೇರಿ ತೀರದ ಪುಣ್ಯ ಕ್ಷೇತ್ರದಲ್ಲಿ | 46 |
| - ಶ್ರೀಮತಿ. ಸುಮ ಚಂದ್ರಶೇಖರ್ | |
| ಶ್ರೀ ಕೃಷ್ಣಾವತಾರ ಹಿನ್ನೆಲೆ | 51 |
| - ಶ್ರೀಮತಿ. ಸುಧಾಮಧುಸೂದನ್ | |


ಮುಖಚಿತ್ರ - ಶ್ರೀದೇವಿ ಭೂದೇವಿ ಸಮೇತವಾಗಿ ಆನಂದನಿಲಯನು

ಹಿಂಬದಿಚಿತ್ರ - ಶ್ರೀ ಸ್ವಾಮಿಯ ಪುಷ್ಕರಿಣಿಯಲ್ಲಿ ಸ್ವಾಮಿಯವರ ಚಕ್ರಸ್ನಾನ, ಉತ್ಸವ ವೈಭವ ದೃಶ್ಯಗಳು


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

**24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ**
0877 - 2277777,
2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು www.tirumala.org ಮೂಲಕ ವೀಕ್ಷಿಸಬಹುದು.





ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org

# ಸಂಪಾದಕೀಯ

## ಪರಂಧಾಮನ ದಶದಿವಸಗಳ ಹಬ್ಬದಲ್ಲಿ ಪಾಲ್ಗೊಳ್ಳೋಣ ಬನ್ನಿ !



ವಿಶ್ವಾಂತರಾಳವೆಲ್ಲಾ ಅದ್ಭುತವಾಗಿ ಅನಂತವಾಗಿ ವ್ಯಾಪಿಸಿರುವ ದಿವ್ಯವಾದ ಭವ್ಯವಾದ ಒಂದು ತೇಜಃಪುಂಜ ಶ್ರೀ ವೈಕುಂಠದಿಂದ ನೇರವಾಗಿ ಧರೆಗಿಳಿದು ಬಂದು, ಸುಮಾರು ಐದು ಸಾವಿರ ವರ್ಷಗಳ ಹಿಂದೆ, ಕನ್ಯಾಮಾಸ (ಸೌರಮಾಸ), ಶ್ರವಣನಕ್ಷತ್ರದಂದು,ವೆಂಕಟಾಚಲದಲ್ಲಿ ಸ್ವಯಂಭುವಾಗಿ ಉದ್ಭವ ರೂಪದಲ್ಲಿ ಪ್ರಕಟಿತಗೊಂಡು ಪರಮಾದ್ಭುತ ಕಾಂತಿಗಳಿಂದ ಪ್ರಕಾಶಿಸುತ್ತಿದೆ. ಅಂದಿನಿಂದ ಆ ದಿವ್ಯಮಂಗಳ ಮೂರ್ತಿಯಾದ ಶ್ರೀ ವೇಂಕಟೇಶ್ವರನೆಂದೂ, ಆ ಪುಣ್ಯಸ್ಥಳ ಶ್ರೀ ವೇಂಕಟಾಚಲ ಎಂದೂ ಕರೆಯಲ್ಪಡುತ್ತಿದೆ. ಬೇಡಿದ ವರಗಳನ್ನು ನೀಡುವವನು, ಭಕ್ತರ ಕೂಗಿಗೆ ಕೂಡಲೇ ಓಗೂಡುವವನು, ಭಕ್ತರ ಪಾಲಿನ 'ಕಲ್ಪವೃಕ್ಷ', ಕಾಮಧೇನುವಾಗಿ, ರೋಗಗಳನ್ನು ಪರಿಹರಿಸುವ ದಿವ್ಯೌಷಧವಾಗಿ ಬ್ರಹ್ಮಾದಿ ದೇವತೆಗಳಿಂದ ಕೀರ್ತಿಸಲ್ಪಡುತ್ತಿರುವ ಶ್ರೀ ವೆಂಕಟೇಶ್ವರನಿಗೆ ಅಂದಿನ ಕಾಲದಿಂದಲೂ ಅನೇಕಾನೇಕ ಸೇವೆಗಳು, ಅನೇಕಾನೇಕ ಉತ್ಸವಗಳು ನಡೆಯುತ್ತಿವೆ. ಅವುಗಳೆಲ್ಲದರಲ್ಲೂ ಪ್ರತೀ ಬಾರಿ ವರ್ಷಕ್ಕೆ ಒಮ್ಮೆ ಹತ್ತು ದಿನಗಳ ಕಾಲ ನಡೆಯುವ ಬ್ರಹ್ಮೋತ್ಸವಗಳ ವೈಭವವನ್ನು ವಿವರಿಸಲು ಅಸಾಧ್ಯ.

ಅಂದು ಸ್ವಯಂವ್ಯಕ್ತನಾಗಿ ನಿಂತ ಶ್ರೀ ವೇಂಕಟೇಶ್ವರ ಸ್ವಾಮಿಗೆ ಕನ್ಯಾಮಾಸ ಶ್ರವಣನಕ್ಷತ್ರದಂದು ಪೂರ್ತಿಯಾಗುವಂತೆ ಹತ್ತುದಿನಗಳ ಕಾಲ ಚತುರ್ಮುಖ ಬ್ರಹ್ಮದೇವನು ಅತ್ಯಂತ ವೈಭವದಿಂದ ನಿರ್ವಹಿಸಿದ ಬ್ರಹ್ಮೋತ್ಸವಗಳೆಂದು ಇಂದಿಗೂ ಅದ್ದೂರಿಯಿಂದ ನಡೆಯುತ್ತಿವೆ. ಈ ವರ್ಷ ಕನ್ಯಾಮಾಸ, ಅಶ್ವಯುಜಮಾಸದೊಂದಿಗೆ ಸೇರಿರುವುದರಿಂದ ತಿರುಮಲೆಯ ಶ್ರೀಹರಿಯ ಬ್ರಹ್ಮೋತ್ಸವಗಳು ಅಶ್ವಯುಜ ಶುದ್ಧ ಬಿದಿಗೆ ಸೋಮವಾರ (ಸೆಪ್ಟೆಂಬರ್ 30 ರಾತ್ರಿ) ಯಿಂದ ಪ್ರಾರಂಭವಾಗಿ ಅಶ್ವಯುಜ ಶುದ್ಧ ದಶಮಿ ಮಂಗಳವಾರ ಶ್ರವಣನಕ್ಷತ್ರದ ಬೆಳಗ್ಗೆ ಚಕ್ರಸ್ನಾನ (ಅಕ್ಟೋಬರ್ 8 ಬೆಳಗ್ಗೆ) ದೊಂದಿಗೆ ಸಮಾಪ್ತಿಯಾಗುತ್ತವೆ.

ಮೊದಲದಿನದ ರಾತ್ರಿ ದೊಡ್ಡ ಶೇಷವಾಹನದೊಂದಿಗೆ ಪ್ರಾರಂಭವಾಗಿ ಶ್ರೀ ಹರಿಯ ಬ್ರಹ್ಮೋತ್ಸವಗಳು, ಪ್ರತೀದಿನ ಬೆಳಗ್ಗೆ ಒಂದೊಂದು ವಾಹನದ ಮೇಲೆ ಒಂದೊಂದು ರೀತಿಯ ಸೊಬಗಿನಿಂದ ಭಕ್ತರನ್ನು, ಮೈಮರೆಯುವಂತೆ ಮಾಡುತ್ತಾ ಶ್ರೀನಿವಾಸನ ವಾಹನ ಸೇವೆಗಳು ಆನಂದದ ಕಡಲಿನಲ್ಲಿ ತೇಲುವಂತೆ ಮಾಡುತ್ತವೆ. ಒಂದೊಂದು ಬಾರಿಯೂ ಆ ದೇವದೇವನ ಅಲಂಕಾರ ಅತ್ಯದ್ಭುತವಾಗಿರುತ್ತದೆ! ಒಂದೊಂದು ಉತ್ಸವದಲ್ಲೂ ಶ್ರೀ ಹರಿಯ ವೈಭವ ವರ್ಣನಾತೀತ! ಶ್ರೀ ಹರಿಯ ವಾಹನ ಸೇವೆಯಲ್ಲಿ ಪ್ರತೀದಿನವೂ ಹೊಸತನ ಕಂಡು ಬರುತ್ತದೆ. ಪ್ರತಿಯೊಂದು ಹೊತ್ತಿನ ವೈಭವವೂ ಆಶ್ಚರ್ಯಕ್ಕೀಡು ಮಾಡುತ್ತದೆ. ಅವುಗಳೆಲ್ಲದರಲ್ಲೂ ಮುಖ್ಯವಾಗಿ ಐದನೆಯ ದಿನ ರಾತ್ರಿ ನಡೆಯುವ " ಶ್ರೀಹರಿಯ ಗರುಡ ಸೇವೆ", ಎಂಟನೆಯ ದಿನ ಬೆಳಗ್ಗೆ 'ರಥೋತ್ಸವ'ದಲ್ಲಿ ಪಾಲ್ಗೊಳ್ಳುವ ಲಕ್ಷಾಂತರ ಭಕ್ತರ ಸಂಭ್ರಮ ಹೇಳಲು ಸಾಧ್ಯವಿಲ್ಲ ವಿವರಿಸಲು ಮಾತುಗಳಿಲ್ಲ.

ತಿರುಮಲೆಯ ಬ್ರಹ್ಮೋತ್ಸವಗಳಲ್ಲಿ ಶ್ರೀ ಹರಿಯ ವಾಹನ ವೈಭವ ಒಂದೆಡೆಯಾದರೆ, ಆ ವಾಹನ ಸೇವೆಗಳು ನಡೆಯುವ ಪ್ರಾಕಾರದಲ್ಲಿ ಸಾಲುಸಾಲಾಗಿ ಭಕ್ತರುಗಳು ಮೈಮರೆಯುವಂತೆ ಮಾಡುವ ಭಜನೆಗಳು, ನೃತ್ಯಗಳು, ವಿನ್ಯಾಸಗಳು, ವೇಷಭೂಷಣಗಳು, ಸಂಕೀರ್ತನೆಗಳು ವೇದಪಾರಾಯಣೆ, ದಿವ್ಯ ಪ್ರಬಂಧಗಾನ, ಸಾಹಿತ್ಯ ಪ್ರಸಂಗಗಳು. ಹೀಗೇ ಒಂದೇ ಎರಡೇ!ಹೇಳಲು ಸಾಧ್ಯವಿಲ್ಲ! ಅವನ್ನು ವರ್ಣಿಸಲು ಅಸದಳವಾದುವು! ಅವನ್ನೆಲ್ಲಾ ಪ್ರತ್ಯಕ್ಷವಾಗಿ ನೋಡುವುದಕ್ಕೆ ಎರಡು ಕಣ್ಣುಗಳೂ ಸಾಲುವುದಿಲ್ಲ.

ಬ್ರಹ್ಮೋತ್ಸವದಲ್ಲಿ ಶ್ರೀ ಹರಿಯ ವಾಹನ ವೈಭವದೊಂದಿಗೆ ವಿಚಿತ್ರ ವಿಚಿತ್ರವಾಗಿ ವಿವಿಧ ರೀತಿಯಲ್ಲಿ ಪ್ರಕಾಶಿಸುತ್ತಾ ಸಂತೋಷವನ್ನು ನೀಡುವ ವಿದ್ಯುತ್ ಅಲಂಕರಣ ದೃಶ್ಯಗಳನ್ನು , ಪುಷ್ಪಾಲಂಕರಣೆಯನ್ನು, ಮ್ಯೂಜಿಯಂ ಅನ್ನು ನೋಡುವುದಕ್ಕೆ ಲಕ್ಷಾಂತರ ಭಕ್ತರು ತಿರುಮಲೆಗೆ ಬರುತ್ತಾರೆ. ಶ್ರೀ ವರಾಹಸ್ವಾಮಿಯವರ ಆಲಯ, ಈ ಸ್ವಾಮಿ ಪುಷ್ಕರಿಣಿ, ಕ್ಯೂಷೆಡ್, ಶ್ರೀ ಹರಿಯ ದೇವಾಲಯ, ಅನ್ನ ಪ್ರಸಾದದ ಭವನ, ಛತ್ರಗಳು ಬಸ್ಸ್ಟ್ಯಾಂಡ್‌ಗಳು, ಉದ್ಯಾನವನಗಳು ಹೀಗೇ ತಿರುಮಲೆಯಲ್ಲಿ ಎಲ್ಲಿ ನೋಡಿದರೂ ಭಕ್ತರ ಕೋಲಾಹಲ ಕಂಡು ಬರುತ್ತದೆ.

ಇಷ್ಟೊಂದು ಭಕ್ತ ಜನ ಸಂದಣಿಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು ತಿರುಮಲೆ ತಿರುಪತಿ ದೇವಸ್ಥಾನದವರು ಅಹೋರಾತ್ರಿ ಬಹಳ ಎಚ್ಚರಿಕೆಯಿಂದ ಕ್ಯೂಲೈನ್‌ಗಳಲ್ಲಿ, ಅನ್ನದಾನ ಕೇಂದ್ರಗಳಲ್ಲಿ , ವಾಹನ ಸೇವೆಯಲ್ಲಿ ಹೀಗೆ ಎಲ್ಲಾ ಕಡೆಗಳಲ್ಲೂ ದೇವಸ್ಥಾನದವರ ಪರ್ಯವೇಕ್ಷಣಗಳಲ್ಲಿ ಉದ್ಯೋಗಿಗಳು, ಶ್ರೀವಾರಿ ಸೇವಕರು, ಸ್ಕೌಟ್ಸ್ ಅವರು, ಗೈಡ್ಸ್, ಪೋಲೀಸರು, ಹೋಂಗಾರ್ಡ್‌ಗಳು, ಆರೋಗ್ಯ ಶಾಖೆಯವರು ಹೀಗೆ ಅನೇಕಾನೇಕರು ಭಕ್ತರ ಸೇವೆಗಳಿಗೆ ಅಂಕಿತವಾಗಿರುತ್ತಾರೆ. ಆದರೆ ಶ್ರೀ ಹರಿಯ ದರ್ಶನಕ್ಕಾಗಿ ಬರುವ ಭಕ್ತರು ಎಲ್ಲಾ ಕಡೆಗಳಲ್ಲೂ ಜಾಗರೂಕತೆಯಿಂದ ಇದ್ದು ಎಲ್ಲೂ ಗಲಾಟೆ, ಕೋಪತಾಪಗಳಿಗೆ ಗುರಿಯಾಗದೇ ಕ್ಯೂಲೈನ್‌ಗಳಲ್ಲಿ ಸಹನೆಯಿಂದ ಸಹ ಭಕ್ತರೊಂದಿಗೆ ನಡೆಯುತ್ತಾ ದೇವಸ್ಥಾನದವರಿಗೆ ಸಹಕರಿಸುತ್ತಾ ಪ್ರಶಾಂತವಾಗಿ ತಮ್ಮ ತಿರುಮಲೆಯ ಯಾತ್ರೆಯನ್ನು ಸಂಪೂರ್ಣವಾಗಿ ಜಯಪ್ರದ ಗೊಳಿಸಿಕೊಳ್ಳಬೇಕೆಂದು ಆಶಿಸುತ್ತಾ, "ತಿರುಮಲೇಶನ ದಶ ದಿನೋತ್ಸವಗಳ ಸಂಭ್ರಮಕ್ಕೆ ಹಾರ್ದಿಕ ಸ್ವಾಗತವನ್ನು" ಬಯಸುತ್ತಿದೆ ನಮ್ಮ /ನಿಮ್ಮ 'ಸಪ್ತಗಿರಿ' ಪತ್ರಿಕೆ!

**ಓಂ ನಮೋ ವೇಂಕಟೇಶಾಯ**

ನಮ್ಮ ದೇವಾಲಯ



# ಶ್ರೀದೇವಿ ಭೂದೇವಿ ಸಮೇತ ಶ್ರೀವೇಂಕಟೇಶ್ವರ ಸ್ವಾಮಿಯ ದೇವಾಲಯ-ತೋಂಡಮನಾಡ

- ತೆಲುಗು ಮೂಲ: ಶ್ರೀಮತಿ. ಎಂ.ಉತ್ತರಫಾಲ್ಗುಣಿ

ಅನುವಾದ: ಶ್ರೀಮತಿ.ಗೀತಾ

ತಿರುಮಲೆ ಕ್ಷೇತ್ರಕ್ಕೆ ಸಾಟಿಯಂತೆ ವೈಭವವನ್ನು, ಎಣೆಯಿಲ್ಲದ ಪ್ರಾಶಸ್ತ್ಯವನ್ನು ಸಂಪಾದಿಸಿದ ಆಲಯಗಳಲ್ಲಿ ತೊಂಡಮನಾಡು ಕೂಡಾ ಒಂದು. ತೊಂಡಮಾನರಾಜನು ಕೋರಿಕೆಯ ಪ್ರಕಾರ ಶ್ರೀ ವೇಂಕಟೇಶ್ವರನು ಶ್ರೀದೇವಿ ಭೂದೇವಿ ಸಮೇತವಾಗಿ ಬಂದು ನೆಲಸಿದ ಆಲಯವು ಇಲ್ಲಿದೆ. ಆಕಾಶರಾಜನು ಪರಿಪಾಲಿಸುತ್ತಿದ್ದ ನಾರಾಯಣವನವೆಂಬ ರಾಜ್ಯವನ್ನು ಸ್ವಲ್ಪ ಪಡೆದುಕೊಂಡು ತನ್ನ ರಾಜಧಾನಿಯನ್ನು ಇಲ್ಲಿ ನೆಲೆಗೊಂಡಿದ್ದಾನೆ. ತೊಂಡಮಾನರಾಜನ ಹೆಸರಿನಿಂದಲೇ ತೊಂಡಮನಾಡೆಂದೂ ನಂತರದಲ್ಲಿ ತೊಂಡಮಂಡಲವೆಂದು ಸಹಾ ಕರೆಯಲ್ಪಟ್ಟಿದೆ. ವಿಜಯನಗರದ ಚಕ್ರವರ್ತಿಗಳ ಕಾಲದವರೆಗೂ ಈ ಪ್ರಾಂತ್ಯದ ಭಾಗವು ಆ ಹೆಸರಿನಿಂದಲೇ ಪ್ರಸಿದ್ಧಿ ಪಡೆದಿದೆ. ಇದು ತಿರುಪತಿಯಿಂದ 30 ಕಿ.ಮೀ ದೂರದಲ್ಲಿಯೂ, ಕಾಳಹಸ್ತಿಯಿಂದ ಸುಮಾರು 5 ಕಿ.ಮೀ ದೂರದಲ್ಲಿದೆ.

## ಸ್ಥಳಪುರಾಣ

ಈ ತೊಂಡಮಾನರಾಜನು ಪರಿಪಾಲಿಸುತ್ತಿದ್ದ ರಾಜ್ಯಕ್ಕೆ ಬಂದು ಸ್ವಾಮಿಯು ನೆಲೆಯೂರಿ ನಿಂತಿರುವುದರ ಹಿಂದೆ ಎಷ್ಟೋ ಕಥೆಗಳಿವೆ. ಈತನು ತಿರುಮಲೆಯ ಸ್ವಾಮಿಯವರಿಗೆ ಅನನ್ಯ ಭಕ್ತನು. ತೊಂಡಮಾನ ಚಕ್ರವರ್ತಿ ಪ್ರತಿನಿತ್ಯ ಸುರಂಗ ಮಾರ್ಗದಲ್ಲಿ ತಿರುಮಲೆಗೆ ಹೋಗಿ ಸ್ವಾಮಿಯ ಪಾದಸೇವೆ ಮಾಡಿದ ನಂತರವೇ ರಾಜ್ಯಪರಿಪಾಲನಾ ಕಾರ್ಯಗಳಲ್ಲಿ ನಿರತನಾಗುವನು. ಇದೇ ನಿಟ್ಟಿನಲ್ಲಿ, ಒಂದು ದಿನ ಯುದ್ಧದಲ್ಲಿ ತನಗೆ ಸಹಾಯ ಮಾಡಬೇಕೆಂದು ಕೇಳಲು ಅವಸರವಾಗಿ ಸ್ವಾಮಿ ಮಂದಿರದೊಳಗೆ ಪ್ರವೇಶಿಸಿದ್ದಾನೆ. ಆ ವೇಳೆಯಲ್ಲಿ ಸ್ವಾಮಿಯು ಶ್ರೀದೇವಿ-ಭೂದೇವಿಯರೊಂದಿಗೆ ಏಕಾಂತದಲ್ಲಿದ್ದಾನೆ. ತೊಂಡಮಾನನನ್ನು ನೋಡುತ್ತಲೇ ರಾಣಿಯರು ಒಬ್ಬರು ಬಂಗಾರದ ಬಾವಿಯೊಳಕ್ಕೆ, ಇನ್ನೊಬ್ಬರು ಸ್ವಾಮಿಯ ವಕ್ಷಃಸ್ಥಳಕ್ಕೆ ತೂರಿಕೊಂಡು ಹೋದದ್ದಾಯಿತು. ಇದರಿಂದ ಸ್ವಾಮಿಗೆ ಅದೆಷ್ಟೋ ಕೋಪ ಬಂದಿದೆ. ಇನ್ನು ಮುಂದೆ ನೀನಿಲ್ಲಿಗೆ ಬರುವುದು ಬೇಡ. ನಾನೇ ನಿನ್ನ ಹತ್ತಿರ ವಿರಚಾನದಿಯ ಸಮೀಪಕ್ಕೆ ಬರುತ್ತೇನೆ ಎಂದು ಸ್ವಾಮಿ ಹೇಳಿದನೆಂದು ಹೇಳುವುದು ಒಂದು ಬಗೆಯ ಕಥೆಯಾದರೆ, ವಯಸ್ಸಾಗುತ್ತಲೇ ತಿರುಮಲೆಗೆ ಬರಲು ಕೈಲಾಗುತ್ತಿಲ್ಲ ಎಂಬ ಬೇಡಿಕೆ ಮೇರೆಗೆ ಸ್ವಾಮಿಯು ತೊಂಡಮನಾಡಿಗೇ ಬಂದು ನೆಲೆ ನಿಂತನೆಂಬುದು ಇನ್ನೊಂದು ಕಥೆ.

ಒಂದು ಬಾರಿ ಒಬ್ಬ ಬ್ರಾಹ್ಮಣನು ತಾನು ಕಾಶೀಯಾತ್ರೆಗೆ ಹೊರಡುವಾಗ ತೊಂಡಮಾನನಲ್ಲಿಗೆ ಬಂದು, ಕಾಶೀಕ್ಷೇತ್ರದಿಂದ, ಹಿಂತಿರುಗಿ ಬರುವವರೆಗೆ ತನ್ನ ಸತಿ - ಸುತರನ್ನು ಸಂರಕ್ಷಿಸಬೇಕೆಂದು ಬೇಡಿಕೊಂಡಿದ್ದಾನೆ. 'ಹಾಗೇ ಆಗಲಿ' ಎಂದು ಭರವಸೆಯನ್ನಿತ್ತು ಅವರನ್ನು ಒಂದು ಕೋಣೆಯಲ್ಲಿಟ್ಟು ಅವರಿಗೆ ಅನ್ನಪಾನಾದಿಗಳನ್ನು ಕೊಡದಲೇ ಅವರನ್ನು ರಕ್ಷಿಸುವುದನ್ನೇ ಮರೆತಿದ್ದಾನೆ. ನಂತರ ಸ್ವಲ್ಪ ದಿನಗಳಲ್ಲೇ ವಿಪ್ರನು ಒಂದು ತನ್ನ ಸತಿ-ಸುತರನ್ನು ತನಗೊಪ್ಪಿಸಬೇಕೆಂದು ಕೋರಿದ್ದಾನೆ. ಆಗ ಅವರನ್ನು ಪೂರ್ತಿಯಾಗಿ ಮರೆತು ಹೋಗಿರುವ ಸಂಗತಿ ಜ್ಞಾಪಕಕ್ಕೆ ಬಂದಿದೆ. ಆದರೆ ರಾಜನು ವಿಪ್ರನಿಗೆ ನಿನ್ನ ಸತಿಸುತರು ದರ್ಶನಕ್ಕೆಂದು ತಿರುಮಲೆಗೆ ಹೋಗಿದ್ದಾರೆಂದೂ, ನಾಳೆ ಬರುತ್ತಾರೆಂದೂ ಆಗ ಬಂದು ಕರೆದುಕೊಂಡು ಹೋಗುವಂತೆ ತಿಳಿಸುತ್ತಾನೆ. ಅನಂತರ ಸ್ವಾಮಿಯ ಹತ್ತಿರ ಬಂದು ಅವರನ್ನು ಬದುಕಿಸಿಕೊಡಬೇಕೆಂದು ಬೇಡಿ ಕೊಂಡಿದ್ದಾನೆ. ವಿಧಿಯಿಲ್ಲದೇ ಸ್ವಾಮಿ ಅವರನ್ನು ಬದುಕಿಸಿ ಕೊಟ್ಟಿದ್ದಾನೆ. ಆಗಿನಿಂದ ಸ್ವಾಮಿ ತೊಂಡಮಾನನೊಂದಿಗೆ ಮಾತನಾಡುವುದನ್ನೇ ಬಿಟ್ಟುಬಿಟ್ಟಿದ್ದಾನೆಂದು ಮತ್ತೊಂದು ದಂತ ಕಥೆ. ಕಾರಣಗಳೇನೇ

ಇದ್ದರೂ ಸ್ವಾಮಿ ತೊಂಡಮಾನ ರಾಜನಲ್ಲಿಗೆ ಬಂದು ಪೂಜೆಗಳನ್ನು ಕೈ ಗೊಂಡಿದ್ದಾನೆ. ಈ ತೊಂಡಮಾನನಾರು? ಸ್ವಾಮಿಗೂ ಆತನಿಗೂ ಇದ್ದ ಸಂಬಂಧವಾದರೂ ಏನು? ಆತನ ಪೂರ್ವ ಜನ್ಮ ವೃತ್ತಾಂತ ವೇನು ಎಂಬುದನ್ನು ತಿಳಿದು ಕೊಳ್ಳೋಣ.



## ತೊಂಡಮಾನನ ಪೂರ್ವಜನ್ಮ ವೃತ್ತಾಂತ

ಪೂರ್ವದಲ್ಲಿ ಗೋಪಿನಾಥನೆಂಬ ವೈಖಾನಸ ಮಹಾ ಮುನಿ ಶ್ರೀಕೃಷ್ಣನ ಮೇಲೆ ಭಕ್ತಿಭಾವವನ್ನು ಬೆಳಸಿಕೊಂಡಿದ್ದಾನೆ. ಆದ್ದರಿಂದಲೇ ಶ್ರೀಕೃಷ್ಣ ಭಗವಂತನನ್ನು ಪ್ರತ್ಯಕ್ಷವಾಗಿ ಸಂದರ್ಶಿಸಲೆಂದೇ ನಿದ್ರಾಹಾರಗಳನ್ನು ತೊರೆದು ಅಖಂಡ ದೀಕ್ಷೆಯಿಂದ ತಪವನ್ನಾಚರಿಸಿದ್ದಾನೆ. ಆ ತಪಸ್ಸಿಗೆ ಸಂತೋಷಗೊಂಡ ಶ್ರೀಮಹಾವಿಷ್ಣುವು ನಿನಗೇನು ವರಬೇಕೋ ಕೋರಿಕೋ ಎಂದಿದ್ದಾನೆ. ಅದಕ್ಕೆ ಆತನು ಕೃಷ್ಣಾವತಾರವನ್ನು ಕಣ್ಣಾರೆ ವೀಕ್ಷಿಸಿ ಸೇವಿಸಬೇಕೆಂಬ ಬಯಕೆಯಿದೆ. ಅದನ್ನೇ ಅನುಗ್ರಹಿಸು ಎಂದು ಕೋರಿದ್ದಾನೆ. ಅದಕ್ಕೇ ಸ್ವಾಮಿ ಪ್ರಸ್ತುತ ಶೇಷಾದ್ರಿಯಲ್ಲಿ ಶ್ರೀ ಕೃಷ್ಣನೇ ಶ್ರೀನಿವಾಸನ ಅವತಾರದಲ್ಲಿ ಒಂದು ಪೊದೆಯಲ್ಲಿದ್ದಾನೆ. ಆ ಸ್ವಾಮಿಯನ್ನೇ ಆರಾಧಿಸಿ ಧನ್ಯನಾಗೆಂದು ಹೇಳಿದ್ದಾನೆ.

ಇದನ್ನು ಕೇಳಿ ಹರ್ಷಗೊಂಡ ಗೋಪಿನಾಥನು, ಆ ಸ್ವಾಮಿಯನ್ನು ಪೂಜಿಸಲು ಆ ಹುತ್ತದ ಬಳಿ ಹೋಗಿದ್ದಾನೆ. ಆ ಸ್ವಾಮಿಯನ್ನು ಪೂಜಿಸಲು ರಂಗದಾಸನೆಂಬ ಸೇವಕನೊಡನೆ " ಓ ರಂಗದಾಸ! ಈ ಹುತ್ತಲ್ಲಿರುವ ಸ್ವಾಮಿಯನ್ನು ಹೂವಿನಿಂದ ಪೂಜಿಸಿದ್ದೇ ಆದರೆ ಸ್ವಾಮಿ ಎಷ್ಟೋ ಸಂತೋಷಿಸಿ ಶೀಘ್ರವಾಗಿ ಮುಕ್ತಿಯನ್ನು ಕೊಡುತ್ತಾನೆ. ಆದ್ದರಿಂದ ನೀನು ಒಂದು ಹೂದೋಟವನ್ನು ಬೆಳಸಿ ಸ್ವಾಮಿಯ ಪೂಜೆಗೆ ನಿರಂತರ ಹೂವುಗಳನ್ನು ಪೂರೈಸುತ್ತಿರೆಂದು ಆದೇಶಿಸಿದ್ದಾನೆ. ಆ ಹೂದೋಟವನ್ನು ಬೆಳೆಸಲು ನೀರು ಬೇಕಾಗಿರುವ ಕಾರಣ ಅದಕ್ಕಾಗಿಯೇ ಒಂದು ಬಾವಿಯನ್ನು ತೋಡಿದ್ದಾರೆ. ಅದಕ್ಕೆ ಹೂವಿನ ಬಾವಿಯೆಂದೇ ಹೆಸರಿಟ್ಟಿದ್ದಾರೆ. ಆ ಬಾವಿಯ ನೀರಿನಿಂದ ಹೂದೋಟವನ್ನು ಬೆಳಸಿದ್ದಾನೆ. ಅದರಲ್ಲಿ ಹೂಗಳನ್ನೇ ಪ್ರತಿನಿತ್ಯ ಪೂಜೆಗಾಗಿ ಗೋಪಿನಾಥನಿಗೆ ಕೊಡುತ್ತಿದ್ದನು.

ಹೀಗಿರುವಾಗ, ಒಬ್ಬ ಗಂಧರ್ವರಾಜ, ಒಂದು ದಿನ, ತನ್ನ ಪತ್ನಿಯರೊಡಗೂಡಿ ಹೂವಿನ ಬಾವಿಯ ಸಮೀಪದಲ್ಲಿರುವ ಸ್ವಾಮಿ ಪುಷ್ಕರಿಣಿಯಲ್ಲಿ ಜಲಕ್ರೀಡೆಯಾಡುತ್ತಿದ್ದಾನೆ. ಸ್ವಾಮಿಯ ಪೂಜೆಗಾಗಿ ಹೂವುಗಳಿಗೋಸ್ಕರ ಬಂದ ರಂಗದಾಸನು ಅವರ ಕ್ರೀಡೆಗಳನ್ನು ನೋಡುತ್ತಾ ಮೈ ಮರೆತು ಸ್ವಾಮಿಯ ಪೂಜೆಗೆ ಹೊತ್ತಾದುದನ್ನು ಸಹಾ ಎಣಿಸದೇ ಅಲ್ಲೇ ನಿಂತು ಬಿಟ್ಟಿದ್ದಾನೆ. ನಂತರ ಎಚ್ಚರಗೊಂಡು ಅವಸರವಸರವಾಗಿ ಹೂಗಳನ್ನು ಕೊಯ್ದುಕೊಂಡು ಗೋಪಿನಾಥನಿದ್ದೆಡೆಗೆ ಹೋಗಿದ್ದಾನೆ. ಮುನಿಯು ಹೊತ್ತಾಗಿ ಬಂದುದಕ್ಕೆ ಕಾರಣ ಕೇಳಿದ್ದಾನೆ. ಅದಕ್ಕೆ ರಂಗದಾಸನು ಅಲ್ಲಿ ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿ ತನ್ನನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದ್ದಾನೆ.

ಆಗ ಶ್ರೀನಿವಾಸನು ಪ್ರತ್ಯಕ್ಷಗೊಂಡು " ಓ ರಂಗದಾಸಾ! ಚಿಂತಿಸಬೇಡ. ನೀನು ನನ್ನ ಮೋಹಮಾಯೆಯ ಒಳಗಾಗಿಯೇ ಗಂಧರ್ವರ ಭೋಗಭ್ರಾಂತಿಗೊಳಗಾಗಿದ್ದೀಯೆ. ಇದರಲ್ಲಿ ನಿನ್ನ ತಪ್ಪೇನೂ ಇಲ್ಲ. ನನ್ನನ್ನು ಅಪ್ರತಿಮವಾಗಿ ಪೂಜಿಸುವ ಸೌಭಾಗ್ಯವನ್ನು ನಿನಗೆ ಕರುಣಿಸುತ್ತೇನೆ. ಅದಕ್ಕಾಗಿಯೇ ನೀನು ಈ ಶರೀರವನ್ನು ತ್ಯಜಿಸಿ ನಾರಾಯಣಪುರವನ್ನು ಆಳುತ್ತಿರುವ ಸುಧರ್ಮನೆಂಬ ರಾಜನ ಮಗನಾಗಿ ಹುಟ್ಟಿ. ತೊಂಡಮಾನನೆಂಬ ಹೆಸರು ಪಡೆದು ಸಮಸ್ತ ರಾಜ್ಯಭೋಗಗಳನ್ನು ಅನುಭವಿಸಿ ನನ್ನನ್ನು ಸೇರು" ಎಂದು ಹೇಳಿ ಅದೃಶ್ಯನಾಗಿದ್ದಾನೆ. ಆ ರಂಗದಾಸನೇ ಮುಂದಿನ ಜನ್ಮದಲ್ಲಿ ಆಕಾಶರಾಜನ ತಮ್ಮನಾದ ತೊಂಡಮಾನನಾಗಿ ಜನಿಸಿದ್ದಾನೆ.

## ತೊಂಡಮಾನನ ವೃತ್ತಾಂತ

ತಿರುಪತಿಗೆ ಸಮೀಪದಲ್ಲಿ "ನಾರಾಯಪುರ' ಎಂಬ ಪ್ರದೇಶವಿದೆ. ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಧರ್ಮನೆಂಬ ರಾಜನು ರಾಜ್ಯಪರಿಪಾಲನೆ ಮಾಡಿದ್ದಾನೆ. ಆತನ ಮಗನ ಹೆಸರೇ ಆಕಾಶರಾಜ. ಸುಧರ್ಮನು ಒಂದು ದಿನ ಬೇಟೆಯಾಡುತ್ತಾ ಅರಣ್ಯಕ್ಕೆ ಹೋಗಿ, ಬೇಟೆಯಾಡಿ ಆಯಾಸಗೊಂಡು ವಿಶ್ರಾಂತಿಗಾಗಿ ಹತ್ತಿರದಲ್ಲೇ ಇದ್ದ ಕಪಿಲ ತೀರ್ಥವನ್ನು ಸೇರಿ ವಿಶ್ರಮಿಸಿದ್ದಾನೆ. ಆ ವೇಳೆಯಲ್ಲಿ ಒಬ್ಬ ನಾಗಕನ್ಯೆ ಕಪಿಲತೀರ್ಥದಲ್ಲಿ ಸ್ನಾನಮಾಡಿ ಬರುತ್ತಿರಲು ಆಕೆಯ ಅಂದ ಚಂದಕ್ಕೆ ಮರುಳಾಗಿ ಆಕೆಯನ್ನು ಗಂಧರ್ವ ರೀತಿಯಲ್ಲಿ ಪರಿಣಯಿಸಿದ್ದಾನೆ. ಆ ನಾಗಕನ್ಯೆಗೂ-ಸುಧರ್ಮನಿಗೂ ಜನಿಸಿದವನೇ "ತೊಂಡಮಾನ"ನು ಕಾಲಕ್ರಮೇಣ ಸುಧರ್ಮನು ಲಾಲನೆ - ಪಾಲನೆಯಲ್ಲಿ ಬೆಳೆದು ದೊಡ್ಡವನಾದ ಆಕಾಶರಾಜನಿಗೆ ಪಟ್ಟಕಟ್ಟಿ ತಮ್ಮನಾದ ತೊಂಡಮಾನನಿಗೆ



ಜವಬ್ದಾರಿಯನ್ನು ವಹಿಸಿ ಕಣ್ಣು ಮುಚ್ಚಿದ್ದಾನೆ. ಆಕಾಶ ರಾಜನ ಮಡದಿ ಧರಣೀದೇವಿ. ಆ ಪತಿ-ಪತ್ನಿಯರಿಬ್ಬರೂ ಪ್ರಜೆಗಳನ್ನು ಹೆತ್ತಮಕ್ಕಳಂತೆ ನೋಡುತ್ತಾ ರಾಜ್ಯಪಾಲನೆಯಲ್ಲಿ ನಿರತರಾಗಿ ದ್ದಾರೆ.

### ಪದ್ಮಾವತಿ - ಶ್ರೀನಿವಾಸರ ಪರಿಣಯ

ಆಕಾಶರಾಜು-ಧರಣಿದೇವಿ ದಂಪತಿಗಳಿಗೆ ಬಹಳ ಕಾಲ ಸಂತಾನವಾಗಲಿಲ್ಲ. ಅನಂತರ ದೈವವಶಾತ್ ಒಂದು ಹೆಣ್ಣು ಶಿಶುವು ಅವರಿಗೆ ಭೂಮಿಯಲ್ಲಿ ದೊರಕಿದೆ. ಆ ಮಗುವಿಗೆ ಪದ್ಮಾವತಿ ಎಂದು ಹೆಸರಿಟ್ಟಿದ್ದಾರೆ. ನಂತರ ಧರಣಿದೇವಿ ಗರ್ಭ ಧರಿಸಿದ್ದಾಳೆ ಮತ್ತು ಒಂದು ಗಂಡು ಮಗುವಿಗೆ ಜನ್ಮವಿತ್ತಿದ್ದಾಳೆ. ಆ ಮಗುವಿಗೆ ವಸುದಾನನೆಂದು ಹೆಸರಿಟ್ಟು ಬೆಳೆಸಿಕೊಂಡಿ ದ್ದಾರೆ.

ಹೀಗಿರಲು ಲಕ್ಷ್ಮೀದೇವಿ ಕೋಪಿಸಿಕೊಂಡು ವೈಕುಂಠ ವನ್ನು ತೊರೆದು ಹೊರಟು ಹೋದ ನಂತರ ಸ್ವಾಮಿಯ ವಿರಾಗಿಯಾಗಿ ವೈಕುಂಠವನ್ನು ಬಿಟ್ಟು ಭೂಲೋಕದ ವೇಂಕ ಟಾಚಲದಲ್ಲಿ ವಾಸವಾಗಿದ್ದ ಬಕುಳಾಮಾತೆಯೆಂಬುವರ ಸೇವೆಯಲ್ಲಿ ಶ್ರೀನಿವಾಸನೆಂಬ ಹೆಸರಿನಿಂದ ಕಾಲದೊಡ ಹತ್ತಿದ್ದಾನೆ. ಕಾಲಕ್ರಮೇಣ ಶ್ರೀನಿವಾಸ-ಪದ್ಮಾವತಿಯರ ಮಧ್ಯೆ ಪ್ರೇಮಾಂಕುರವಾಗಿದೆ. ಈ ವಿಷಯವನ್ನು ತಿಳಿದುಕೊಂಡ ರಾಜದಂಪತಿಗಳು ತಮ್ಮ ಕುವರಿಗೆ ತಕ್ಕನಾದ ವರನೇ ದೊರ ಕ್ಕಿದ್ದಾನೆಂದು ಸಂತೋಷಗೊಂಡಿದ್ದಾರೆ. ಬೃಹಸ್ಪತಾಚಾರ್ಯ ರೊಡನೆ ಸಮಾಲೋಚಿಸಿ ವೈಶಾಖ ಶುಕ್ಲ ದಶಮಿ ಶುಕ್ರವಾರದ ದಿನ ಶ್ರೀನಿವಾಸನಿಗೆ ಪದ್ಮಾವತಿಯನ್ನು ಕೊಟ್ಟು ತೊಂಡ ಮಾನನ ಅಧಿಪತ್ಯದಲ್ಲಿ ವೈಭವೋಪೇತವಾಗಿ ವಿವಾಹವನ್ನು ಜರುಗಿಸಿದ್ದಾರೆ.

ವಿವಾಹಾನಂತರ ಆರು ತಿಂಗಳುಗಳ ಕಾಲ ಬೆಟ್ಟವನ್ನು ಏರಬಾರದಾದ್ದರಿಂದ ಸುವರ್ಣ ಮುಖರಿ ನದಿ ತೀರದ ಅಗಸ್ತ್ಯಾ ಶ್ರಮದಲ್ಲಿರಬೇಕೆಂದು ನಿಶ್ಚಯಿಸಿದ್ದಾರೆ. ಹಾಗಿರುವಾಗ ಒಂದು ದಿನ ಆಕಾಶರಾಜನು ಮರಣಶಯ್ಯೆಯಲ್ಲಿರುವನೆಂಬ ವಾರ್ತೆ ಕೇಳಿಬಂದಿದೆ. ಕೂಡಲೇ ನಾರಾಯಣಪುರಕ್ಕೆ ಹೊರಟಿದ್ದಾರೆ. ಅಲ್ಲಿ ಆಕಾಶರಾಜ ಶ್ರೀನಿವಾಸನೊಂದಿಗೆ ಸ್ವಾಮಿ! ಅಂತ್ಯಕಾಲ ದಲ್ಲಿ ನಿನ್ನನ್ನು ಕಂಡಿದ್ದೇನೆ. ನಿನ್ನನ್ನು ಅಳಿಯನಾಗಿ ಪಡೆದ ಈ ಜನ್ಮ ಸಾರ್ಥಕಗೊಂಡಿದೆ. ನನ್ನ ತಮ್ಮ ಮತ್ತು ಮಗನನ್ನು ನಿನ ಗೊಪ್ಪಿಸುತ್ತಿದ್ದೇನೆ. ಅವರು ಅಮಾಯಕರು, ಜಾಗ್ರತೆಯಿಂದ ನೋಡಿಕೊಳ್ಳಿರೆಂದು ಹೇಳಿ ಕಣ್ಣು ಮುಚ್ಚಿದ್ದಾನೆ. ತದ ನಂತರ ದಲ್ಲಿ ಧರಣಿದೇವಿಯೂ ಸಹಾ ಮರಣಿಸಿದ್ದಾಳೆ. ಅನಂತರ ಪದ್ಮಾ ವತಿ-ಶ್ರೀನಿವಾಸರು ರಾಜ್ಯವನ್ನು ತೊಂಡಮಾನನಿಗೆ, ವಸು ದಾನನಿಗೆ ಒಪ್ಪಿಸಿ ಅಗಸ್ತ್ಯಾಶ್ರಮಕ್ಕೆ ತೆರಳಿದ್ದಾರೆ.

ಆಕಾಶರಾಜನ ಮರಣಾನಂತರ ರಾಜ್ಯಾಧಿಕಾರದ ಸಲುವಾಗಿ ತೊಂಡಮಾನ-ವಸುದಾನರು ಬಡಿದಾಡಿ ಕೊಂಡಿದ್ದಾರೆ. ಇಬ್ಬರೂ ಶ್ರೀನಿವಾಸನ ಬಳಿ - ಸಾರಿ ತಮ್ಮ ಜೊತೆಗಿರಬೇಕೆಂದು ಬಿನ್ನೈಸಿಕೊಂಡಿದ್ದಾರೆ. ಭಕ್ತನಾದ ತೊಂಡಮಾನನಿಗೆ ತನ್ನ ಶಂಖಚಕ್ರಗಳನ್ನು ನೀಡಿ ತಾನು ವಸುದಾನನ ಪಕ್ಷದಲ್ಲಿದ್ದು ಯುದ್ಧ ಮಾಡಿದ್ದಾನೆ ಸ್ವಾಮಿ. ಈ ವಿಷಯ ತಿಳಿದ ಪದ್ಮಾವತಿ ಅಲ್ಲಿಗೆ ಬಂದು ಇಬ್ಬರಿಗೂ ಸಂಧಿ ಮಾಡಿಸಿ ರಾಜ್ಯವನ್ನು ಎರಡು ಭಾಗಗಳನ್ನಾಗಿ ಮಾಡಿ ತಲಾ ಒಂದು ಭಾಗವನ್ನು ಕೊಟ್ಟಿದ್ದಾರೆ. ತೊಂಡಮಾನನಿಗೆ ತುಂಡಿರ ಮಂಡಲವನ್ನು, ವಸುದಾನನಿಗೆ ನಾರಾಯಣಪುರವನ್ನು ಕೊಡಲಾಗುತ್ತದೆ.

ಒಂದು ದಿನ ತೊಂಡಮಾನನು ಶ್ರೀನಿವಾಸನ ದರ್ಶನಾರ್ಥನಾಗಿ ಬಂದಿದ್ದಾನೆ. ಆಗ ಸ್ವಾಮಿ ತೊಂಡಮಾನನಿಗೆ ತಿರುಮಲೆಯಲ್ಲಿ ತನಗೊಂದು ಆಲಯವನ್ನು ನಿರ್ಮಿಸಬೇಕೆಂದು ಆದೇಶಿಸಿದ್ದಾನೆ. ಶ್ರೀನಿವಾಸನ ಆಣತಿಯಾನುಸಾರ ತೊಂಡಮಾನನು ಮಹೋನ್ನತವಾದ, ರತ್ನ ಖಚಿತವಾದ ಸುವರ್ಣ ಕಲಶದಿಂದ ಪ್ರಕಾಶಿಸುವ ಆಲಯವನ್ನು ನಿರ್ಮಿಸಿದ್ದಾನೆ. ಆ ಆಲಯದ ಸುತ್ತೂ ಮೂರು ಪ್ರಾಕಾರಗಳಲ್ಲಿ ಮೂರು ಪ್ರದಕ್ಷಿಣ ಮಾರ್ಗಗಳಲ್ಲಿ ಮಂಡಪಗಳನ್ನು ಪಾಕಶಾಲೆಗಳನ್ನು, ಬಂಗಾರು ಬಾವಿಗಳನ್ನು ಏರ್ಪಡಿಸಿದ್ದಾನೆ. ಈ ಆಲಯವನ್ನೇ " ಆನಂದನಿಲಯ" ಎನ್ನುತ್ತಾರೆ. ಆನಂದ ನಿಲಯದ ಗೋಪುರದ ಮೇಲೆ ಕೂಡ ಒಂದು ಶ್ರೀನಿವಾಸ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾನೆ. ಆತನೇ "ವಿಮಾನ ವೇಂಕಟೇಶ್ವರಸ್ವಾಮಿ". ಮುಖಮಂಟಪದಲ್ಲಿ ಭಗವದ್ರಾಮಾನುಜಾಚಾರ್ಯರ, ಶ್ರೀರಾಮರ ವಿಗ್ರಹಗಳು, ಮತ್ತೊಂದು ಕಡೆ ಅಂಜನೇಯಸ್ವಾಮಿ ವಿಗ್ರಹಗಳಿವೆ. ಈ ದೇವಾಲಯದ ವಿಮಾನ ಕಟ್ಟಡ ತಿರುಮಲೆಯದ ಆನಂದ ನಿಲಯದ ವಿಮಾನವನ್ನು ಹೋಲುತ್ತದೆ. ಇವೆರಡನ್ನು ಒಬ್ಬರೇ ನಿರ್ಮಿಸಿದ್ದಾರೆಂಬ ವಿಷಯವನ್ನು ಸ್ಪಷ್ಟ ಪಡಿಸುತ್ತದೆ. ಹಾಗೆಯೇ ಆಕಾಶ ಗಂಗಾ ಸಮೀಪದಲ್ಲಿ ಒಂದು ತೊರೆಯ ಹರಿದು ಆಕಾಶಗಂಗೆಯ ನೀರು ಕಪಿಲತೀರ್ಥದ ದ್ವಾರ ತೊರೆಯನ್ನು ಸೇರುವ ಏರ್ಪಾಟು ಮಾಡಿದ್ದಾನೆ ತೊಂಡಮಾನ ರಾಜ. ಈ ಕೆರೆಯೇ "ತಾಮರಗುಂಟ" ವೆಂದು ಪ್ರಸಿದ್ಧಿ ಪಡೆದಿದೆ. ಸ್ವಾಮಿಗೆ ಅಭಿಷೇಕ ಜಲವಾಗಿ ಉಪಯೋಗಿಸಲ್ಪಡುವುದು ಇದೇ. ಕುಳಿತಿರುವ ಭಂಗಿಯಲ್ಲಿ ಸುಮಾರು ಹತ್ತು ಅಡಿ ಎತ್ತರವಾಗಿದ್ದಾನೆ ಸ್ವಾಮಿ. ಇಲ್ಲಿಯೂ ಸಹಾ ಸ್ವಾಮಿಗೆ ಅರ್ಚನೆಗಳು, ಪೂಜೆಗಳು, ಉತ್ಸವಗಳು. ಅಂಗರಂಗ ವೈಭವಗಳಿಂದ ಜರುಗುತ್ತವೆ. ಎಲ್ಲೆಲ್ಲಿಂದಲೋ ಭಕ್ತಾದಿಗಳು ಇಲ್ಲಿಗೆ ಬಂದು ಸ್ವಾಮಿಯನ್ನು ದರ್ಶಿಸಿ ಪುನೀತರಾಗುತ್ತಾರೆ. ತಿ.ತಿ. ದೇವಸ್ಥಾನದವರು 2008 ನೇ ಸಂವತ್ಸರದಲ್ಲಿ ಈ ದೇವಾಲಯವನ್ನು ತಮ್ಮ ಅಧೀನಕ್ಕೆ ತೆಗೆದು ಕೊಂಡರು. ಇದು ಕೂಡಾ ಪುರಾಣ ಪ್ರಸಿದ್ಧವಾದ ದೇವಾಲಯವಾಗಿ ರಾರಾಜಿಸುತ್ತಿದೆ.


# ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು – ಮಾತನಾಡಿ.



# ಜಯ ಜಯ ಹೇ ಮಹಿಷಾಸುರ ಮರ್ದಿನಿ

## (ದೇವಿ ನವರಾತ್ರಿಯ ಪ್ರಯುಕ್ತ)

-ಎಸ್. ವೆಂಕಟರಾಘವನ್

ಮಾಂ ಪಾಹಿ ಮಾತ ಲಲಿತಾಂಬಿಕೆ ಪಾಹಿ ದೇವಿ ಪರಮೇಶ್ವರಿ
ಶಕ್ತಿ ಸ್ವರೂಪಿಣಿ ದೇವಿ ರುದ್ರಾಣಿ ಶರಣು ಬ್ರಹ್ಮಾಂಡನಾಯಕಿ
ಭುಕ್ತಿ ಪ್ರದಾಯಿನಿ ಅನ್ನಪೂರ್ಣಾದೇವಿ ಸೌಭಾಗ್ಯ ಪ್ರದಾಯಿನಿ ಶ್ರೀಮಹಾಲಕ್ಷ್ಮಿ
ವಿದ್ಯಾ ಪ್ರದಾಯಿನಿ ಮಹಾ ಸರಸ್ವತಿ, ವೇದ ಮೂರ್ತಿ ದೇವಿ ಗಾಯತ್ರಿ
ಯಜ್ಞ ಧಾತ್ರಿ ಸ್ವಾಹಾ ದೇವಿ ಪ್ರಕೃತಿ ಸ್ವರೂಪಿಣಿ ದೇವಿ ಶಾಕಾಂಬರಿ
ನಿರ್ಗುಣ ಸ್ಥಿತೇ ಸಗುಣರೂಪ ಧಾತ್ರಿ ಮಹಾಕಾಳಿಕ ದೇವಿ ದಾನವ ಧ್ವಂಸಿನಿ
ಜಗತ್ಕಲ್ಯಾಣ ಕೃತ ದೇವಿ ಕಲ್ಯಾಣಿ ಭವಭಯ ನಾಶಿನಿ ದೇವೀ ಭವಾನಿ
ಓಂಕಾರ ಬೀಜಾಕ್ಷರಿ ದೇವಿ ಸುಂದರಿ ಶ್ರೀ ವೈಷ್ಣವಿ ದೇವಿ ಮನೋಹರಿ
ಯೋಗಮಾಯೇತಿ ದೇವಿ ಸ್ಥಿತ ಮಿದಂಜಗತ್ ಯೋಗಾನಂದಕರೀ ಯೋಗ ಪ್ರದಾಯಿನಿ
ನಮಸ್ತೆ ದೇವಿ ನಾರಾಯಣಿ ಸಮಸ್ತೆ ನವದುರ್ಗಾ ದೇವಿ ಮಹಿಷಾಸುರ ಮರ್ದಿನಿ

ಸಕಲ ಚರಾಚರ ಸೃಷ್ಟಿ ನಡೆಯಲು ಶಕ್ತಿ ಅತ್ಯಗತ್ಯ. ಅನಾದಿಯಿಂದ ಆದಿ ಪರಾಶಕ್ತಿ ಸಕಲ ಚರಾಚರ ಸೃಷ್ಟಿಗೆ ಮೂಲ. ಅನಾದಿ ಅಂದರೆ ಎಲ್ಲರಿಗಿಂತ ಮೊದಲು ಆದಿಶಕ್ತಿ ಜಗತ್ತಿನ ಸೃಷ್ಟಿಕರ್ತ. ಸ್ಥಿತಿ ನಿಯಂತ್ರಣಕಾರಿಣಿ ಮತ್ತು ವಿನಾಶ ಕಾರಿಣಿ. ದುರ್ಗಾ ಎಂದರೆ ದುರ್ಗತಿಯ ನಾಶ ಮಾಡುವ ಶಕ್ತಿ ದೇವತೆ. ದುರ್ಗಾ ಎಂದರೆ ಕೋಟೆ ಅಥವಾ ರಕ್ಷಣೆ ಎಂಬುವ ಅರ್ಥವೂ ಇದೆ. ಜಗದಂಬೆ ಭಕ್ತರನ್ನು ಕೋಟೆಯಂತೆ ರಕ್ಷಣೆ ಮಾಡುವರು. ಸತ್ವರಜಸ್ತಮೋಗುಣಗಳು ಪ್ರಕೃತಿ ಲಕ್ಷಣಗಳು. ಮಾಯಾ. ಶಬಲ, ಬ್ರಹ್ಮರೂಪಿಣಿ, ಕಾರಣರೂಪಿ ಸತ್ವರಜಸ್ತಮೋಗುಣಗಳ ಸಾಮಾನ್ಯ ಸ್ಥಿತಿಯಿಂದ ಬ್ರಹ್ಮಾಂಡ ದಲ್ಲಿ ಹಮ್ಮಿರುವರು ಆದಿಪರಾಶಕ್ತಿ ದೇವಿ. ಈ ಜಗತ್ತಿನಲ್ಲಿ ಜಗನ್ಮಾತೆ ಇಲ್ಲದ ಸ್ಥಳವೇ ಇಲ್ಲ. ದೇವಿ ಅಧಿಷ್ಠಾತ್ರಿ. ಓಂಕಾರ ರೂಪಿಣಿ, ಕ್ಲೀಂ ಕಾರವಾಸಿನಿ. ಜಗದೇಕ ಮೋಹಿನಿ ಮತ್ತು ಪ್ರಕೃತಿ ಸ್ವರೂಪಿಣಿ ದೇವಿ. ದುರ್ಗಾ ಸಪ್ತಶತಿಯಲ್ಲಿ ವರ್ಣಿಸಿದಂತೆ "ಯಾದೇವಿ ಸರ್ವ ಭೂತೇಷು ಶಕ್ತಿ ರೂಪೇಣ ಸಂಸ್ಥಿತಾ, ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ" ಸಕಲ ಪ್ರಾಣಿಗಳಲ್ಲಿ ಸಕಲ ಪದಾರ್ಥಗಳಲ್ಲಿ ತೃಷ್ಣಾ ಶಕ್ತಿ ಸ್ವರೂಪದಲ್ಲಿರುವ ದೇವಿಗೆ ನಮಸ್ಕಾರ, ಮತ್ತೆ ಮತ್ತೆ ವಂದನೆಗಳು. "ಯಾ ದೇವಿ ಸರ್ವ ಭೂತೇಷು ಮಾತೃ ರೂಪೇಣ ಸಂಸ್ಥಿತಾ ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ" ಜಗತ್ತಿನ ಸೃಷ್ಟಿಯಲ್ಲಿ ಮಾತೃ ಮೂರ್ತಿ ರೂಪದಲ್ಲಿರುವ ದೇವಿಗೆ ನಮಸ್ಕಾರ, ಮತ್ತೆ ಮತ್ತೆ ವಂದನೆಗಳು, ಅಂಬಿಕೆ ಸತ್ಯ ಸ್ವರೂಪಿಣಿ. ಚರಾಚರ ಸೃಷ್ಟಿ ಜಗದಂಬೆಯಿಂದಲೇ ನಡೆಯುವುದು. ದೇವಿಯ ಕೃಪೆಯಿಂದಲೇ ಬ್ರಹ್ಮ ವಿಷ್ಣು ಮಹೇಶ್ವರರು ಸೃಷ್ಟಿ, ಸ್ಥಿತಿ, ಲಯ ನಡೆಸುತ್ತಿದ್ದಾರೆ. ತಸ್ಯ ಕಾಚಿತ್ ಸ್ವತಃ ಸಿದ್ಧಾ ಶಕ್ತಿ ರ್ಮಾಯೇತಿ ವಿಶ್ರುತಾ! ಸ್ವತಃ ಸಿದ್ಧವಾಗಿ ಮಾಯಾಶಕ್ತಿಯಿಂದ ಜಗತ್ತು ದೇವಿಯಿಂದ ಸೃಷ್ಟಿಸಲಾಗಿದೆ. ದೇವಿಯೇ ಸಂಸಾರ ಬಂಧನಕ್ಕೆ ಕಾರಣ. ಬಂಧ ವಿಮುಕ್ತಿ ಕೊಡಲೂ ದೇವಿಯೇ ಕಾರಣ. ದೇವಿ ಪರಮ ವಿದ್ಯಾ ಸ್ವರೂಪಿಣಿ. ಸಕಲ ಶಕ್ತಿವಂತರನ್ನೂ ಶಾಸಿಸುವರು ಜಗದಂಬೆ. ಮಹಾಮೇಘಕಾಲಿ ಸುರಕ್ತಾಪಿ ಶುಭ್ರ ಕದಾಚಿದ್ ವಿಚಿತ್ರಾ ಕೃತಿಯೋರ್ಗಮಾಯಾ ನ ಬಾಲಾ ನ ವೃದ್ಧಾ ನ ಕಾಮಾತುರಾಪಿ ಸ್ವರೂಪಂ ತ್ವದೀಯಂ ನ ವಿನ್ದನ್ತಿ ದೇವಾಃ ಮೋಡದಂತೆ ಕಪ್ಪು, ಧಗ ಧಗ ಎನ್ನುವ ಕೆಂಪು ಬಣ್ಣದಂತೆ ಕಂಡು. ನಿರ್ಮಲ ಧವಳ ಕಾಂತಿಯಂತೆ ಇನ್ನು ಕೆಲವೆಡೆ ಗೋಚರಿಸುವ, ವಿವಿಧ ಆಕಾರಗಳನ್ನು ಯೋಗ ಮಾಯೆಯಿಂದ ಧರಿಸುವ, ಬಾಲಕಿಯು ಅಲ್ಲ ವೃದ್ಧ ಮಹಿಳೆಯು ಅಲ್ಲ. ದೇವತೆಗಳಿಗೂ ತಿಳಿಯದ ಭಾವಾತೀತವಾದ ಜಗ ನ್ಮಾತೆಗೆ ವಂದನೆಗಳು.

### ಮಹಿಷಾಸುರನ ಜನ್ಮ ವೃತ್ತಾಂತ

ದಾನವರ ಅಧರ್ಮ ಪ್ರವರ್ತನೆಗೆ ಹಲವಾರು ದೇವ ದಾನವ ಯುದ್ಧಗಳು ನಡೆದಿವೆ. ದಾನವರನ್ನು ದೇವತೆಗಳು ನಾಶ ಮಾಡಿ ಧರ್ಮವ ಪುನಃ ಸ್ಥಾಪನೆ ಮಾಡಿದರು. ಇಂತಹ ಮಹಾ ಅಸುರರಲ್ಲಿ ಮಹಿಷಾಸುರ ಒಬ್ಬನು. ದಾನವ ರಾಜ ಧನುವಿಗೆ ಇಬ್ಬರು ಪುತ್ರರಿದ್ದರು.ರಂಭಾಸುರ ಮತ್ತು ಕರಂಭಾಸುರ. ರಂಭಾ ಸುರ ತಪಸ್ಸು ಮಾಡಿ ಅಗ್ನಿದೇವರನ್ನು ಮೆಚ್ಚಿಸಿದ. ಶೂರನಾದ ಪುತ್ರ ಸಂತಾನವನ್ನು ಬೇಡಿದನು. ಅಗ್ನಿದೇವರು ಪುತ್ರಪ್ರಾಪ್ತಿ ವರ ಕೊಟ್ಟರು.

ಕೋಣದ ಅಂಶೆಯಿಂದ ರಂಬಾಸುರನಿಗೆ ಮಗು ವಾಯಿತು. ಕೋಣ ಮತ್ತು ಅಸುರರ ದೇಹವಾದುದರಿಂದ ಮಹಿ ಷಾಸುರನಾದನು. ಮಹಿಷಾಸುರ ಬ್ರಹ್ಮದೇವರನ್ನು ಕುರಿತು ಸುಮೇರು ಪರ್ವತದ ಮೇಲೆ ತಪಸ್ಸನ್ನು ಆಚರಿಸಿದನು. ಬ್ರಹ್ಮ ದೇವರು ಪ್ರತ್ಯಕ್ಷವಾಗಿ ವರ ಕೇಳಲು ಅಮರತ್ವವನ್ನು ಕೇಳಿದನು. ಜನನ ಮರಣ ಪ್ರಕೃತಿ ಲಕ್ಷಣ. ಜೀವಿಗಳೇ ಈ ಚಕ್ರದಲ್ಲಿ ಇರು ವವು. ಕೊನೆಗೆ ಪರ್ವತ, ನಕ್ಷತ್ರಗಳಿಗೂ ಆದಿ ಮತ್ತು ಅಂತ್ಯ ಇದೆ. ಬ್ರಹ್ಮದೇವರು ಬೇರೇನಾದರೂ ಕೇಳಲು ಸೂಚಿಸಿದರು. ಮಹಿಷಾಸುರ ದೇವತೆಗಳಿಂದ ಶಸ್ತ್ರಾಸ್ತ್ರಗಳಿಂದ ಮರಣವಿಲ್ಲದ ವರವನ್ನು ಕೇಳಿದನು. ಅಬಲೆಯಿಂದ ತನ್ನ ಮರಣ ಆಗಬಹುದು ಎಂದು ಒಪ್ಪಿಕೊಂಡನು.ಅಬಲೆ ತನ್ನನ್ನು ಸೋಲಿಸಲಾರದೆಂದು ಮಹಿಷಾಸುರನ ಧೈರ್ಯ, ಬ್ರಹ್ಮದೇವರು ವರವನ್ನು ಕೊಟ್ಟು ಅಂತರ್ಧಾನವಾದರು.ಮಹಿಷಾಸುರ ಗರ್ವದಿಂದ ಮುಲ್ಲೋಕ ಗಳನ್ನು ಜಯಿಸಿ ದೇವತೆಗಳಿಗೆ ಅಧಿಪತಿಯಾಗಲು ಸೈನ್ಯವನ್ನು ಸಿದ್ಧಪಡಿಸಿದನು.ಬ್ರಾಹ್ಮಣರು.ಋಷಿಗಳು ಮಹಿಷಾಸುರನ ವಶ ವಾದರು.ಯಜ್ಞ ಯಾಗಾದಿಗಳ ನಂತರ ಹವಿರ್ಭಾಗ ದೇವತೆಗಳ ಸಮಾನವಾಗಿ ಮಹಿಷಾಸುರನಿಗೆ ಕೊಡಲು ಶಾಸನ ವಾಯಿತು. ಸಮಸ್ತ ಭೂಮಂಡಲದಲ್ಲಿ ಏಕ ಛತ್ರಾಧಿಪತ್ಯ,ರಾಜ ಭೋಗ ಗಳನ್ನು ಅನುಭವಿಸತೊಡಗಿದನು.

### ದೇವೇಂದ್ರರ ಜೊತೆ ರಾಯಭಾರ:

ಮಹಿಷಾಸುರ ರಾಜ್ಯದ ಮಹಾಬಾಹು ಇಂದ್ರಲೋಕಕ್ಕೆ ತೆರಳಿ ಸ್ವರ್ಗವನ್ನು ಮಹಿಷನಿಗೆ ಒಪ್ಪಿಸಿ ದೇವತೆಗಳನ್ನೆಲ್ಲ ಹೊರಟು ಹೋಗಲು ಸಂದೇಶವನ್ನು ಕಳಿಸಿದನು. ದೇವೇಂದ್ರ ಧಿಕ್ಕರಿಸಿ, ದೂತನನ್ನು ದೇವತೆಗಳ ಜೊತೆ ವೈರ ಬಿಡಲು ಹೆಚ್ಚರಿಸಿ ಕಳಿಸಿದರು. ತ್ರಿಮೂರ್ತಿಗಳ ಸಂದರ್ಶನ: ದೇವೇಂದ್ರರು, ದೇವ ಗುರು ಬೃಹಸ್ಪತಿ ಮತ್ತು ದೇವತೆಗಳು ಸೇರಿ ಸಮಾಲೋಚನೆ ಮಾಡಿ ತ್ರಿಮೂರ್ತಿಗಳನ್ನು ಸಂದರ್ಶಿಸಿ ರಾಕ್ಷಸರ ಬಾರಿಯಿಂದ ರಕ್ಷಿಸಲು ಬೇಡಿಕೊಂಡರು. ದೇವತೆಗಳು ಮಹಿಷಾಸುರನನಿಗೆ ಯುದ್ಧ ಸಂದೇಶ ಕಳಿಸಿ ರಣತಂತ್ರಕ್ಕೆ ಸಜ್ಜಾದರು.

### ದೇವದಾನವರ ಯುದ್ಧ

ದೇವತೆಗಳಿಗೂ ಮಹಿಷಾಸುರನ ಸೈನ್ಯದ ನಡುವೆ ಭೀಕರ ಯುದ್ಧ ನಡೆಯಿತು. ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರು, ಪಂಚಭೂತಗಳು, ಯಮಧರ್ಮರಾಜ, ಅಷ್ಟದಿ ಕ್ಪಾಲಕರು ಸಕಲ ದೇವತೆಗಳು ರಣದಲ್ಲಿ ಪಾಲ್ಗೊಂಡರು. ಮಾಯಾ ವಿದ್ಯೆ ಬಲ್ಲ ಮಹಿಷಾಸುರನನ್ನು ಸೋಲಿಸಲು ದೇವತೆ ಗಳಿಗೆ ಕಷ್ಟವಾಯಿತು. ದೇವತೆಗಳು ಹಿಂತಿರುಗಿ ಹೋದರು. ಮಹಿಷಾಸುರ ಸ್ವರ್ಗವನ್ನು ಆಕ್ರಮಿಸಿ ಅಸುರರ ಪಾಲನೆಗೆ ಚಾಲನೆ ಕೊಟ್ಟನು. ದೇವತೆಗಳು ಸ್ವರ್ಗವನ್ನು ಬಿಟ್ಟು ಹೋದರು. ದಾನವರು ಮುಲ್ಲೋಕದ ಅಧಿಪತಿಯಾದರು.

### ಇಂದ್ರಾದಿ ದೇವತೆಗಳ ವೈಕುಂಠ ಪ್ರಯಾಣ

ದೇವತೆಗಳು ಮಹಿಷಾಸುರನ ಸೆರೆಯಿಂದ ಬಿಡಿಸಲು ಮಹಾ ವಿಷ್ಣುವನ್ನು ಪ್ರಾರ್ಥಿಸಿದರು. ಬ್ರಹ್ಮ ದೇವರು.ಪರಮೇಶ್ವರ ಎಲ್ಲ ದೇವತೆಗಳು ತಮ್ಮ ವಾಹನದಲ್ಲಿ ವೈಕುಂಠಕ್ಕೆ ಆಗಮಿ ಸಿದರು.ಶ್ರೀಮನ್ನಾರಾಯಣರು ಎಲ್ಲರನ್ನು ನೋಡಿ ಮಹಿಷಾಸುರ ವರ ಪ್ರಸಾದಿ,ನೂರಕ್ಕಿಂತಲೂ ಅಧಿಕ ಮಾಯಾ ವಿದ್ಯೆ ಬಲ್ಲ ವನು. ಅಬಲೆಯ ಮೂಲಕವೇ ಅಸುರನ ಅಂತ್ಯವಾಗುವುದು. ಎಲ್ಲರು ಸೇರಿ ಆದಿ ಶಕ್ತಿಯನ್ನು ಪ್ರಾರ್ಥನೆ ಮಾಡಿ ಎಂದರು. ಸಕಲ ದೇವತೆಗಳು ಜಗನ್ಮಾತೆಯನ್ನು ಪ್ರಾರ್ಥಿಸಿದರು. "ದೇವಿ ಪ್ರಪನ್ನಾರ್ಥಿಹರೇ! ಪ್ರಸೀದ ಪ್ರಸೀದ ಮಾತರ್ಜಗತೋ ಖಿಲಸ್ಯ! ಪ್ರಸೀದ ವಿಶ್ವೇಶ್ವರಿ! ಪಾಹಿ ವಿಶ್ವಂ ತ್ವಮೀಶ್ವರೀ ದೇವಿ! ಚರಾ ಚರಸ್ಯ "ಜನನಿ" ಶರಣಾಗತರ ಪೋಷಿಸುವ ಮಾತೆ ಭಕ್ತರ ಪ್ರಾರ್ಥನೆ ಕೇಳುವ ದೇವಿ, ಅನುಗ್ರಹಿಸು! ಜಗತ್ತನ್ನೆಲ್ಲ ಪ್ರಸನ್ನಮ ಯವಾಗಲು ಅನುಗ್ರಹಿಸು. ಮಾತಾ ವಿಶ್ವೇಶ್ವರಿ! ಸಕಲ ವಿಶ್ವವನು ಕಾಪಾಡು ಜಂಗಮ ಸ್ಥಾವರ್ಾತ್ಮಕವಾದ ಸಕಲ ಬ್ರಹ್ಮಾಂಡ ಪಾಲಿಸುವ ಮಾತೆ, ಅನುಗ್ರಹಿಸು ತೇಜೋಮಯವಾಗಿ ಅಷ್ಟಾ ದಶ ಭುಜಗಳಿಂದ ಜಗನ್ಮಾತೆ ಪ್ರಕಟವಾದರು. ದೇವಿ ಪ್ರಕಟ ವಾದಾಗ ಮಹೇಂದ್ರರು ನಮಸ್ಕರಿಸಿ ನುಡಿದರು. ಜಗನ್ಮಾತೆ! ಮಹಿಷಾಸುರ ಬ್ರಹ್ಮ ವರಪ್ರಸಾದಿ. ಸಕಲ ದೇವತೆಗಳನ್ನು ಪರಾ ಜಯಗೊಳಿಸಿ ಸ್ವರ್ಗವ ಆಕ್ರಮಿಸಿ ಮುನಿಜನರಿಗೆ ಹಿಂಸೆ ಕೊಡುತ್ತ, ಧರ್ಮವ ನಾಶಗೊಳಿಸುತ್ತಿದ್ದಾನೆ. ಮಾಯಾವಿ ದಾನ ವನನ್ನು ಸ್ತ್ರೀ ಶಕ್ತಿಯೇ ಸಂಹರಿಸಲು ಸಾಧ್ಯ. ದುಷ್ಟ ರಾಕ್ಷಸನ ಸಂಹಾರ ಮಾಡಿ ಜಗದಂಬ! ನೀವೇ ದಿಕ್ಕು, ರಕ್ಷಣೆ, ಎಂದು ಶರಣು ಬೇಡಿದರು.ದೇವತೆಗಳು ಶಸ್ತ್ರಾಸ್ತ್ರಗಳನ್ನು ದೇವಿಗೆ ಕೊಟ್ಟರು. ಕ್ಷೀರಸಮುದ್ರ ರಾಜ ಕೆಂಪು ದಿವ್ಯ ವಸ್ತ್ರ, ಹಾರ ಮತ್ತು ಚೂಡಾಮಣಿ, ವಿಶ್ವಕರ್ಮ ಕಂಕಣ ಕೇಯೂರ ವರುಣದೇವ ಕಮಲ ಹಿಮವಂತ ರಾಜ ಬಂಗಾರ ವರ್ಣದ ಸಿಂಹ, ಶ್ರೀಹರಿ ಚಕ್ರ, ಬ್ರಹ್ಮದೇವರು ಕಮಂಡಲದಲ್ಲಿ ಗಂಗಾಜಲ, ಪರಮೇಶ್ವರ ತ್ರಿಶೂಲ,ವರುಣದೇವ ಶಂಖ, ಅಗ್ನಿದೇವ ಶತಾಗ್ನಿಗೋಳ,

ವಾಯುದೇವ ಬಿಲ್ಲು ಬಾಣ, ಇಂದ್ರದೇವ ವಜ್ರಾಯುಧ ಘಂಟೆ. ಕುಬೇರ ಬಂಗಾರದ ಪಾತ್ರೆಯಲ್ಲಿ ಮಧು, ಯಮ ದಂಡಕ, ಪಾಶ, ಖಡ್ಗಢಾಲು ಗದೆ, ವರುಣ ಕಮಲ, ಶಂಖ ಮತ್ತು ಸೂರ್ಯ ದೇವರು ತೇಜೋಮಯ ಕಿರಣ ಕೊಟ್ಟರು.

### ದೇವತೆಗಳಿಗೆ ಆಶ್ವಾಸನೆ

ಜಗನ್ಮಾತೆ ದೇವತೆಗಳನ್ನು ಕರುಣೆಯಿಂದ ನೋಡುತ್ತಾ, ಧರ್ಮಸ್ಥಾಪನೆಗಾಗಿ ದಾನವ ನಾಶವನ್ನು ಮಾಡುವೆನು ಎಂದು ಅಭಯವ ಕೊಟ್ಟರು. ಸಾಧೂನಾಂ ರಕ್ಷಣಂ ಕಾರ್ಯಾಮ್ ಹಂತವ್ಯಾಮೇ ಪ್ಯಾಸಾಧವಃ! ವೇದ ಸಂರಕ್ಷಣಂ ಕಾರ್ಯಮವ ತಾರೈರನೇ ಕಶಃ ಯುಗೇ ಯುಗೇ ತಾನೇ ವಾಹಮತಾರಾನ್ ಬಿಭರ್ಶಿಚ। ಸಾಧು ಸತ್ಪುರುಷರನ್ನು ರಕ್ಷಿಸಲು, ವೇದಗಳನ್ನು ರಕ್ಷಿಸಲು, ದುಷ್ಟ ಶಿಕ್ಷಣಕ್ಕಾಗಿ ಯುಗ ಯುಗಗಳಲ್ಲಿ ಅವತರಿಸುವೆ ಎಂದು ಭಗವತಿ ನುಡಿದರು. ದೇವಿ ಶಸ್ತ್ರಾಸ್ತ್ರಗಳಿಂದ ಸಿಂಹಾ ರೂಢಿಯಾಗಿ ಉಚ್ಚರ ಸ್ವರದಿಂದ ಘರ್ಜನೆ ಮಾಡಿದರು. ಭಯಂಕರ ಶಬ್ದಭೇರಿಗೆ ಭೂಮಿ ನಡುಗಿತು. ಪರ್ವತಗಳು ಕಂಪಿತವಾದವು. ಸಾಗರದಲ್ಲಿ ಅತಿ ದೊಡ್ಡ ತರಂಗಗಳು ಉತ್ಪತ್ತಿ ಯಾದವು.



### ದೇವಿ ಮತ್ತು ಮಹಿಷಾಸುರಸೇನೆ ನಡುವೆ ಘೋರ ಯುದ್ಧ

ದೇವಿ ಮಹಿಷಾಸುರನ ರಾಜ್ಯಕ್ಕೆ ತೆರಳಿ ಘರ್ಜನೆ ಮಾಡಿ ಶಂಖಾರಾವ ಮಾಡಿದರು. ಮಹಿಷಾಸುರ ಸೈನ್ಯದಜೊತೆ ಸಮರಕ್ಕೆ ಸಿದ್ಧನಾದನು. ಅಸಂಖ್ಯವಾದ ಮಹಿಷಾಸುರನ ಸೈನ್ಯ ದೇವಿಯೊಡನೆ ಯುದ್ಧ ಮಾಡುತ್ತಾ ಬಾಣ, ಅಗ್ನಿ, ಖಡ್ಗ ಮುಂತಾದ ಅಸ್ತ್ರಗಳನ್ನು ಪ್ರಯೋಗಿಸುವಾಗ, ದೇವಿ ಮಿಂಚಿನ ವೇಗದಲ್ಲಿ ಪ್ರತ್ಯಸ್ತ್ರಗಳಿಂದ ಖಂಡಿಸಿದರು. ದೇವಿಯ ಖಡ್ಗದಿಂದ ತ್ರಿಶೂಲದಿಂದ, ಬಾಣಗಳ ಸುರಿಮಳೆಯಿಂದ ದಾನವರ ಶರೀರ ಗಳು ಗಾಯಗೊಂಡವು. ಕೆಲವೆಡೆ ರುಂಡಗಳು ದೇಹದಿಂದ ಬೇರಾಗಿ ಯೋಧರು ನೆಲಕ್ಕೆ ಉರುಳಿದರು.ಶವಗಳ ರಾಶಿ ಬೆಳೆಯತೊಡಗಿತು.ಸಂಗ್ರಾಮ ಸ್ಥಳದಲ್ಲಿ ರಕ್ತಪ್ರವಾಹವಾಯಿತು. ಗದೆ, ಖಡ್ಗ ತ್ರಿಶೂಲ ಪಾಶದಿಂದ ದಾನವರ ಭುಜಗಳ, ರುಂಡಗಳ ಖಂಡನೆ ಆಯಿತು. ದಾನವರ ದೇಹಗಳು ಖಡ್ಗದ ಪ್ರಯೋಗಕ್ಕೆ ಎರಡಾಗಿ ಸೀಳಿದವು.ದಾನವ ಸೇನ ರಕ್ತವನ್ನು ಕಕ್ಕಿದರು. ಒಂಬತ್ತು ದಿನಗಳ ಘೋರ ಸಂಗ್ರಾಮದಲ್ಲಿ ದೇವಿ ಒಂದೊಂದು ದಿನ ಶಕ್ತಿ ರೂಪವನ್ನು ಧರಿಸುತ್ತಾ ಇದ್ದರು. "ಪ್ರಥಮಂ ಶೈಲಪುತ್ರೀ ಚ ದ್ವಿತಿಯಂ ಬ್ರಹ್ಮಚಾರಿಣಿ। ತೃತೀಯಂ ಚಂದ್ರಘಂಟೇತಿ, ಕೂಷ್ಮಾಂಡೇತಿ ಚತುರ್ಥಕಮ್॥ ಪಂಚಮಂ ಸ್ಕಂದಮಾತೇತಿ ಷಷ್ಠಂ ಕಾತ್ಯಾಯಿನೀತಿ ಚ। ಸಪ್ತಮಂ ಕಾಲರಾತ್ರಿಶ್ಚ ಮಹಾ ಗೌರೀತಿ ಚಾಷ್ಟಮಮ್॥ ನವಮಂ ಸಿದ್ಧಿಧಾತ್ರೀ ಚನವದುರ್ಗಾಃ ಪ್ರಕೀರ್ತಿತಾಃ" ಪಾರ್ವತಿದೇವಿ ಹಿಮವಂತನ ಮಗಳಾಗಿ ಶೈಲ ಪುತ್ರಿ, ಬ್ರಹ್ಮ ಎಂದರೆ ವೇದ, ವೇದದಲ್ಲಿ ಚಲಿಸುವ ಮಾತೆ-ಬ್ರಹ್ಮಚಾರಿಣಿ, ಆನಂದವನ್ನು ಕೊಡುವ ಮಾತೆ - ಚಂದ್ರಘಂಟ ತಾಪತ್ರಯವಾದ ಸಂಸಾರವನ್ನು ಗರ್ಭದಲ್ಲಿ ಅಂಡಾಕಾರದ ರೂಪದಲ್ಲಿ ಧರಿಸಿರುವ ಮಾತೆ - ಕೂಷ್ಮಾಂಡಿನೀ, ಕಾರ್ತಿಕೇಯರ ತಾಯಿ - ಸ್ಕಂದ ಮಾತ, ಕಾತ್ಯಾಯ ಋಷಿಪುತ್ರಿಯಾಗಿ - ಕಾತ್ಯಾಯನೀ, ಅಂಧಕಾರ, ಭಯ ದೂರಮಾಡುವ ಮಾತೆ - ಕಾಳರಾತ್ರಿ, ಪಾರ್ವತಿ ದೇವಿ - ಮಹಾಗೌರಿ ಸಕಲಸಿದ್ಧಿಗಳನ್ನು ಕೊಡುವ ದೇವಿ - ಸಿದ್ಧಿಧಾತ್ರೀ, ದುರ್ಗಾ ಸಪ್ತಶತಿ ಗ್ರಂಥದಲ್ಲಿ ಬ್ರಹ್ಮ ದೇವರು ವರ್ಣಿಸಿದ ಒಂಬತ್ತು ಶಕ್ತಿ ಸ್ವರೂಪಗಳು, ದಾನವ ಯೋಧರಾದ ಭಾಷ್ಕಲ ದುರ್ಮುಖ, ಚಿಕ್ಷುರಾಖ್ಯ, ತಾಮ್ರಾಕ್ಷ, ಆಸಿಲೋಮ ಮತ್ತು ಬಿಡಾಕ್ಷರೆಲ್ಲರೂ ಘೋರ ಯುದ್ಧ ಮಾಡಿ ದೇವಿಯ ಖಡ್ಗ, ತ್ರಿಶೂಲ,ಬಾಣ,ಅಗ್ನಿ ಗೋಳದಿಂದ ಮೃತ ರಾದರು. ಮಹಿಷಾಸುರ ಕ್ರೋಧಿತನಾಗಿ ಮಾಯಾ ರೂಪದಿಂದ ಆನೆ, ಸಿಂಹ ರೂಪವನ್ನು ಧರಿಸುತ್ತಾ ಬೆಟ್ಟಗಳನ್ನು, ಮಹಾ ವೃಕ್ಷಗಳನ್ನು ದೇವಿಯ ಮೇಲೆ ಪ್ರಯೋಗಿಸಿದ. ಕೊನೆಯದಾಗಿ ತನ್ನ ಮೂಲ ರೂಪವಾದ ಮಹಿಷವಾಗಿ ಜಗದಂಬೆ ಮೇಲೆ ಕೊಂಬಿನಿಂದ ಬಲ ಪ್ರಯೋಗ ಮಾಡಿದನು. ದೇವಿ ಮಹಿಷಾ ಸುರನ ಎದೆಮೇಲೆ ಕಾಲಿಟ್ಟು ತ್ರಿಶೂಲದಿಂದ ಎದೆಯನ್ನು ಸೀಳಿ ಸಿದರು. ದೇವಿ ಚಕ್ರವನ್ನು ಪ್ರಯೋಗಿಸಿದಾಗ, ಮಹಿಷಾಸುರನ

ರುಂಡ ಗಾಳಿಯಲ್ಲಿ ತಿರುಗಿ ನೆಲಮುಟ್ಟಿತು. ಮಹಿಷಾಸುರನ ಅಂತ್ಯವಾಯಿತು. ನವದುರ್ಗ ಸ್ವರೂಪ ಶಕ್ತಿಯಿಂದ ದೇವಿ ಮಹರ್ನವಮಿಯ ದಿನ ಮಹಿಷಾಸುರನ ವಧಿಸಿದರು. ದೇವತೆಗಳು ವಿಜಯ ದುಂದುಭಿ ಬಾರಿಸಿ ಆಕಾಶದಿಂದ ಪುಷ್ಪವರ್ಷವನ್ನು ಸುರಿಸಿದರು. ನಮೋ ಜಗನ್ಮಾತೆ ಎಂದು ಕೀರ್ತಿಸಿದರು. ಉಗ್ರರೂಪ ತಾಳಿದ ದೇವಿ ರಣರಂಗ ದಿಂದ ಅಂತರ್ಧಾನವಾಗಿ ಇಂದ್ರ ಕೀಲಾದ್ರಿ ಪರ್ವತದ ಮೇಲೆ ಕನಕ ದುರ್ಗಾದೇವಿಯಾಗಿ ನೆಲೆಸಿದರು. ಮಹಿಷಾ ಸುರನ ವಧೆಯಿಂದ ಜಗದಂಬೆ ಮಹಿಷಾ ಸುರಮರ್ದಿನಿ ಅದರು. ಮರುದಿನ ದಶಮಿಯನ್ನು ವಿಜಯ ದಶಮಿಯಾಗಿ ಸಂಭ್ರಮದಿಂದ ಹಬ್ಬವ ಆಚರಿಸಲಾಗುವುದು. ದೇವಿ ಆಯುಧಗಳಿಂದ ರಾಕ್ಷಸ ಸಂಹಾರ ಮಾಡಿರುವುದರಿಂದ ನವಮಿ ದಿನ ಬಳಸುವ ಆಯುಧಗಳ ಪೂಜೆ ಮಾಡುವ ಸಂಪ್ರದಾಯವಿದೆ. ಶರದ್ ಋತುವಲ್ಲಿ ಬರುವ ನವರಾತ್ರಿ ಆದುದರಿಂದ ಶರನ್ನವರಾತ್ರಿ ಎಂದು ದೇವಿಯ ಪೂಜೆ ಯನ್ನು ಆಚರಿಸಲಾಗುವುದು.

### ದೇವಿಯ ಮಹಾತ್ಮೆ

ದೇವಿಯ ಮಹಿಮೆ ಅಪಾರ. ಧರ್ಮರಾಜರು ಅಜ್ಞಾತ ವಾಸದಲ್ಲಿ ಯಾರಿಗೂ ಕಾಣದಂತೆ ದೇವಿಯ ಸ್ತೋತ್ರವನ್ನು ಪಠಿಸಿ ಪೂಜೆ ಮಾಡಿದರು. ಪಾಂಡವರು ವಿಜಯದಶಮಿ ಯಂದು ಆಯುಧಗಳನ್ನು ಬನ್ನಿ ವೃಕ್ಷದಿಂದ ತೆಗೆದು ಕೊಂಡು ಕುರುಕ್ಷೇತ್ರಕ್ಕೆ ಸಂಸಿದ್ಧರಾಗಿ ಜಯಗಳಿಸಿದರು.

### ವಸುದೇವರ ದೇವಿ ಉಪಾಸನೆ

ಜಾಂಬವಂತನ ಜೊತೆ ಗುಹೆಯಲ್ಲಿ ಶ್ರೀ ಕೃಷ್ಣ ಇಪ್ಪ ತ್ತೊಂದು ದಿನ ಯುದ್ಧ ಮಾಡುವಾಗ, ವಸುದೇವರು ನಾರದ ಮುನಿಯ ಸೂಚನೆಮೇರೆಗೆ ದೇವಿ ಉಪಾಸನೆ ಮಾಡಿದರು. ಶ್ರೀ ಕೃಷ್ಣ ಪರಮಾತ್ಮ ಮಣಿಯೊಡನೆ ಕ್ಷೇಮ ವಾಗಿ ಹೊರ ಬಂದರು.

### ಕಾಳಿದಾಸರಿಗೆ ದೇವಿಯ ಕೃಪೆ

ಕಾಳಿದಾಸರಿಗೆ ದೇವಿ ಸಾಕ್ಷಾತ್ಕಾರವಾಗಿ ಬೀಜಾ ಕ್ಷರವ ನಾಲಿಗೆ ಮೇಲೆ ಬರೆದಾಗ ವಿದ್ಯೆ, ಜ್ಞಾನ ಪಡೆದು ಕವಿರತ್ನ, ಮಹಾ ಪಂಡಿತರಾದರು. ವೇದಕಾಲದಲ್ಲಿ ನವರಾತ್ರಿ ಆಚರಣೆ, ಪೂಜೆಯಲ್ಲಿ ದೇವಿ ಗಾಯತ್ರಿ ಆರಾ ಧನೆಯಿಂದ ಶಕ್ತಿಯನ್ನು ಪಡೆಯಲು ಸಾಧನೆ ಮಾಡು ತ್ತಿದ್ದರು.

### ನವರಾತ್ರಿದೇವಿ ಅಲಂಕಾರ

ಒಂಬತ್ತು ದಿನಗಳಲ್ಲಿ ಬಾಲಾತ್ರಿಪುರಸುಂದರಿ. ಅನ್ನ ಪೂರ್ಣ, ಲಕ್ಷ್ಮಿ, ಸರಸ್ವತಿ, ಲಲಿತಾ, ರಾಜರಾಜೇಶ್ವರಿ, ಗಾಯತ್ರಿ ದುರ್ಗಾ ರೂಪದಲ್ಲಿ ಪೂಜೆ ಮತ್ತು ದೇವಿಯ ಆಲಯದಲ್ಲಿ ಅಲಂಕಾರ ಮಾಡುವರು. ದೇವಿ ಭಗವತಿ ನಿರ್ಗುಣ ಸ್ವರೂಪಿ. ದೇವತೆಗಳ ಕಾರ್ಯಸಿದ್ಧಿ ಕಾರ್ಯ ನಿರ್ವಹಣಕ್ಕಾಗಿ ಸಗುಣ ರೂಪವನ್ನು ಧರಿಸುವರು. ಭುಕ್ತಿ ಪ್ರದಾಯಿನಿ ಅನ್ನ ಪೂರ್ಣೇಶ್ವರಿ, ಭಾಗ್ಯ ಪ್ರದಾಯಿನಿ ಮಹಾಲಕ್ಷ್ಮಿ, ವಿದ್ಯಾ ಪ್ರದಾಯಿನಿ ಸರಸ್ವತಿ, ಪ್ರಕೃತಿ ಸ್ವರೂಪಿಣಿ ಶಾಕಾಂಬರಿದೇವಿ, ದೇವತೆಗಳಿಗೆ ಹವಿ ರ್ಭಾಗ ಕೊಡುವ ಸ್ವಾಹದೇವಿ, ಇವೆಲ್ಲ ಭಗವತಿಯ ಕೆಲವು ಸ್ವರೂಪ ಗಳು ಜಗನ್ಮಾತೆ ಸರ್ವ ಅಭೀಷ್ಟಗಳ ನೆರವೇರಿಸುವರು. ತಾಯಿಯ ಮಡಿಲು ಜಗದಲ್ಲಿ ಪರಮ ಸೌಖ್ಯ. ಅತ್ಯಂತ ಸುರಕ್ಷಿತ. ತಾಯಿ ಮಗುವಿಗೆ ಮೊದಲ ಗುರು ಮತ್ತು ದೈವ ಸಮಾನ, ಜನ್ಮ ಕೊಟ್ಟ ತಾಯಿಗೆ ವಂದನೆ, ಬ್ರಹ್ಮಾಂಡ ನಾಯಕಿ ಜಗನ್ಮಾತೆಗೆ ಶತ ಕೋಟಿ ವಂದನೆಗಳು, ಆತ್ಮ ನಿವೇದನೆ! ನವರಾತ್ರಿ ದಿನಗಳಲ್ಲಿ ದೇವಿ ಭಾಗವತ ಪಾರಾಯಣ, ಶ್ರವಣ, ದೇವಿಯ ಪೂಜೆ, ಉಪವಾಸ ಭಕ್ತಿಯಿಂದ ಮಾಡಿ ದೇವಿಯ ಕೃಪೆಗೆ ಪಾತ್ರರಾಗೋಣ. "ಜಯ ಜಯ ಹೇ ಮಹಿ ಷಾಸುರ ಮರ್ಧಿನಿ ರಮ್ಯ ಕಪರ್ದಿನಿ ಶೈಲ ಸುತೇ ಸರ್ವ ಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೆ ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣೀ ನಮೋಸ್ತುತೇ" !

ಓಂ ಶಾಂತಿ ಶಾಂತಿ ಶಾಂತಿಃ.



## ಸುಪ್ರಭಾತ

*ತಿರುಮಲೆಯಲ್ಲಿ ಶ್ರೀಸ್ವಾಮಿಯವರಿಗೆ ನಡೆಯುವ ಮೊದಲ ಸೇವೆ ಸುಪ್ರಭಾತ. ಶಯನ ಮಂಟಪದಲ್ಲಿ ರೇಷ್ಮೆ ಹಾಸಿಗೆಯ ಮೇಲೆ ಮಲಗಿರುವ ಶ್ರೀನಿವಾಸ ಪ್ರಭುವನ್ನು ಎಬ್ಬಿಸುವುದಕ್ಕೆ ಸುಪ್ರಭಾತ ಎನ್ನುತ್ತಾರೆ. ಪ್ರತಿದಿನ ಬೆಳಗಿನ ಜಾವದಲ್ಲಿ ಚಿನ್ನದ (ಬಂಗಾರದ) ಬಾಗಿಲ ಮುಂದೆ ಆಚಾರ್ಯ ಪುರುಷರು "ಕೌಸಲ್ಯಾ ಸುಪ್ರಜಾ ರಾಮ......" ಎಂದು ಸುಪ್ರಭಾತ ಶ್ಲೋಕಗಳನ್ನು ಹೇಳುತ್ತಿರುವಾಗ ಅದೇ ಸಮಯದಲ್ಲಿ ತಾಳ್ಳಪಾಕ ಅನ್ನಮಯ್ಯ ವಂಶಸ್ಥರು ಒಬ್ಬರು 'ಮೇಲುಕೋ ಶೃಂಗಾರರಾಯ........' ಅನ್ನುತ್ತಾ ಮೇಲುಕೊಲುವು (ಎಬ್ಬಿಸುವ) ಹಾಡುತ್ತಾರೆ.*

*ಈ ಸಮಯದಲ್ಲಿ ಅರ್ಚಕರು, ಜೀಯ್ಯರ್, ಆಲಯ ಅಧಿಕಾರಿಗಳು ಸುಪ್ರಭಾತ ಸೇವೆಗೆ ಟಿಕೆಟ್ ಪಡೆದ ಭಕ್ತರೆಲ್ಲರೂ ಬಂಗಾರದ ಬಾಗಿಲ ಮುಂದೆ ಸೇರಿ ಯಾವಾಗ ಚಿನ್ನದ ಬಾಗಿಲು ತೆರೆಯುತ್ತಾರೆ ಎಂದು ನಿರೀಕ್ಷಿಸುತ್ತಾರೆ.*

*ಸುಪ್ರಭಾತ ಸೇವೆಯಲ್ಲಿ ಸಿಗುವ ಶ್ರೀ ಹರಿಯ ಆಪಾದಮಸ್ತಕ ದರ್ಶನವನ್ನು "ವಿಶ್ವ ರೂಪ ಸಂದರ್ಶನ" ಎನ್ನುತ್ತಾರೆ. ಈ ದರ್ಶನದಲ್ಲಿ ಸಿಗುವ ಸ್ವಾಮಿಯ ಪಾದ ದರ್ಶನ ಮಾಡಿದರೆ ಸಾಕು ಪಾಪಗಳೆಲ್ಲಾ ತೊಲಗುತ್ತವೆ. ಆದ್ದರಿಂದಲೇ "ಪಾದ ದರ್ಶನಂ ಪಾಪ ವಿಮೋಚನಂ" ಎಂದು ಪ್ರಸಿದ್ಧಿ ಹೊಂದಿದೆ.*

## ಭಾಗವತ ಕಥಾಸಾಗರ

# ಪೃಥುಮಹಾರಾಜನ ಭಗವದ್ಧಾಮ ಗಮನ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್

ಪೃಥುವು ಒಮ್ಮೆ ಒಂದು ಯಜ್ಞವನ್ನು ನಿರ್ವಹಿಸಿದ್ದಾನೆ. ಅದರಲ್ಲಿ ಋಷಿಗಳು,ಬ್ರಾಹ್ಮಣರು,ದೇವತೆಗಳು,ರಾಜರ್ಷಿಗಳೆಲ್ಲರೂ ಪಾಲ್ಗೊಂಡಿದ್ದಾರೆ.ಆ ಸಭೆಯಲ್ಲಿ ಪೃಥುವು ಪೂಜಾರ್ಹರಾದವರೆಲ್ಲರನ್ನು ತಪ್ಪದೇ ಪೂಜಿಸಿದ್ದಾನೆ. ಸಭಾ ಸದಸ್ಯರ ನಡುವೆ ಆತನು ನಕ್ಷತ್ರಗಳ ನಡುವೆ ಸ್ಥಿತಗೊಂಡ ಪೂರ್ಣ ಚಂದ್ರನಂತೆ ಕಂಗೊಳಿಸಿದ್ದಾನೆ. ಆ ಬಳಿಕ ಪೃಥುವು ರಾಜ್ಯ ಪಾಲನೆ ಮಾಡುತ್ತಾ ಐಶ್ವರ್ಯವನ್ನು ಇಂದ್ರಿಯ ಭೋಗಕ್ಕೆ ವ್ಯಯಿಸದೇ ಅನಾಸಕ್ತನಾಗಿ ಕಾಲವನ್ನು ಕಳೆದಿದ್ದಾನೆ. ಮುಕ್ತ ಸ್ಥಿತಿಯಲ್ಲಿ ನಿಂತವನಾಗಿ ಸಮಸ್ತ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಾ ಆತನು ತನ್ನ ಪತ್ನಿ ಅರ್ಚಿಯೊಂದಿಗೆ ಐದು ಪುತ್ರರನ್ನು ಪಡೆದಿದ್ದಾನೆ. ಅವರೇ ವಿಜಿತಾಶ್ವ,ಧೂಮ್ರಕೇಶ, ಹರ್ಯಕ್ಷ, ದ್ರವಿಣ, ವೃಕುರೆಂಬುವರು. ಪೃಥುವು ಮಹಾಭಗವದ್ಭಕ್ತನಾದುದರಿಂದ ಪ್ರಜೆಗಳನ್ನೂ, ಅವರ ಅಭೀಷ್ಟೆಗಳನ್ನು ಅನುಸರಿಸಿ ಪ್ರಸನ್ನರನ್ನಾಗಿ ಮಾಡುವುದರ ಮೂಲಕ ಭಗವಂತನ ಸೃಷ್ಟಿಯನ್ನು ರಕ್ಷಿಸುವವನಾಗಿದ್ದಾನೆ. ಪೃಥುವಿನ ಆಜ್ಞೆ ಎಂದರೆ ಅದು ಅಗ್ನಿಯನ್ನೇ ಶಮನಗೊಳಿಸುವ ಗಾಳಿಯಂಥದ್ದು. ಅತಿ ಶೌರ್ಯವಂತನಾದ ಆತನು ಅಜೇಯನಾದ ಇಂದ್ರನನ್ನು ಹೋಲಿದ್ದಾನೆ. ಧರಿತ್ರಿಯಂತೆ ಸಹನೆಯುಳ್ಳ ಆತನು ಜನರ ಸರ್ವಾಭೀಷ್ಟಗಳನ್ನು ತೀರಿಸುವಲ್ಲಿ ಸ್ವರ್ಗವನ್ನೇ ಕೆಳಗಿಳಿಸಿದ್ದಾನೆ.ವೃಕ್ಷದಂತೆ ಆತನ ಎಲ್ಲಾ ಜನರ ಕೋರಿಕೆಗಳನ್ನು ತೀರಿಸಿದ್ದಾನೆ. ಸಮುದ್ರದಂತೆ ಅಗಾಧವಾದ ವರ್ಚಸ್ಸುಳ್ಳ ಆತನನ್ನು ಯಾರೂ ತಿಳಿಯಲಸಾಧ್ಯವಾಗಿತ್ತು. ಮೇರು ಪರ್ವತದಂತೆ ಆತನು ತನ್ನ ನಿಲುವನ್ನು ಸ್ಥಿರಗೊಳಿಸಿದ್ದಾನೆ. ಆತನ ವಿದ್ಯೆ-ಬುದ್ಧಿ ಧರ್ಮರಾಜನಿಗೆ ಸಮಾನವಾದವು. ಆತನ ಐಶ್ವರ್ಯವು ಮಣಿಧಾತುಪಿತನಾದ ಹಿಮಾಲಯವನ್ನು ಹೋಲುವಂಥವು. ಆತನ ಸಂಪತ್ತು ಕುಬೇರನ ಸಂಪತ್ತನ್ನು ಹೋಲುವಂತದು. ಪೃಥುವಿನ ಸೌಂದರ್ಯವು ಮನ್ಮಥನ ಸೌಂದರ್ಯವನ್ನು ಹೋಲುತ್ತಿದ್ದವು. ಶೌರ್ಯದಲ್ಲಿ ಆತನು ಸಿಂಹವನ್ನು, ಅನುರಾಗದಲ್ಲಿ ಸ್ವಾಯಂಭು ಮನುವನ್ನು,ನಿಯಂತ್ರಿಸುವುದರಲ್ಲಿ ಬ್ರಹ್ಮನನ್ನು ಹೋಲುವವನು ಈ ರೀತಿಯಾಗಿ ಆತನ ಅದ್ವಿತೀಯವಾದ ಕೀರ್ತಿ ಎಲ್ಲಾ ಲೋಕಗಳಲ್ಲೂ ವ್ಯಾಪಿಸಿದೆ. ಉಚ್ಚಸ್ಥಾಯಿಯಲ್ಲಿ ಕೀರ್ತಿಸಲ್ಪಡುವ ಆತನ ಯಶಸ್ಸು ರಾಮಚಂದ್ರನ ಕೀರ್ತಿಯಂತೆ ಮಧುರವಾಗಿದ್ದು ನರನಾರಿಯರ ಮನವನ್ನು ಆನಂದ ಪಡಿಸಿದೆ.

ಈ ರೀತಿಯಾಗಿ ಜನರಂಜಕನಾಗಿ ರಾಜ್ಯಪರಿಪಾಲನೆ ಮಾಡಿದ ಪೃಥವು ತಾನು ವೃದ್ಧನಾಗುತ್ತಿದ್ದಂತೆ ತಪಸ್ಸು ಮಾಡಲು ಪತ್ನಿಸಮೇತನಾಗಿ ಅರಣ್ಯಕ್ಕೆ ಹೊರಟು ನಿಂತಿದ್ದಾನೆ.ತನ್ನ ಮಗಳಂತಿರುವ ಧರಣಿಯನ್ನು ಆತ ತನ್ನ ಪುತ್ರರಿಗೆ ಒಪ್ಪಿಸಿದ್ದಾನೆ. ಗೃಹಸ್ಥ ಜೀವನದಿಂದ ನಿವೃತ್ತಿ ಹೊಂದಿದ ಆತನು ಪತ್ನಿಯೊಂದಿಗೆ ಅರಣ್ಯದಲ್ಲಿ ಉಗ್ರವಾದ ತಪಸ್ಸುಗೈದಿದ್ದಾನೆ. ವನದಲ್ಲಿ ಆತನು ಹಲವು ಕಾಲ ಕಂದಮೂಲಿಕೆಗಳನ್ನು ಭುಜಿಸಿದ್ದಾನೆ ಹಲವಾರು ಬಾರಿ ಹಣ್ಣು ಹಂಪಲು, ಎಲೆಗಳನ್ನು ತಿಂದಿದ್ದಾನೆ. ವಾರಕ್ಕೆ ಕೆಲವು ದಿನಗಳು ಆತ ಜಲವಾಸವನ್ನು ಮಾಡಿದ್ದಾನೆ. ಕಡೆಗೆ ಕೇವಲ ವಾಯು ಸೇವನೆಯಿಂದಲೇ ಜೀವನದ ಕಾಲವನ್ನು ಸಾಗಿಸಿದ್ದಾನೆ.ಅರಣ್ಯವಾಸದ ನೇಮಗಳನ್ನು ಪಾಲಿಸುತ್ತಾ ಋಷಿಗಣವನ್ನನುಸರಿಸಿ ಗ್ರೀಷ್ಮ ಋತುವಿನಲ್ಲಿ ಪಂಚಾಗ್ನಿಗಳನ್ನು ಸೇವಿಸಿದ್ದಾನೆ.ವರ್ಷ ಕಾಲದಲ್ಲಿ ವರ್ಷಧಾರೆಯಲ್ಲಿ ನೆನೆದಿದ್ದಾನೆ.ಶೀತ ಕಾಲದಲ್ಲಿ ಚಟಗಟ್ಟುವ ನೀರಿನಲ್ಲಿ ನಿಂತಿದ್ದಾನೆ. ಆತನು ಕೇವಲ ನೆಲದ ಮೇಲೆ ಮಲಗುವವನು.

ಪೃಥು ಮಹಾರಾಜನು ಇಂಥ ಕಠೋರವಾದ ಜೀವನವನ್ನು ಸಾಗಿಸಿದ್ದು ಕೇವಲ ವಾಕ್ ಮತ್ತು ಇಂದ್ರಿಯಗಳನ್ನು ನಿಗ್ರಹಿಸಲು ಮಾತ್ರವೇ ಅದನ್ನೆಲ್ಲಾ ಆತನು ಕೃಷ್ಣ ಪ್ರೀತ್ಯರ್ಥಕ್ಕೋಸ್ಕರ ಮಾಡಿದ್ದಾನೇ ಹೊರತು ಮತ್ತೊಂದಕ್ಕಲ್ಲವೇ ಅಲ್ಲ. ಈ ರೀತಿಯಾಗಿ ಪೃಥು ಮಹಾರಾಜ ಸಮಸ್ತ ಕಾಮ್ಯ, ಕರ್ಮ, ಕೋರಿಕೆಗಳಿಂದ ವಿಮುಕ್ತನಾಗಿದ್ದಾನೆ. ದೇಹ ಪರಿತ್ಯಾಗದ ಸಮಯ ಹತ್ತಿರವಾಗುತ್ತಲೇ ಪೃಥುವು ತನ್ನ ಮನಸ್ಸನ್ನು ಪೂರ್ತಿ




ಯಾಗಿ ಶ್ರೀ ಕೃಷ್ಣನ ಮೇಲೇಯೇ ಕೇಂದ್ರೀಕರಿಸಿದ್ದಾನೆ. ಈ ರೀತಿಯಾಗಿ ಪೂರ್ತಿಯಾಗಿ ಬ್ರಹ್ಮಾನುಭೂತಿ ಭಾವನೆಯಲ್ಲಿ ನೆಲೆಗೊಂಡು ಆತನು ದೇಹತ್ಯಾಗ ಮಾಡಿದ್ದಾನೆ. ಅದಕ್ಕಾಗಿಯೇ ಆತನು ಒಂದು ಪ್ರತ್ಯೇಕವಾದ ಆಸನವನ್ನು ಸ್ವೀಕರಿಸುವವನಾಗಿ ಗುದದ್ವಾರವನ್ನು ಮುಂಡದಲ್ಲೆಳೆದುಕೊಂಡು, ಅದರ ನಾಭಿ ಚಕ್ರ, ಹೃದಯ, ಕಂಠವನ್ನು ದಾಟಿ ಕಡೆಗೆ ಭ್ರೂಮಧ್ಯಕ್ಕೆ ಸೇರಿಸಿದ್ದಾನೆ. ನಂತರ ಅದನ್ನು ಮೆಲ್ಲಗೆ ಬ್ರಹ್ಮರಂಧ್ರಕ್ಕೆ ಎಳೆದು ಕೊಂಡಿದ್ದಾನೆ. ಆನಂತರ ಪ್ರಾಣ ವಾಯುವನ್ನು ವಾಯುವಿನಲ್ಲೂ ದೇಹವನ್ನು ಭೂಮಿಯಲ್ಲೂ,ದೇಹಾಗ್ನಿಯನ್ನು ಅಗ್ನಿಯಲ್ಲೂ ಆತನು ಮಿಳಿತಗೊಳಿಸಿದ್ದಾನೆ.ಕಟ್ಟಕಡೆಗೆ ಮಿಥ್ಯಾಹಂಕಾರವನ್ನು ಮಹತ್ತತ್ತ್ವದಲ್ಲಿ ವಿಲೀನಗೊಳಿಸಿದ ಪೃಥುವು ಆಧ್ಯಾತ್ಮಿಕ ಬಲದಿಂದ ಮುಕ್ತಿಯನ್ನು ಪಡೆದಿದ್ದಾನೆ.

ಪೃಥು ಮಹಾರಾಜನ ಪತ್ನಿಯಾದ ಅರ್ಚಿಯು ಸಹಾ ತನ್ನ ಪತಿಯಂತೆಯೇ ಸಮಸ್ತವಾದ ತಪಸ್ಸನ್ನು ಕೈಗೊಂಡಿದ್ದಾಳೆ. ಸುಕುಮಾರಿಯಾದ ಈ ರಾಣಿ ತನಗೆ ಅಭ್ಯಾಸವಿರದಿದ್ದರೂ ವನವಾಸದ ನಿಯಮಗಳನ್ನು ತನ್ನ ಪತಿಯೊಂದಿಗೆ ಸಂಪೂರ್ಣವಾಗಿ ನಿರ್ವಹಿಸಿದ್ದಾಳೆ.ನೆಲದ ಮೇಲೆ ಮಲಗಿದ್ದಾಳೆ. ಕೇವಲ ಎಲೆ ಕಾಯಿಗಳನ್ನೇ ತಿಂದಿದ್ದಾಳೆ. ಇದರಿಂದ ಆಕೆ ಎಷ್ಟೋ ಕೃಶಳಾಗಿದ್ದಾಳೆ. ಆದರೂ ಪತಿಯ ಸೇವಾ ಸುಖದಲ್ಲಿ ಅದೆಲ್ಲಾ ಆಕೆಗೆ ತಟ್ಟಲೇ ಇಲ್ಲ. ಹೀಗೆ ಪತಿ ಸೇವೆಯಲ್ಲೇ ಕಾಲ ಕಳೆದ ಅರ್ಚಿ ತನ್ನ ಪತಿ ದೇಹತ್ಯಾಗ ಮಾಡಿದ ನಂತರ ಸ್ವಲ್ಪ ಹೊತ್ತು ವಿಲಾಪಿಸಿ, ಒಂದು ಪರ್ವತದಡಿಯಲ್ಲಿ ಚಿತೆಯನ್ನು ಏರ್ಪಡಿಸಿ ಆದರ ಮೇಲೆ ದೇಹವನ್ನು ಇಟ್ಟಿದ್ದಾಳೆ. ಬಳಿಕ ಅವಶ್ಯಕವಾದ ಅಂತ್ಯಕ್ರಿಯೆಗಳನ್ನೆಲ್ಲಾ ಆಚರಿಸಿ, ನದಿಯಲ್ಲಿ ಸ್ನಾನಮಾಡಿ,ದೇವತಾ ವಂದನೆಯನ್ನು ಮಾಡಿ, ಅಗ್ನಿ ಪ್ರದಕ್ಷಿಣೆಯನ್ನು ಮಾಡಿ, ಪತಿಯ ಪಾದಪದ್ಮಗಳನ್ನೇ ನೆನೆಯುತ್ತಾ ತಾನೂ ಸಹ ಆ ಚಿತೆಯನ್ನೇ ಪ್ರವೇಶಿಸಿದ್ದಾಳೆ ಅರ್ಚಿ ಮಾಡಿದ ಅಪರ ಕಾರ್ಯಗಳನ್ನು ನೋಡಿದ ನೂರಾರು ದೇವ ಪತ್ನಿಯರು ತಮ್ಮ ಪತಿಯರೊಡಗೂಡಿ ಸಂತುಷ್ಟರಾಗಿ ಆಕೆಯನ್ನು ಶ್ಲಾಘಿಸಿದ್ದಾರೆ.ಆಗ ದೇವತೆಗಳು,ಅವರ ಪತ್ನಿಯರು, ಚಿತೆಯ ಮೇಲೆ ಪುಷ್ಪವೃಷ್ಟಿಯನ್ನೇ ಕರೆದು ತಮ್ಮಲ್ಲಿ ತಾವೇ ಹೀಗೆ ಮಾತನಾಡಿ ಕೊಂಡಿದ್ದಾರೆ.

“ಮಹಾರಾಣಿ ಆರ್ಚಿ ಬಹಳ ಪುಣ್ಯವಂತಳು. ಜಗದೇಕ ಚಕ್ರವರ್ತಿಯಾದ ಪೃಥುವಿನ ಪಟ್ಟದರಸಿಯಾಗಿ ಆಕೆ ವಿಷ್ಣುವನ್ನು ಲಕ್ಷ್ಮಿದೇವಿ ಅರ್ಚಿಸಿದಂತೆ ತನ್ನ ಪತಿಯನ್ನು ಆರಾಧಿಸಿದ್ದಾಳೆ.ಪತಿವ್ರತೆಯಾದ ಆಕೆಯನ್ನು ನೋಡಿ! ತನ್ನ ಪುಣ್ಯ ಕಾರ್ಯಗಳಲ್ಲಿಯೂ ಸಹಾ ಆಕೆ ತನ್ನ ಪತಿಯನ್ನೇ ಅನುಸರಿಸಿದ್ದಾಳೆ.ಈ ಭೌತಿಕ ಜಗತ್ತಿನಲ್ಲಿ ಮಾನವನ ಜೀವನಾವಧಿ ಬಹು ಮಿತವಾದುದು.ಆದರೆ ಭಕ್ತಿ ಯೋಗದಲ್ಲಿ ನೆಲೆಯೂರಿರುವವರು ನಿಜವಾಗಿಯೂ ಮೋಕ್ಷಪಥದಲ್ಲಿರುವವರಾದ್ದರಿಂದ ಅವರು ಖಚಿತವಾಗಿ ಭಗವದ್ಧಾಮಕ್ಕೆ ತೆರಳುತ್ತಾರೆ. ಅವರಿಗೆ ದುರ್ಲಭವಾದುದು ಯಾವುದೂ ಇಲ್ಲ”

ದೇವತಾಪತ್ನಿಯರು ಈ ವಿಧವಾಗಿ ತಂತಮ್ಮಲ್ಲೇ ತಾವು ಚರ್ಚಿಸುವಷ್ಟರಲ್ಲೇ ಅರ್ಚಿ ತನ್ನ ಪತಿಯು ಸೇರಿದ ಲೋಕವನ್ನೇ ಸೇರಿಕೊಂಡಿದ್ದಾಳೆ. ಭಾಗವತ್ತೋತ್ತಮನಾದ ಪೃಥುಮಹಾ ರಾಜನ ಕುರಿತು ಉದಾರವಾದ ಚರಿತ್ರೆಯನ್ನು ಮೈತ್ರೇಯರು ವಿದುರರಿಗೆ ವಿವರಿಸಿದ್ದಾರೆಂದು ಭಾಗವತದ ಚತುರ್ಥಿ ಸ್ಕಂದದಲ್ಲಿ ಹೇಳಲಾಗಿದೆ. ದಿವ್ಯವಾದುದೂ, ಘನವಾದುದೂ ಆದ ಪೃಥು ಚರಿತ್ರೆಯು ಅಪೂರ್ವದ ಶ್ರವಣ ಫಲವನ್ನು ಕೂಡ ನೀಡುತ್ತದೆ.ಅದೇನೆಂದು ಶ್ರದ್ಧೆಯಿಂದ ಗಮನಿಸಿರಿ!

ಪೃಥುಮಹಾರಾಜನ ಸದ್ಗುಣಗಳನ್ನು ಶ್ರದ್ಧೆಯಿಂದ, ನಿಶ್ಚಯವಾಗಿ ಕೀರ್ತಿಸುವವನಿಗೆ, ಪಠಿಸುವವನಿಗೆ, ಶ್ರವಣಿಸುವವನಿಗೆ, ಇತರರಿಗೆ ತಿಳಿಸುವವನಿಗೆ ಪೃಥುವು ಹೊಂದಿದ ಲೋಕವೇ ದೊರಕುತ್ತದೆ. ಅಂದರೆ ಆತನಿಗೆ ವೈಕುಂಠ ಪ್ರಾಪ್ತಿಯುಂಟಾಗುತ್ತದೆ. ಪೃಥು ಚರಿತ್ರೆಯನ್ನು ಶ್ರವಣ ಮಾಡುವ ಬ್ರಾಹ್ಮಣನು ಬ್ರಾಹ್ಮಣತ್ವದಿಂದ ಪರಿಪೂರ್ಣನಾಗುತ್ತಾನೆ. ಕ್ಷತ್ರಿಯನು ಪ್ರಪಂಚಕ್ಕೇ ಚಕ್ರವರ್ತಿಯಾಗುತ್ತಾನೆ. ವೈಶ್ಯನು ಇತರ ವೈಶ್ಯರಿಗೆ, ಪಶುಪಕ್ಷಿಗಳಿಗೆ ಅಧಿಪತಿಯಾಗುತ್ತಾನೆ. ಶೂದ್ರನೂ ಉತ್ತಮಭಕ್ತನಾಗುತ್ತಾನೆ. ಪೃಥುಚರಿತ್ರೆಯ ಶ್ರವಣದಿಂದ ಸಂತಾನ ಹೀನನು ಉತ್ತಮ ಸಂತಾನವನ್ನು ಪಡೆಯುವವನಾಗುತ್ತಾನೆ. ದರಿದ್ರನು ಧನವಂತನಾಗುತ್ತಾನೆ. ಈ ಚರಿತ್ರೆಯನ್ನು ಮೂರು ಹೊತ್ತು ಕೇಳುವುದರಿಂದ ಮನುಷ್ಯನಿಗೆ ಸಂಘದಲ್ಲಿ ಒಳ್ಳೆಯ ಸ್ಥಾನಮಾನಗಳುಂಟಾಗುತ್ತವೆ. ಮೂರ್ಖನಾದರೂ ಒಳ್ಳೆಯ ಪಂಡಿತನಾಗುತ್ತಾನೆ. ಸಕಲ ಅಮಂಗಳವು ತೊಲಗಿ ಹೋಗುತ್ತವೆ. ಪೃಥು ಚರಿತ್ರೆಯನ್ನು ಕೇಳುವುದರಿಂದ ಮನುಷ್ಯನು ದೊಡ್ಡ ಶ್ರೀಮಂತನಾಗುತ್ತಾನೆ. ಆಯುಷ್ಯವನ್ನು ವೃದ್ಧಿಗೊಳಿಸಿಕೊಳ್ಳುತ್ತಾನೆ. ಸ್ವರ್ಗ ಲೋಕವನ್ನು ಹೊಂದುತ್ತಾನೆ. ಕಲಿಯ ಕಲ್ಮಶವನ್ನು ನಿವಾರಿಸಿಕೊಳ್ಳುತ್ತಾನೆ. ಧರ್ಮಾರ್ಥಕಾಮ ಮೋಕ್ಷ ಕಾರಣಗಳನ್ನು ವೃದ್ಧಿಗೊಳಿಸಿಕೊಳ್ಳುತ್ತಾನೆ. ಆದ್ದರಿಂದ ಇಂತಹ ಕೋರಿಕೆಗಳನ್ನು ಬಯಸುವವರು ಪೃಥು ಚರಿತ್ರೆಯನ್ನು ಪಠಿಸುವುದು,ಕೇಳುವುದು,ಎಲ್ಲಾ ರೀತಿಯಲ್ಲೂ ಶ್ರೇಯಸ್ಕರವಾದುದು. ವಿಜಯವನ್ನು ಕೋರುವ ರಾಜನು ರಥದ ಮೇಲೆ ಏರುವ ಮುನ್ನ ಪೃಥು ಚರಿತ್ರೆಯನ್ನು ಕೇಳಿದರೆ ಸಾಮಂತರು ಅಪ್ರಯತ್ನವಾಗಿ ಕಪ್ಪಕಾಣಿಕೆಗಳನ್ನು ಸಲ್ಲಿಸುವರು. ಕೃಷ್ಣಭಕ್ತಿಯಲ್ಲಿ ನಿರತರಾದ ವಿಶುದ್ಧ ಭಕ್ತರು ಸಹಾ ಪೃಥುಚರಿತ್ರೆಯನ್ನು ಕೇಳಬೇಕು, ಪಠಿಸಬೇಕು, ಇತರರೂ ಕೇಳುವಂತೆ ಮಾಡಬೇಕು. ಯಾರು ಈ ಚರಿತ್ರೆಯನ್ನು ಕೇಳುತ್ತಾರೋ ಅವರು ವಿಷ್ಣುಲೋಕವನ್ನೇ ಹೊಂದುತ್ತಾರೆ. ಅಷ್ಟೇ ಅಲ್ಲ ಮಹತ್ತರವಾದ ಆದರಗಳಿಂದ ಭಕ್ತಿಯಿಂದ ನಿತ್ಯವೂ ಇದನ್ನು ಪಠಿಸುವವರು, ಕೀರ್ತಿಸುವವರು, ವರ್ಣಿಸುವವರು ಸಂಸಾರ ಭವ ಸಾಗರವನ್ನು ಹಿಮ್ಮೆಟ್ಟಿ ನಾವೆಯಂತಹ ಭಗವತ್ಪಾದ ಪದ್ಮಗಳ ದಡವನ್ನು, ಅಕುಂಠಿತವಾದ ವಿಶ್ವಾಸವನ್ನು ಶ್ರದ್ಧೆಯನ್ನು ಹೊಂದುತ್ತಾರೆ.

## ಮಿನುಗುವ ದೀಪ

1. ಹೊಂಬೆಳಕಿನ ಕಂಗೊಳಿಸುವ ಕಿರಣದಲಿ
ಮುನ್ಸೂಚನೆ ತಿಳಿಸುವ ಬಾಳಿನ ಓಕುಳಿ
ಮುಂಜಾನೆಯ ವೇಳೆಯಲಿ
ಸುಪ್ರಭಾತದ ಭಕ್ತಿಯ ರವಳಿ
ಮುಂದಿನ ಬಾಳಿನ ಏಳಿಗೆಗಾಗಿ
ಬೇಡುತ ಪ್ರಾರ್ಥಿಸುತಲಿ

2. ಆತ್ಮವಿಶ್ವಾಸ, ನಂಬಿಕೆ,
ಧೈರ್ಯ, ಸದೃಢತೆಗಳಿರಲು
ಬದುಕಲ್ಲಿನ ಕತ್ತಲನ್ನು ಭೇದಿಸಿ
ಜ್ಞಾನದ ಬೆಳಕು ಹೊಮ್ಮುವುದರೊಂದಿಗೆ
ಶಕ್ತಿಯ ರೂಪದ ದೀಪವು
ಮನಸ್ಸನ್ನು ಮುನ್ನಡೆಸುತ್ತಿರುತ್ತದೆಯೋ
ಅದು....! ಜ್ಞಾನೋದಯದ ಅಮೃತಫಳಿಗೆ...!

3. ಈ ಘಳಿಗೆ ಮಾನವನ ಬದುಕಿನ ದಿಕ್ಕನ್ನೇ
ಬದಲಾಯಿಸುವ ಹೊಂಬೆಳಕಿನ
ಮುನ್ಸೂಚನೆಯ ದೈವಭಕ್ತಿ
ದೇಶಭಕ್ತಿ ಲೋಕಸೇವೆಯಂತಃ
ಕಾರ್ಯದಿ ಸಾಗುವುದೇ...! ಈ ಬಗೆ...! ದೇಶದೆಡೆಗೆ...!



4. ದೇಶಭಕ್ತಿಯ ಭಾವವು ಎಂದೆಂದಿಗೂ ಹೀಗಿರಲಿ
'ಸ್ವಚ್ಛ ಭಾರತ' ದೆಡೆಗೆ ಸದಾ ಕೈ ಜೋಡಿಸಿ ಮುನ್ನಡೆಸಲಿ
ದೇಶದ ಕನಸು ನನಸಾಗಿಸುವ ಛಲವು ಎಲ್ಲರ
ಹೃದಯದಲ್ಲಿ ಬೆಳಗಲಿ ಈ ದೀಪಾವಳಿ

- ಕು|| ಬಿ.ಎಸ್.ಮಮತಾ




106 ನೆ ಯ ಶಾಸನದಲ್ಲಿ ಶ್ರೀರಂಗನಾಥ ಯಾದವ ರಾಯನ ಆಳ್ವಿಕೆಯ 19 ನೆಯ ವರ್ಷದಲ್ಲಿ (ಕ್ರಿ.ಶ.1355-56) ಶ್ರೀ ವೆಂಕಟೇಶ್ವರಸ್ವಾಮಿಯ ಉತ್ಸವ ವಿಗ್ರಹದ ಹೆಸರು ಮಲೈ ಕ್ಕಿನಿಯ ನಿನ್ರ ಪೆರುಮಾಳೆಂದೂ,ಆತನು ಇಬ್ಬರು ನಾಚ್ಚಿಯಾರರು (ನಾಯಕಿಯರು)ಗಳೊಡನೆ ಸೇರಿ ಪ್ರತಿ ಉತ್ಸವದ ನಾಲ್ಕನೆಯ ದಿಂದ ಚೇದಿರಾಯನ್ ಮಂಟಪದಲ್ಲಿ ಆಸೀನನಾಗಿರುವಾಗ, ಸ್ವಾಮಿಯ ಶ್ರೀ ಭಂಡಾರಕ್ಕೆ ತಳುವಕ್ಕುಲ ಪಲ್ಲವರಾಯರ್ ಸಲ್ಲಿಸಿದ 400 ಪಣಗಳ ಬಡ್ಡಿಯಿಂದ ಪೂಜೆಗೆ ಬೇಕಾದ ಸಾಹಿತ್ಯವನ್ನು ಪಡೆಯಬೇಕೆಂದೂ ತಿಳಿಸುವುದಾಗಿದೆ.

104 ನೇ ಶಾಸನದಲ್ಲಿ ನಾಚ್ಚಿಯಾರ್ ಎಂಬ ಪ್ರಯೋಗ ವಿದ್ದರೂ ಈ ಶಾಸನವು ಒಂದು ಚೂರು ತುಂಡಾಗಿರುವು ದರಿಂದಾಗಿ ಮಲೈಕ್ಕಿನಿಯ ನಿನ್ರಪೆರುಮಾಳ್ ಕಂಡು ಬರದು. ಹಾಗಾಗಿ ಮಲೈಕ್ಕಿನಿಯ ನಿನ್ರಪೆರುಮಾಳ್ ಎಂಬುದನ್ನೂ, ಆತನ ಇಬ್ಬರು ನಾಯಕಿಯರು ಶ್ರೀದೇವಿ ಭೂದೇವಿಯರೆಂಬುದನ್ನೂ ಇಲ್ಲಿಯೇ ಮೊದಲಬಾರಿಗೆ ನಾವು ನೋಡುತ್ತೇವೆ. ಇದರಿಂದಾಗಿ ಈ ಮೂರೂ ವಿಗ್ರಹಗಳನ್ನು ಹೊಸದಾಗಿ ಬಳಕೆಗೆ ತಂದ ರೆಂದೂ,ಪ್ರಾಯಶಃ 14 ನೇ ಶತಮಾನದ ಎರಡನೆಯ ಪಾದದಲ್ಲಿ ಈ ವಿಗ್ರಹಗಳನ್ನು ಆಲಯ ಪ್ರವೇಶಗೊಳಿಸಿರಬೇಕೆಂದೂ ತೋರುತ್ತದೆ. 7 ನೇ ಶತಮಾನದಲ್ಲಿ ಸಾಮವೈರಾಣಿಯು ಪ್ರತಿ ಷ್ಠಾಪಿಸಿದ ಬೆಳ್ಳಿಯ ಮಣವಾಳ ಪೆರುಮಾಳ ವಿಗ್ರಹವು ಈ ಹೊತ್ತಿಗೆ ಬಹು ಚಿಕ್ಕದ್ದು ಎಂದು ಕಂಡು ಬಂದು ನಾಚ್ಚಿಯಾರ್ ವಿರಹಿತವಾಗಿದ್ದುದೇ ಹೊಸ ದೊಡ್ಡ ವಿಗ್ರಹಗಳ ಪ್ರವೇಶಕ್ಕೆ ಕಾರಣವಾಗಿರಬೇಕು. ಹಾಗಾಗಿಯೇ ಆ ವಿಗ್ರಹವನ್ನು ಇತರ ಬಳಕೆಗೆ ಉಪಯೋಗಿಸುತ್ತ ಮೆರವಣಿಗೆಯಲ್ಲಿ ಹೊಸ ಮೂರ್ತಿ ಗಳನ್ನು ಬಳಕೆಗೆ ತಂದಿರಬೇಕು.

ಜೊತೆಗೇ ಈ ದಾಖಲೆಯ ಕೊನೆಯಲ್ಲಿ, ಪೂಜೆ ನಿವೇ ದನೆಗಳಿಗೆ ಏರ್ಪಾಡು ಮಾಡಿದ ವ್ಯಕ್ತಿಗೆ ನಿವೇದನೆಯ ಕಾಲು ಭಾಗದ ಪ್ರಸಾದ ಸೇರತಕ್ಕದ್ದು ಎಂಬ ನಿಯಮವನ್ನೂ ನಾವು ಕಾಣುತ್ತೇವೆ.ವೆಂಕಟೇಶ್ವರ ಸ್ವಾಮಿಗೆ ಈ ಹಿಂದೆ ನೈವೇದ್ಯ ಗಳನ್ನು ನೀಡಿದ ಯಾರಿಗೂ ಇಂತಹ ಒಂದು ನಿಯಮ ಅನ್ವಯ ವಾಗಿದ್ದನ್ನು ನಾವು ಕಾಣಲಾರೆವು. ಪುರಟ್ಟಾಸಿ ಹಾಗೂ ಚಿತ್ತಿರೈ ತಿಂಗಳುಗಳಲ್ಲಿ ಎರಡು ಉತ್ಸವಗಳು ನಡೆಯುತ್ತಿದ್ದಿತೆಂಬುದನ್ನು 74, 75 ನೆಯ ಶಾಸನಗಳಲ್ಲಿ ನೋಡುವೆವು.73 ಹಾಗೂ 78 ನೆಯ ಶಾಸನಗಳಲ್ಲಿ ಯಾವುದೋ ಒಂದು ಮಂಟಪದಲ್ಲಿ - ಬಹುತೇಕ ಆಲಯದ ಹೊರಗಿನ ಮಂಟಪದಲ್ಲಿ - ನಿವೇದನೆ ನಡೆಯುವಂತೆ ದಾಖಲೆಯಾಗಿದೆ. ಇವು ನಾಲ್ಕೂ ಶಾಸನಗಳೂ ತೆಲುಗು ಪಲ್ಲವ ರಾಜನಾದ ವಿಜಯ ಗಂಡಗೋಪಾಲನ ಆಳ್ವಿ ಕೆಯ ಐದನೆಯ ವರ್ಷವನ್ನು ಹೇಳುತ್ತವೆಯಾಗಿ ಗಂಡ ಗೋಪಾ ಲನ್ ಮಾಡೈ, ಮಾಡೈಗಳನ್ನು ಹೇಳುವುದಾಗಿ, ಈ ನಾಲ್ಕೂ ದಾಖಲೆಗಳೂ ಕ್ರಿ.ಶ. 1255 - 1260 ರ ಹೊತ್ತಿಗೆ ಅಥವಾ ಆ ಹಿಂದೆ ಮುಂದೆ ಉಂಟಾಗಿರಬೇಕು.ಆದರೆ ಯಾವ ಒಂದು ಅಥವಾ ಎರಡು ಅಥವಾ ಮೂರು ವಿಗ್ರಹಗಳು ನಾಲ್ಕೂ ಬೀದಿ ಗಳಲ್ಲಿ ಮೆರವಣಿಗೆ ಬರುತ್ತಿದ್ದವೆಂಬ ಬಗ್ಗೆ ಆ ವಿಗ್ರಹಗಳು ವಿಶ್ರಾಂತಿ ಪಡೆಯುತ್ತಿದ್ದ ಮಂಟಪಗಳು ಇದ್ದಂತಹ ಹೂವಿನ ತೋಟಗಳ ಬಗ್ಗೆ, ಅಲ್ಲಿ ನೀಡಲಾಗುತ್ತಿದ್ದ ನೈವೇದ್ಯಗಳ ಬಗ್ಗೆ - ಇವೆಲ್ಲವೂ ಬಳಕೆಯಲ್ಲಿದ್ದ ಪ್ರತ್ಯೇಕವಾದ ವಾಹನದಲ್ಲಿ ವಿಗ್ರಹಕ್ಕೆ ದೊರೆಯುವ ಸ್ಥಳಾವಕಾಶವನ್ನು ಅವಲಂಭಿಸಿರುವುದರಿಂದಾಗಿ ಈ ಯಾವೊಂದು ವಿಷಯವೂ ತಿಳಿದುಬಂದಿಲ್ಲ.

107 ನೇ ಶಾಸನವು ಶ್ರೀರಂಗನಾಥ ಯಾದವರಾಯನ ಆಡಳಿತ ಕಾಲಕ್ಕೆ ಸೇರಿದ್ದು ಉತ್ಸವ ವಿಗ್ರಹಗಳಿಗೆ ಉತ್ಸವ

ಸಮಯದಲ್ಲಿ ಆಲಯ ಪ್ರವೇಶದ್ವಾರದಲ್ಲಿ ಒಂದು ತಿರುಬ್ಬೋನಕ ನಿವೇದನೆಯನ್ನೂ ಆಸೀನವಾಗಿ ತಮಿಳು ಪ್ರಬಂಧಗಳ ಒಂದು ಭಾಗವಾದ 'ತಿರುವಾಯ್ಮೊಳಿ'ಯನ್ನು ಆಲಿಸುವಾಗ ಒಂದು ತಿರುಬ್ಬೋನಕ ನಿವೇದನೆಯನ್ನೂ ನೀಡಬೇಕೆಂದು ವಿಧಿಸುವುದು.

(61 ನೇ ಶಾಸನದಲ್ಲಿ ಕ್ರಿ.ಶ. 1264 ರ ಹೊತ್ತಿಗೆ ತಿರುಪತಿಯ ಗೋವಿಂದ ರಾಜಸ್ವಾಮಿ ಆಲಯದಲ್ಲಿ ತಿರುಮೊಳಿ ಪಠಣವಾಗುತ್ತಿದ್ದುದನ್ನು ನೋಡಲಾಗಿದೆ. 74 ನೇ ಶಾಸನದಲ್ಲಿ 13 ನೆಯ ಶತಮಾನದ ದ್ವಿತೀಯಾರ್ಧದಲ್ಲಿ ತಿರುಮಲೆಯ ಆಲಯದಲ್ಲಿ ಹಾಡುತ್ತಿದ್ದುದನ್ನು ಕಂಡಿದ್ದೇವೆ. ಇಲ್ಲಿ 14 ನೇ ಶತಮಾನದ ಎರಡನೆಯ ಅಥವಾ ಮೂರನೆಯ ಪಾದದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿ ಆಲಯದಲ್ಲಿ ತಿರುವಾಯ್ಮೊಳಿಯನ್ನು ಹಾಡುವ ಪದ್ಧತಿಯನ್ನು ಕಾಣುತ್ತೇವೆ. ಈ ಹೊತ್ತಿಗೆ ಎರಡೂ ಆಲಯಗಳಲ್ಲಿ ವೈಷ್ಣವ ಸಂಪ್ರದಾಯ ತುಂಬಿರುವುದನ್ನು ನೋಡುತ್ತೇವೆ.

109 ನೆ ಯ ಶಾಸನವು ತಮಿಳು ಪದ್ಯರೂಪದಲ್ಲಿದ್ದು, ಶ್ರೀರಂಗನಾಥ ಯಾದವರಾಯನು ತನ್ನ ಶತ್ರುಗಳನ್ನು ಜಯಿಸಿ ಅವರುಗಳೆಲ್ಲ ತಮ್ಮ ತಮ್ಮ ನಗರಗಳನ್ನು ಬಿಟ್ಟು ಪರ್ವತಗಳನ್ನು ಸೇರುವಂತೆ ಮಾಡಿ,ತನ್ನ ಗಾಯಗೊಂಡ ಎದೆಯ ಭಾಗಕ್ಕೆ ತಂಪನ್ನೆರೆಯುವಂತೆ ಆಭರಣ ರೂಪವಾಗಿ ಹೂವಿನ ಹಾರಗಳನ್ನು ಧರಿಸಿದವನಾಗಿ, ವೆಂಕಟ ನಗದ ಮೇಲೆ ತನಗಾಗಿ ಒಂದು ಶಾಶ್ವತವಾದ ಅರಮನೆಯನ್ನು ನಿರ್ಮಿಸಿದ ಎಂದು ಆತನ ಆಡಳಿತದ ಹದಿನಾರನೆಯ ವರ್ಷದಲ್ಲಿ (ಕ್ರಿ.ಶ. 1352 - 53 ) ತಿಳಿಸುವುದು. ತಿರುಮಲೆಯಲ್ಲಿ ಈಗ ಇರುವ ಹತೀರಾಮಜೀ ಮಠವೇ ಪ್ರಾಯಶಃ ಈ ಅರಮನೆಯಾಗಿರಬೇಕು.

110 ನೇ ಶಾಸನವು ಈತನ ಬಿರುದುಗಳನ್ನು ಉಗ್ಘಡಿಸುತ್ತದೆ. ಈತನು ರಣರಂಗದಲ್ಲಿ ರಾಮನೆಂದೂ, ಚಂದ್ರವಂಶದ ಆಭರಣವೆಂದೂ , ಶಕವರ್ಷ 181 - ಇದು ಶಕವರ್ಷ 1281 ಆಗಿರಬೇಕು - ವಿಕಾರಿ ಸಂವತ್ಸರವೆಂದೂ- ಈ ವರ್ಷ ಶ್ರೀರಂಗನಾಥಯಾದವರಾಯನ ಆಡಳಿತದ ಕಡೆಯ ಹಾಗೂ 24ನೆಯ ವರ್ಷವಾಗಿದೆ - (ಕ್ರಿ.ಶ.1260) ಹೀಗಾಗಿ ವಿಜಯನಗರದ ಮೊದಲ ಇಬ್ಬರು ರಾಜರು 1 ನೇ ಹರಿಹರ ಹಾಗೂ 1 ನೇ ಬುಕ್ಕರ ಸಮಕಾಲೀನನಾಗಿರಬೇಕು. ಕ್ರಿ.ಶ. 1336ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಸಂಗಮವಂಶದ ಮೊದಲ ಇಬ್ಬರು ಅರಸರ ಕೈ ಕೆಳಗೆ ಪ್ರಾಯಶಃ ಸಾಮಂತನಾಗಿದ್ದಿರಬೇಕು. (ಪುಟ 11 ಸಂಪುಟ -1)

113 ನೆಯ ಶಾಸನವು ಒಬ್ಬಾನೊಬ್ಬ ಯಾದವರಾಯನ ಆಡಳಿತದ- ಪ್ರಾಯಶಃ ಶ್ರೀರಂಗನಾಥ ಯಾದವರಾಯನ ಕಾಲದಲ್ಲಿ-ಮಹಾನಾಯಕರಲ್ಲಿ ಒಬ್ಬನಾದ ಎರಮಂಚಿ ಪೆರಿಯ ಪೆಮ್ಮನಾಯಕರು-ಭಾಷೆಗೆ ತಪ್ಪುವ ರಾಯರಗಂಡ ಬಿರುದಾಂಕಿತರಾದ ಈತ-ತಿರುಮಲೆಯಲ್ಲಿ ವಸಂತೋತ್ಸವಕ್ಕೆಂದು ಬಂದಾಗ ದೇವರ ಮುಂದೆ ನಂದಾದೀಪವನ್ನು ಹಚ್ಚಿಡಲು 32 ಹಸುಗಳನ್ನೂ ಒಂದು ಗೂಳಿಯನ್ನೂ ದಾನ ಮಾಡಿದನೆಂದು ತಿಳಿಸುವುದು.

114 ನೆಯ ಶಾಸನವು ಶಾರ್ವರಿ ಸಂವತ್ಸರದ (ಕ್ರಿ.ಶ. 1361) ಲ್ಲಿ ತಿರುವೆಂಕಟ ಮುಡೈಯಾನನಿಗೆ ಪಾಪ್ಪುನಾಯಕರ್ ಪೆರಿಯ ಪಪ್ಪು ನಾಯಕರ್ ಎಂಬಾತ ಒಂದು ನಂದಾದೀಪಕ್ಕಾಗಿ 32 ಹಸುಗಳನ್ನೂ ಒಂದು ಗೂಳಿಯನ್ನೂ ನೀಡಿದುದನ್ನು ಗಮನಿಸ

## ತೋಮಾಲೆ ಸೇವೆ



*ತಿರುಮಲೆಯ ಆನಂದ ನಿಲಯದಲ್ಲಿ ಶ್ರೀವೆಂಕಟೇಶ್ವರ ಸ್ವಾಮಿಯವರ ಮೂಲ ವಿರಾಟ್‌ಗೂ ಉತ್ಸವ ಮೂರ್ತಿಗಳಿಗೂ..... ಇನ್ನು ಬೇರೆ ವಿಗ್ರಹಗಳಿಗೂ ಹೂವಿನ ಮಾಲೆಗಳಿಂದ, ತುಲಸಿ ಮಾಲೆಗಳಿಂದ ಅಲಂಕರಿಸುವ ಕಾರ್ಯಕ್ರಮವನ್ನು "ತೋಮಾಲೆ ಸೇವೆ" ಅನ್ನುತ್ತಾರೆ. ಭುಜದ ಮೇಲಿನಿಂದ ನೇತಾಡುವಂತೆ ಅಲಂಕರಿಸುವ ಸ್ವಾಮಿಯ ಪುಷ್ಪಾಲಂಕರಣ ವಿಧಾನವನ್ನು "ತೋಳ್ ಮಾಲೈ" ಎನ್ನುತ್ತಾರೆ.ಅದೇ "ತೋಮಾಲೆ"ಯಾಗಿ ಬದಲಾಗಿದೆ ಅನ್ನುತ್ತಾರೆ.ತೋಳ್ ಎಂದರೆ ಭುಜ ಎಂದರ್ಥ.*

*ಶುಲ್ಕ ಸಲ್ಲಿಸಿದ ಭಕ್ತರೂ ಕೂಡ ಈ ಸೇವೆಯಲ್ಲಿ ಪಾಲ್ಗೊಂಡು ದರ್ಶನ ಪಡೆಯಬಹುದು. ಆದರೆ ಸಾಯಂಕಾಲದ ಹೊತ್ತು ನಡೆಯುವ ತೋಮಾಲೆ ಸೇವೆ ಮಾತ್ರ ಏಕಾಂತವಾಗಿ ನಡೆಯುತ್ತದೆ.*

*ಏಕಾಂಗಿಗಳು ಇಲ್ಲವೇ ಜೀಯಂಗಾರರು ಹೂವಿನ ಅರೆಯಿಂದ ಸಿದ್ಧಪಡಿಸಿದ ಹೂಮಾಲೆಯನ್ನು ತೆಗೆದುಕೊಂಡು ಬಂದು ಅರ್ಚಕರಿಗೆ ಕೊಡುತ್ತಿರುವಾಗ ಅರ್ಚಕರು ಸ್ವಾಮಿಯ ಎತ್ತರವಾದ (ನಿಲುವೆತ್ತು) ವಿಗ್ರಹಕ್ಕೆ ಹೂಮಾಲೆಯನ್ನು ಅಲಂಕರಿಸುತ್ತಾರೆ.*

ಬಹುದು. ಈ ದಾನಿಯು 113 ನೇ ಸಂಖ್ಯೆ ಶಾಸನದ ದಾನಿಯ ತಮ್ಮನಾಗಿದ್ದು,ಇಬ್ಬರೂ ಸೋದರರೂ ಶ್ರೀರಂಗನಾಥ ಯಾದವರಾಯರ ಅಧೀನದಲ್ಲಿ ಸೇವೆಸಲ್ಲಿಸಿರಬೇಕು. ಶ್ರೀರಂಗ ನಾಥ ಯಾದವರಾಯನು ಆ ಹಿಂದಿನ ವಿಕಾರಿನಾಮ ಸಂವತ್ಸರದಲ್ಲಿ ಹರಿಪಾದ ಸೇರಿದವನಾಗಿ ಆ ಕಾರಣದಿಂದಲೇ ಆತನ ಹೆಸರನ್ನು ಹೇಳಿದೆ ನಂತರದ ವರ್ಷವಾದ ಶಾರ್ವರಿ ಸಂವತ್ಸರವನ್ನು ಹೆಸರಿಸಲಾಗಿದೆ.

116 ನೇ ಶಾಸನವು ಒಂದು ಶ್ಲೋಕವಾಗಿದ್ದು ಸಂಸ್ಕೃತ ದಲ್ಲಿ ಹೋಬಳರಾಯನು ವೆಂಕಟೇಶ್ವರ ಸ್ವಾಮಿಯ - ಶೌರಿಯ- ಹಸ್ತವು ಆಭರಣ ಮಾಡಿಸಿದುದನ್ನು ತಿಳಿಸುತ್ತ ಸ್ವಾಮಿಯ ವರದ ಹಸ್ತವು ವೈಕುಂಠತ್ವವನ್ನು ಎಂದರೆ ಶಾಂತಿ, ಸಮೃದ್ಧಿ, ಶಾಶ್ವ ತತೆ,ನಿತ್ಯಾನಂದಗಳು ವೆಂಕಟಾದ್ರಿಯಲ್ಲಿರುವುದನ್ನು ತಿಳಿಸುವುದು.

117 ನೇ ಶಾಸನವು ಇದೇ ವಿಷಯ ವನ್ನು ತಮಿಳಿನಲ್ಲಿ ತಿಳಿಸುತ್ತ ತಂಜೈ (ತಂಜಾವೂರು) ನ ರಾಜನಾದ ಓಬಳನಾಥ ಯಾದವ ರಾಯನು ಉತ್ತರದ ವೆಂಕಟ ಗಿರಿಯ ದೇವರಿಗೆ ಮಾಡಿಸಿದ ತಿರು ಕೈಮಲರ್ ಅನ್ನು (ಕೈಯ ಆಭರಣ ವನ್ನು) ಕುರಿತೇ ಹೇಳುವುದು. ಈ ಓಬಳ ನಾಥನು ತಂಜೈನ ರಾಜನೆನ್ನಲಾಗಿದ್ದು ಅಲ್ಲಿನ ಯಾದವರಾಜ ವಂಶಕ್ಕೆ ಸೇರಿದವನೋ ಅಥವಾ ಈತನು ಮೈಸೂರಿನ ದೇವಗಿರಿಯ ಯಾದವ ರಾಜರಲ್ಲಿ ಒಬ್ಬನಾಗಿರಬೇಕು.

ವಿಜಯನಗರ ಸಾಮ್ರಾಜ್ಯವು ಸುಸ್ಥಿರವಾಗಿ ಸ್ಥಾಪನೆ ಆಗುವುದಕ್ಕಿಂತ ಮುಂಚಿನ ಹದಿಮೂರು ಹದಿನಾಲ್ಕನೆಯ ಶತ ಮಾನದ ಸುಮಾರು 60 ಶಾಸನಗಳು ಬಹುತೇಕ ತ್ರುಟಿಕ ವಾಗಿದ್ದು ಹರಕು ಮುರುಕು ಮಾಹಿತಿಗಳನ್ನು ಮಾತ್ರ ಬಿಟ್ಟು ಕೊಡುತ್ತವೆ.

ಇವುಗಳಲ್ಲಿನ 162 ನೆಯ ಹಾಗೂ 163 ನೆಯ ಶಾಸನ ಗಳು ಮಠಗಳು ಹಾಗೂ ನಂದನವನಗಳನ್ನು ಕುರಿತು ಹೇಳು ವುವು.ಹಾಗಾಗಿ ಇವು ಶ್ರೀರಂಗನಾಥ ಯಾದವರಾಯನ ಆಡ ಳಿತದ ಮೂರನೆಯ ವರ್ಷದ ವ್ಯವಹಾರಕ್ಕೆ ಸಂಬಂಧಿಸಿದ್ದು. ಅರಿಶಾಣಾಲಯ ನಂದನವನ ಹಾಗೂ ವಣ್ ನಂದನವನ ಗಳನ್ನು ಜೀಯರಿಗೆ ಒಪ್ಪಿಸಿದ್ದು ಅವರು ಅಲ್ಲಿಗೆ ಉತ್ಸವ ವಿಗ್ರಹ ಗಳು ಬಂದಾಗ ಪೂಜಿಸುವ ಬಗ್ಗೆ ತಿಳಿಸುವುವು. 162 ನೆಯ ಶಾಸನವು ಮಠದ ಆದಾಯದಲ್ಲಿ ಹಲವು ಆಭರಣಗಳನ್ನು ಮಾಡಿಸಿ ವಿಗ್ರಹಗಳಿಗೆ ಅಲಂಕರಿಸಬೇಕೆಂದು ತಿಳಿಸುವುದು. 163ನೆ ಯ ಶಾಸನವು ಶ್ರೀರಂಗನಾಥ ಯಾದವರಾಯನ ಆಡಳಿತದ ಐದನೆಯ ವರ್ಷದ್ದಾಗಿದ್ದು (ಕ್ರಿ.ಶ. 1341 -42 ) ಜೀಯರು ಮರಣ ಹೊಂದಿದಾಗ ಆತನ ಉತ್ತರಾಧಿಕಾರಿಯು ಆ ಮುನ್ನವೇ ಅಂಗೀಕರಿಸಲ್ಪಟ್ಟ ಶುಲ್ಕವನ್ನು ನೀಡಿ ಮಠಕ್ಕೆ ಬರಬೇಕಾದ ತೆರಿಗೆಗಳನ್ನು ವಸೂಲಿ ಮಾಡಿಕೊಂಡು ಈ ಮೇಲೆ ಹೇಳಿದ ಹೂವಿನ ತೋಟಗಳಿಗೆ ಉತ್ಸವ ವಿಗ್ರಹಗಳು ಬಂದಾಗ ಪೂಜೆಗಳನ್ನು ಸಲ್ಲಿಸಬೇಕೆಂಬುದನ್ನು ಅವಧಾರಿಸಿ ನುಡಿಯುವುದು.111 ಹಾಗೂ 112 ನೆಯ ಶಾಸನಗಳು ಬಿಡಿ ಯಾದ ಸ್ವತಂತ್ರವಾದ ಶಿಲಾಫಲಕಗಳಾಗಿದ್ದು ಈ ಮಠವು ಶ್ರೀಮಾನ್ ಮಹಾಪ್ರಧಾನಿ ಇಮ್ಮಡಿ ರಾಹುತ್ತರಾಯ ಸಿಂಗಯ ದಣ್ಣಾಯಕನಿಗೆ - ಸಿತಕರ ಗಂಡನೆಂದು ಬಿರುದು ಪಡೆದವನಿಗೆ ಸೇರಿದ್ದು' ಎಂದು ತಿಳಿಸುವುದು.

160 ನೆಯ ಶಾಸನವು " ಆಕ್ರಮಿಸುವ ಸಂಕಲ್ಪ ಮಾಡಿದವ ನಾಗಿ"(ವಿಜಯ) ಸ್ತಂಭವನ್ನು ನೆಡಿಸಿದವ ನಾಗಿರುವುದನ್ನು ಗಮನಿಸಿದಲ್ಲಿ ಇದು 1 ನೇ ಜಟಾವರ್ಮ ಸುಂದರ ಪಾಂಡ್ಯನ ಶಾಸನವೇ.

161 ನೇ ಶಾಸನವು ವಿಶೇಷವಾದದ್ದು. ಅದು ಹೇಳುವಂತೆ 'ರಾಜನು ಪರಮಪದ ವೈದಿರಲು" "ತಕ್ಕ ಕ್ರಮ ವನ್ನು ಕೈಗೊಳ್ಳಲು " ಎಂದಿದೆ. 109 ನೇ ಶಾಸನದಲ್ಲಿ ತನ್ನ ಶತ್ರುಗಳನ್ನು ಸೋಲಿಸಿ ತನಗಾಗಿ ತಿರುಮಲೆಯಲ್ಲಿ ಒಂದು ಅರಮನೆಯನ್ನು ತನ್ನ ಆಳ್ವಿಕೆಯ ಹದಿನಾರನೇ ವರ್ಷದಲ್ಲಿ ನಿರ್ಮಿಸಿಕೊಂಡ ಕ್ಷತ್ರ ಗಾತ್ರನಾದ ಶ್ರೀರಂಗನಾಥ ಯಾದವ ರಾಯನು ತನ್ನ ಆಳ್ವಿಕೆಯ ಇಪ್ಪತ್ನಾಲ್ಕನೆಯ ವಯಸ್ಸಿನಲ್ಲಿ ವೆಂಕಟಗಿರಿಯ ಮೇಲೆ ಕಡೆಯ ಶ್ವಾಸ ಬಿಟ್ಟಿರಬೇಕು. ಹಾಗಾಗಿ ಇಲ್ಲಿ ತಕ್ಕ ಉತ್ತರಾಧಿಕಾರಿಯ ಹುಡುಕಾಟದ ಕ್ರಮ ಸೂಚಿತ ವಾಗಿರಬೇಕು.

(ಸಶೇಷ)

**ತಿರುಮಲೆ ಆಲಯದಲ್ಲಿ ನಿಷೇಧಿಸಿದ ವಸ್ತುಗಳು**




**ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ಆಲಯಕ್ಕೆ ಒಯ್ಯಬೇಡಿರಿ. ಆಯುಧಗಳನ್ನು ತರಬಾರದು.**

# ನವರಾತ್ರಿಯ ಸರಸ್ವತಿ ಪೂಜೆಯು ಹೀಗಿರಲಿ

– ಬಿ. ಗೋಪಾಲಾಚಾರ್

## ಕಷ್ಟದಿಂದ ಬರೆದ ಗ್ರಂಥಗಳನ್ನು ಯತ್ನದಿಂದ ಸಂರಕ್ಷಿಸೋಣ

ನವರಾತ್ರಿಯಲ್ಲಿ ಎಲ್ಲಡೆಯೂ ವಿದ್ಯಾದಾಯಿನಿಯಾದ ಸರಸ್ವತಿಯನ್ನು ವೈಭವದಿಂದ ಪೂಜಿಸುತ್ತೇವೆ. ಮಾನವನ ಸರ್ವಾಂಗೀಣವಾದ ಅಭಿವೃದ್ಧಿಗೆ ಸರಸ್ವತಿ ದೇವಿಯ ಅನುಗ್ರಹ ಮುಖ್ಯವಾಗಿದೆ.‘‘ವಿದ್ಯಾ ನಾಮ ನರಸ್ಯ ರೂಪಮಧಿಕಮ್’’ಎಂದು ಸುಭಾಷಿತದ ಮಾತಿನಂತೆ ವಿದ್ಯೆಯು ಮನುಷ್ಯನಿಗೆ ನಿಜವಾದ ರೂಪವಾಗಿದೆ. ಇದನ್ನು ಕೊಡುವ ದೇವತೆ ಸರಸ್ವತಿ, ಆದ್ದರಿಂದಲೇ ವಿದ್ಯಾರಂಭದಲ್ಲಿ ‘‘ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ’’ ಎಂದು ದೇವಿಯನ್ನು ಪ್ರಾರ್ಥಿಸುತ್ತೇವೆ. ಈ ಹಿನ್ನಲೆಯಲ್ಲಿ ನವರಾತ್ರಿಯ ಪರ್ವ ಕಾಲದಲ್ಲಿ ಶ್ರದ್ಧೆಯಿಂದ ಸರಸ್ವತಿ ದೇವಿಯನ್ನು ಎಲ್ಲರೂ ಆರಾಧಿಸುವ ಶ್ರೇಷ್ಠ ಪರಂಪರೆ ವಿಶ್ವದಲ್ಲಿ ಬೆಳೆದು ಬಂದಿದೆ. ಇದು ವಿಶ್ವಕ್ಕೆಶ್ರೇಷ್ಠ ಜ್ಞಾನಪುಂಜವನ್ನು ನೀಡಿದ ಭಾರತದ ಸಂಸ್ಕೃತಿಯಾಗಿದೆ.

ಆದರೆ ಹಿರಿಯರ ಮಾರ್ಗದರ್ಶನವನ್ನು ಸರಿಯಾಗಿ ಪಡೆದುಕೊಳ್ಳದ ನಾವು ಈ ಆಚರಣೆಗಳ ಹಿಂದಿರುವ ಉದ್ದೇಶಗಳನ್ನು ಮರೆತಿದ್ದೇವೆ. ನವರಾತ್ರಿಯ ಸಮಯದಲ್ಲಿ ಮೂಲಾ ನಕ್ಷತ್ರದಲ್ಲಿ ಸರಸ್ವತಿಯನ್ನು ಪ್ರತಿಷ್ಠಾಪಿಸಿ ಆರಾಧಿಸುತ್ತೇವೆ. ಈ ಸಮಯದಲ್ಲಿ ಪೂಜೆಯಾಗಿ ಪ್ರಾಚೀನವಾದ ಗ್ರಂಥಗಳನ್ನು ಇಡಬೇಕು. ಪುಸ್ತಕವು ಸರಸ್ವತಿಯ ದಿವ್ಯ ಸನ್ನಿಧಾನದ ಪ್ರತೀಕ. ಪುಸ್ತಕದಲ್ಲಿ ದೇವಿಯನ್ನು ಆಹ್ವಾನಿಸಿ ಕಾಣುವ ಸಂಸ್ಕೃತಿ ನಮ್ಮದು. ನಮ್ಮಲ್ಲಿರುವ ವಿಪರೀತವಾದ ಅಜ್ಞಾನವು ದೂರವಾಗಲು ಈ ಆರಾಧನೆಯು ಮಹತ್ಪೂರ್ಣವಾಗಿದೆ. ಪೂಜೆಗಿಡುವ ಪುಸ್ತಕವು ಶುದ್ಧವಾಗಿ ಸ್ವಚ್ಛವಾಗಿರಬೇಕು. ಇದರಿಂದ ಪುಸ್ತಕಗಳ ಬಗ್ಗೆ ಗೌರವವು ಹೆಚ್ಚಾಗುತ್ತದೆ.



ಇವತ್ತಿನ ಯಾಂತ್ರಿಕ ಕಾಲದಲ್ಲಿ ಆಯಾ ತರಗತಿಗಳ ಪುಸ್ತಕಗಳನ್ನು ಆಯಾ ವರ್ಷದಲ್ಲೇ ಅಂಗಡಿಗೆ ಕೊಡುವ ನಮಗೆ ಪುಸ್ತಕಗಳ ಮಹತ್ವವು ತಿಳಿಯುವುದಾದರೂ ಹೇಗೆ?

ನಮ್ಮ ಪೂರ್ವಜರು ನೂರಾರು ವರ್ಷಗಳ ಹಿಂದೆ ನಮಗಾಗಿ ಕಷ್ಟದಿಂದ ಗ್ರಂಥಗಳನ್ನು ಬರೆದು ಸಂಗ್ರಹಿಸಿದ್ದಾರೆ. ಇಂದಿನಂತೆ ಆ ಕಾಲದಲ್ಲಿ ವಿದ್ಯುದ್ದೀಪಗಳ ವ್ಯವಸ್ಥೆಯಿರಲಿಲ್ಲ. ಒಣಗಿದ ಎಲೆಗಳನ್ನು ಸಂಗ್ರಹಿಸಿ ಬೆಂಕಿಕೊಟ್ಟು ಅದರ ಬೆಳಕಿನಲ್ಲಿ ಗ್ರಂಥಗಳ ರಚನೆಯನ್ನು ಮಾಡುತ್ತಿದ್ದರು. ತಾಳೆಗಿಡದ ಎಲೆಗಳನ್ನು ಸಂಸ್ಕರಿಸಿ ಅದರಲ್ಲಿ ಅಕ್ಷರಗಳನ್ನು ಕೊರೆಯುತ್ತಿದ್ದರು. ಇದನ್ನೇ ‘‘ತಾಡವಾಲೆ ಗ್ರಂಥ’’ಗಳೆಂದು ಕರೆಯುತ್ತಾರೆ.

ನೂರಾರು ವರ್ಷಗಳ ಕಾಲ ಬಾಳಿಕೆಬರುವ ಎಲೆಗಳಿವು. ಇವುಗಳನ್ನು ಸರಿಯಾಗಿ ಸಂರಕ್ಷಿಸಿದರೆ ಮತ್ತೆ ನೂರಾರು ವರ್ಷಗಳ ಕಾಲ ಉಳಿಯುತ್ತವೆ. ನಮಗಾಗಿ ಅತ್ಯಂತ ಶ್ರಮದಿಂದ ಬರೆಯುತ್ತಿದ್ದರು. ಮುಂದಿನ ಜನಾಂಗಕ್ಕೆ ಶುದ್ಧ ಪಾಠಗಳು ದೊರೆಯ ಬೇಕೆಂಬ ಕಳಕಳಿ ಅವರದಾಗಿತ್ತು. ಆದ್ದರಿಂದಲೇ ಗ್ರಂಥಗಳ ಕೊನೆಯಲ್ಲಿ ‘‘ಕಷ್ಟೇನ ಲಿಖಿತಂ ಗ್ರಂಥಂ ಯತ್ನೇನ ಪರಿ ಪಾಲಯೇತ್’’ ಎಂದು ಸಂದೇಶವನ್ನು ಬರೆಯುತ್ತಿದ್ದರು. ಗ್ರಂಥಗಳ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದ್ದ ನಮ್ಮ ಹಿರಿಯರು ಪುಸ್ತಕಗಳಿಗೆ ಯಾರಾದರೂ ಅಪಚಾರ ಮಾಡಿದರೆ ನಿರ್ದಾಕ್ಷಿಣ್ಯವಾಗಿ ಶಪಿಸುತ್ತಿದ್ದರು.

ನವರಾತ್ರಿಯ ಸಂದರ್ಭದಲ್ಲಿ ಅನೇಕ ಮನೆ-ಮಠಗಳಲ್ಲಿ ಪ್ರಾಚೀನವಾದ ಈ ತಾಡವಾಲೆ ಗ್ರಂಥಗಳನ್ನು ಪೂಜೆಗೆ ಇಡುತ್ತಾರೆ. ನೀರಿನಿಂದ ಪ್ರೋಕ್ಷಿಸಿ ಗಂಧ ಹೂವುಗಳನ್ನು ಸಮರ್ಪಿಸಿ ಪೂಜಿಸುತ್ತಾರೆ. ಪೂಜಿಸಬೇಕೆಂಬ ಭರದಲ್ಲಿ ಗ್ರಂಥಗಳಿಗೆ ಆಗುವ ಹಾನಿಯ ಬಗ್ಗೆ ನಮಗೆ ಗಮನವಿಲ್ಲ. ಒದ್ದೆಯಾದ ವಸ್ತುಗಳ ಸಮರ್ಪಣೆಯಿಂದ ಈ ಗ್ರಂಥಗಳಿಗೆ ಹಾನಿಯಾಗುತ್ತದೆ. ನಮಗೆ ತಿಳಿಯದೇ ಒಳಗೆ ಬೂಸು (ಫಂಗಸ್) ಬಂದು

ಮೃದುವಾದ ಪತ್ರಗಳನ್ನು ಸಣ್ಣ ಸಣ್ಣ ಗೆದ್ದಲು ಹುಳಗಳು ಆಕ್ರಮಿಸುತ್ತವೆ.ಇದರಿಂದ ಪವಿತ್ರವಾದ ಗ್ರಂಥವು ನಾಶವಾಗುತ್ತದೆ ಎಂಬ ಎಚ್ಚರವು ನಮ್ಮಲ್ಲಿರಲೇಬೇಕು.

ನವರಾತ್ರಿಯ ಸಮಯದಲ್ಲಿ ಈ ಹಸ್ತಪ್ರತಿಗಳನ್ನು ಪೂಜೆಗಿಡುವ ಮೊದಲು ಒಂದು ಎಚ್ಚರ ನಮ್ಮಲ್ಲಿರಬೇಕು. ಈ ಹಸ್ತಪ್ರತಿಯಲ್ಲಿ ಏನು ವಿಷಯವಿದೆ? ಇದು ಪೂಜೆಗೆ ಅರ್ಹವಾಗಿದೆಯೇ? ಎಂಬ ಬಗ್ಗೆ ತಿಳಿದುಕೊಳ್ಳಬೇಕು. ಕೆಲವೊಮ್ಮೆ ಮನೆಯ ಆಸ್ತಿಯ ವಿವರ ಅಥವಾ ಇನ್ಯಾವುದೋ ವಿಚಾರಗಳೂ ಇರಬಹುದು.ತಿಳಿದುಕೊಂಡು ಪೂಜಿಸುವುದು ಉತ್ತಮ. ಒಟ್ಟಿನಲ್ಲಿ ಸರಿಯಾಗಿ ತಿಳಿದು ಪೂಜಿಸಬೇಕು.


ಪುಸ್ತಕವೇ ತನ್ನ ರಕ್ಷಣೆಯ ವಿಧಾನವನ್ನು ನಮಗೆ ತಿಳಿಸಿದೆ - "ತೈಲಾತ್ ರಕ್ಷೇತ್, ಜಲಾತ್ ರಕ್ಷೇತ್, ರಕ್ಷೇತ್ ಶಿಥಿಲ ಬಂಧನಾತ್। ಮೂರ್ಖಹಸ್ತೇ ನ ದಾತವ್ಯಮ್ ಏವಂ ವದತಿ ಪುಸ್ತಕಮ್"ಎಂದು. ಇದರೊಂದಿಗೆ ಪುಸ್ತಕವು ನಮಗೆ ಎಚ್ಚರಿಕೆಯನ್ನೂ ನೀಡಿದೆ. ಪುಸ್ತಕಗಳ ಸಂರಕ್ಷಣೆಯಲ್ಲಿ ಹೆಚ್ಚು ಆಸಕ್ತರಾಗದ ನಮಗೆ ಇದು ಹೊಸಬೆಳಕನ್ನು ನೀಡಿದೆ. ಪುಸ್ತಕಕ್ಕೆ ಸರಿಯಾದ ಗೌರವವನ್ನು ನೀಡಿದವನು ಮೂರ್ಖ. ಅವನ ಕೈಗೆ ಎಂದಿಗೂ ಪುಸ್ತಕವನ್ನು ನೀಡಬಾರದು. ಎಣ್ಣೆ-ನೀರು ಬೀಳದಂತೆ ಪುಸ್ತಕವನ್ನು ಸಂರಕ್ಷಿಸಬೇಕು. ಕ್ರಿಮಿಗಳನ್ನು ನಾಶಮಾಡುವ ಶುದ್ಧವಾದ ಎಣ್ಣೆಯಿಂದ ಪತ್ರಗಳನ್ನು ಸ್ವಚ್ಛಗೊಳಿಸಬೇಕು.ಸರಿಯಾದ ಕ್ರಮದಲ್ಲಿ ದಾರದಿಂದ ಬಂಧಿಸಿರಬೇಕು.ಈ ರೀತಿಯಲ್ಲಿ ಶ್ರದ್ಧೆಯಿಂದ ಪ್ರಾಚೀನವಾದ ಗ್ರಂಥಗಳನ್ನು ಸಂರಕ್ಷಿಸಬೇಕು. ಬೆನ್ನಿನ ಮೂಳೆಗಳು ಸವಿದರೂ ಗಮನಿಸದೆ ಗ್ರಂಥಗಳ ಮೂಲಕ ಹಿರಿಯರು ನಮಗಾಗಿ ಜ್ಞಾನದ ರಾಶಿಯನ್ನೇ ನೀಡಿದ್ದಾರೆ.

ತಾಡವಾಲೆಯ ಎಲೆಗಳನ್ನು ಸಂಗ್ರಹಿಸಿ ಸಂಸ್ಕರಿಸಿ ಆ ಎಲೆಯ ಮೇಲೆ ಬರೆಯುವ ಕಾರ್ಯವು ಅತ್ಯಂತ ಕ್ಲಿಷ್ಟಕರವಾದದ್ದು.ಅಲ್ಲಿ ಒಂದೇ ಒಂದು ಅಳಿಸಿದ್ದಾಗಲಿ ಪಂಕ್ತಿ ವ್ಯತ್ಯಾಸವಾಗಲೀ ಇರುವುದಿಲ್ಲ.ಅತ್ಯಂತ ಸುಂದರವಾದ ಬರವಣಿಗೆ. ಇಷ್ಟು ಪ್ರಯಾಸದಿಂದ ಬರೆದ ಈ ತಾಡವಾಲೆಯ ಗ್ರಂಥಗಳಿಗೆ ಅಪಾರವಾದ ಪೂಜ್ಯತೆಯಿದೆ. ಇನ್ನು ಕೆಲವರು ಇದರ ಮಹತ್ವವನ್ನು ತಿಳಿಯದೇ ನದಿಗೆ ಗ್ರಂಥವನ್ನು ಎಸೆಯುವುದನ್ನೂ ಕೇಳಿದ್ದೇವೆ. ಮನೆಯಲ್ಲಿ ಧೂಳು ಬರುತ್ತದೆ ಎಂದು ಈ ಗ್ರಂಥಗಳನ್ನು ಗೋಣಿ ಚೀಲದಲ್ಲಿ ಕಟ್ಟಿ ಮನೆಯ ಯಾವುದೋ ಮೂಲೆಯಲ್ಲಿ ಎಸೆಯುವವರೂ ಇದ್ದಾರೆ. ಕೆಲವರು ಬೆಂಕಿಗೆ ಹಾಕಿದ್ದೂ ಇದೆ.ಇದರಿಂದಾಗಿ ಸಾವಿರಾರು ತಾಡವಾಲೆಗಳು ನಾಶವಾಗಿದೆ ಉಳಿದದ್ದನ್ನಾದರೂ ಸಂರಕ್ಷಿಸೋಣ.

ಪ್ರಾಚೀನರ ಮಹತ್ವದ ಕೊಡುಗೆಯಾದ ತಾಡವಾಲೆಯ ಗ್ರಂಥಗಳನ್ನು "ಭಾರತದ ಅಮೂಲ್ಯ ಸಂಪತ್ತು" ಎಂದು ಭಾರತ ಸರಕಾರ 2005 ರಲ್ಲಿ ಘೋಷಣೆ ಮಾಡಿದೆ. ಇದರ ಸಂರಕ್ಷಣೆಗಾಗಿ "ರಾಷ್ಟ್ರೀಯ ಪಾಂಡುಲಿಪಿ ಮಿಷನ್, ನವದೆಹಲಿ" (N.M.M.)ಎಂಬ ಸಂಸ್ಥೆಯನ್ನು ಸಂಸ್ಕೃತಿ ಮಂತ್ರಾಲಯದ ಅಧೀನ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ದೇಶದ ಲಕ್ಷಾಂತರ ಗ್ರಂಥಗಳನ್ನು ಈ ಸಂಸ್ಥೆಯಿಂದ ಈಗಾಗಲೇ ಸಂರಕ್ಷಿಸಲಾಗಿದೆ. ಈ ಸಂಸ್ಥೆಯ ಮಾನ್ಯತೆಯಲ್ಲಿ ಉಡುಪಿಯ ಗೀತಾ ಮಂದಿರದಲ್ಲಿ ಪುತ್ತಿಗೆ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥಶ್ರೀಪಾದರ ಪರಮಾನುಗ್ರಹದಲ್ಲಿ ಶ್ರೀವಾದಿರಾಜ ಸಂಶೋಧನ ಪ್ರತಿಷ್ಠಾನವು ಪ್ರಾಚೀನ ತಾಡವಾಲೆ ಗ್ರಂಥಗಳನ್ನು ಸ್ವಚ್ಛಗೊಳಿಸಿ ಸಂರಕ್ಷಿಸುತ್ತಿದೆ. ನಿಮ್ಮ ಮನೆಯ ಗ್ರಂಥಗಳನ್ನು ಉಚಿತವಾಗಿ ಶುದ್ಧಗೊಳಿಸಿ ನಿಮಗೇ ನೀಡುತ್ತೇವೆ. ಹಿರಿಯರ ಅನುಗ್ರಹದ ಆಸ್ತಿಯಾದ ಗ್ರಂಥಗಳನ್ನು ಉಳಿಸೋಣ.ಕಷ್ಟದಿಂದ ಬರೆದ ಗ್ರಂಥಗಳನ್ನು ಯತ್ನದಿಂದ ಸಂರಕ್ಷಿಸೋಣ. ಇದೇ ನಿಜವಾದ ನವರಾತ್ರಿಯ ಆಚರಣೆ. ನಿಜವಾದ ಸರಸ್ವತೀ ಮತ್ತು ವೇದವ್ಯಾಸರ ಪೂಜೆ. ಈ ಹಸ್ತ ಪ್ರತಿ ಸಂರಕ್ಷಣಾ ಅಭಿಯಾನದಲ್ಲಿ ನಮ್ಮೊಂದಿಗೆ ಕೈ ಜೋಡಿಸಿ.



**ಆಲಯದಲ್ಲಿ ಓಂ ನಮೋ ವೇಂಕಟೇಶಾಯ ಎಂದು ನಾಮಸ್ಮರಣೆಯನ್ನು ಮಾಡಿರಿ**



# ವಾಲ್ಮೀಕಿ ಜಯಂತಿ

ಕೂಜಂತಂ ರಾಮ ರಾಮೇತಿ।
ಮಧುರಮಧುರಾಕ್ಷರಮ್॥
ಅರುಹ್ಯ ಕವಿತಾಶಾಖಾಂ।
ವಂದೇ ವಾಲ್ಮೀಕಿ ಕೋಕಿ ಲಮ್॥

- ಕಾವ್ಯವೆಂಬ ಮರದ ಮೇಲೆ ಕುಳಿತು,'ರಾಮ ರಾಮಾ' ಎಂದು ಹಾಡುತ್ತಿರುವ ವಾಲ್ಮೀಕಿ ಎಂಬ ಕೋಗಿಲೆಗೆ ನಮಸ್ಕಾರ

ವಾಲ್ಮೀಕಿ ಮುನಿಯನ್ನು ಬಣ್ಣಿಸುವ ಈ ಶ್ಲೋಕವು ಬುಧ ಕೌಶಿಕ ಮುನಿಯು ರಚಿಸಿರುವ ಶ್ರೀ ರಾಮರಕ್ಷಾ ಸ್ತೋತ್ರದಲ್ಲಿದೆ. ಜಗತ್ತಿನಲ್ಲೇ ಅತ್ಯಂತ ಪ್ರಾಚೀನ ಕಾವ್ಯವೆಂದು ಹೇಳಲಾಗುವ ಆದಿಕಾವ್ಯದ ಕರ್ತೃ ವಾಲ್ಮೀಕಿ ಮುನಿಯನ್ನು ಈ ಶ್ಲೋಕವು ಅತ್ಯಂತ ಸರಳ-ಸುಂದರವಾಗಿ ವರ್ಣಿಸುತ್ತದೆ.

ವಾಲ್ಮೀಕಿ ತ್ರೇತಾಯುಗದಲ್ಲಿ ಆಗಿಹೋದ ಋಷಿವರೇಣ್ಯ. ಇವರು ರಚಿಸಿದ ರಾಮಾಯಣದಂತೆಯೇ ಇವರ ಬದುಕು ಕೂಡ ರೋಚಕ ಘಟ್ಟಗಳಿಂದ ಕೂಡಿದ್ದು, ಬೋಧಪ್ರದವೂ ಆಗಿದೆ. ರಾಮಾಯಣ ಬರೆದ ವಾಲ್ಮೀಕಿ ಉತ್ತರ ರಾಮಾಯಣದಲ್ಲಿ ಸ್ವತಃ ತಾವೂ ಒಂದು ಪಾತ್ರವಾಗಿ ಬರುತ್ತಾರೆ. ರಾಮನು ಸೀತೆಯನ್ನು ವನವಾಸಕ್ಕೆ ಕಳುಹಿಸಿದಾಗ ಆಕೆಗೆ ಆಸರೆ ನೀಡುವುದು ವಾಲ್ಮೀಕಿಗಳೇ, ಪೂರ್ವ ರಾಮಾಯಣವನ್ನು ರಚಿಸಿ, ಸೀತಾರಾಮರ ಮಕ್ಕಳಾದ ಲವ ಕುಶರಿಗೆ ಅದು ಹೃದ್ಗತವಾಗುವಂತೆ ಬೋಧಿಸಿ, ರಾಮನ ಅಶ್ವಮೇಧ ಯಾಗದಲ್ಲಿ ಹಾಡುವಂತೆ ಮಾಡುತ್ತಾರೆ.

## ವ್ಯಾಲನಿಂದ ವಾಲ್ಮೀಕಿ

ವಾಲ್ಮೀಕಿಯ ಜೀವನದ ಕುರಿತಾಗಿ ಅನೇಕ ಕಥೆಗಳಿವೆ.ಅದರಲ್ಲಿ ಒಂದು ಕಥೆಯ ಪ್ರಕಾರ, ವಾಲ್ಮೀಕಿ ಋಷಿಯಾಗುವ ಮೊದಲು ವ್ಯಾಲ (ಕೆಲವು ಪಾಠಾಂತರಗಳ ಪ್ರಕಾರ 'ರತ್ನಾಕರ' ಎಂಬುದು ಅವನ ಹೆಸರಾಗಿತ್ತು) ಎಂಬ ಹೆಸರಿನ ಡಕಾಯಿತನಾಗಿದ್ದನು. ವ್ಯಾಧ ಕುಲದವನಾಗಿದ್ದ ಇವನು ಕಾಡಿನ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರನ್ನು ದೋಚಿ ಜೀವನ ನಡೆಸುತ್ತಿದ್ದನು.

ಹೀಗಿರುತ್ತ ಒಮ್ಮೆ ನಾರದರು ವ್ಯಾಲನಿಗೆ ಎದುರಾದರು. ಆತ ಅವರನ್ನೂ ದೋಚಲು ಯತ್ನಿಸಿದ. ಆದರೆ, ನಾರದರ ಬಳಿ ದೋಚಲು ಇರುತ್ತದೆಯಾದರೂ ಏನು? ನಾರದರು ವ್ಯಾಲನನ್ನು ತಡೆದು, 'ದೋಚುವುದಾದರೆ ನನ್ನ ಪುಣ್ಯವನ್ನು ದೋಚು. ನನ್ನ ಜ್ಞಾನವನ್ನು ದೋಚು' ಅನ್ನುತ್ತಾರೆ. ಹಾಗೆಯೇ ನೀನು ದೋಚಿಕೊಂಡು ಹೋದ ಎಲ್ಲದರಲ್ಲೂ ನಿನ್ನ ಕುಟುಂಬ ಹಾಗೂ ಗೆಳೆಯರು ಪಾಲು ಪಡೆಯುತ್ತಾರೆ. ಇದರಿಂದ ಸಂಚಯವಾಗುವ ಪಾಪದಲ್ಲಿ ಅವರು ಪಾಲು ಪಡೆಯುತ್ತಾರೋ ಕೇಳಿಕೊಂಡು ಬಾ ಎಂದು ಸವಾಲು ಹಾಕುತ್ತಾರೆ.

ಅದರಂತೆ ವ್ಯಾಲ ತನ್ನ ಮನೆಗೆ ತೆರಳಿ ತನ್ನ ಪತ್ನಿಯರನ್ನು 'ನನ್ನ ಪಾಪ ಸಂಚಯದಲ್ಲಿ ಪಾಲು ಪಡೆಯುತ್ತೀರಾ? ಎಂದು ಕೇಳುತ್ತಾನೆ. ಅವರು ಒಂದೇ ಉಸಿರಿಗೆ ಇಲ್ಲವೆನ್ನುತ್ತಾರೆ. ಕುಟುಂಬದ ಇತರ ಸದಸ್ಯರಿಂದಲೇ ಅದೇ ಪ್ರತಿಕ್ರಿಯೆ.ಪರಿವಾರದಿಂದಲೂ, ಸಮೂಹದಿಂದಲೂ ಅದೇ ಪ್ರತಿಕ್ರಿಯೆ ಬಂದಾಗ ವ್ಯಾಲನ ಮನಸ್ಸು ಬದಲಾಗುತ್ತದೆ. ಆತ ನಾರದರಲ್ಲಿ ಧಾವಿಸಿ ಶರಣಾಗುತ್ತಾನೆ. ನಾರದರು ಅವನಿಗೆ ರಾಮ ನಾಮೋಪದೇಶ ನೀಡುತ್ತಾರೆ.

ಅದನ್ನು ಜಪಿಸುತ್ತ ಕುಳಿತುಕೊಳ್ಳುವ ವ್ಯಾಲನ ಸುತ್ತ ವಾಲ್ಮೀಕಿ (ಹುತ್ತ) ಬೆಳೆದುಕೊಳ್ಳುತ್ತದೆ.ಬ್ರಹ್ಮದೇವ ಪ್ರತ್ಯಕ್ಷನಾಗಿ ಅವನ ತಪೋಸಾಧನೆಯು ಆತನಿಗೆ ಮಹರ್ಷಿ ಪದವಿಯನ್ನು ಗಳಿಸಿದೆ ಎಂದು ಹೇಳುತ್ತಾನೆ ಮತ್ತು 'ವಾಲ್ಮೀಕಿ' ಎಂಬ ಹೆಸರು ನೀಡುತ್ತಾನೆ.

- ಶ್ರೀಮತಿ. ಕೆ.ವಿ. ಪದ್ಮಾವತಿ

### ಪ್ರಾಚೇತಸನೇ?

ಕೆಲವು ಮೂಲಗಳ ಪ್ರಕಾರ ವಾಲ್ಮೀಕಿ ಮೂಲದಲ್ಲಿ ಋಷಿಪುತ್ರ. ಪ್ರಚೇತಸನೆಂಬ ಮುನಿಯ ಹಲವು ಮಕ್ಕಳಲ್ಲಿ ಈತನೂ ಒಬ್ಬ. ಆದ್ದರಿಂದಲೇ ವಾಲ್ಮೀಕಿಗೆ 'ಪ್ರಾಚೇತಸ''ನೆಂಬ ಹೆಸರೂ ಇದೆ. ಕಥೆಗಳ ಪ್ರಕಾರ, ಚಿಕ್ಕವನಿರುವಾಗ ಈತನನ್ನು ಪಕ್ಷಿಯೊಂದು ಎತ್ತಿಕೊಂಡು ಹೋಗಿ ವ್ಯಾಧರಕೇರಿಯಲ್ಲಿ ಹಾಕುತ್ತದೆ. ಈ ಮಗುವನ್ನು ಅವರು ಬೆಳೆಸುತ್ತಾ ರತ್ನಾಕರನೆಂದು ಕರೆಯುತ್ತಾರೆ. ಶೂರನೂ ಬುದ್ಧಿವಂತನು ಆಗಿದ್ದ ರತ್ನಾಕರ ವ್ಯಾಧ ಕುಲದ ಮುಂದಾಳುವಾಗಿ ಬೆಳೆಯುತ್ತಾನೆ ಮತ್ತು ದರೋಡೆಯನ್ನು ತನ್ನ ವೃತ್ತಿಯಾಗಿ ಆರಿಸಿ ಕೊಳ್ಳುತ್ತಾನೆ. ಮುಂದೆ ನಾರದರ ಕಾರಣದಿಂದ ಈತನಿಗೆ ತನ್ನ ಕುಲದ ಸ್ಮರಣೆಯುಂಟಾಗಿ ತಪೋನಿರತನಾಗುತ್ತಾನೆ ಎನ್ನುತ್ತದೆ ಈ ಕಥೆ.

### ಕಾವ್ಯ ಕಾರಣ

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ।
ಯತ್ಕ್ರೌಂಚ ಮಿಥುನಾದೇಕಮ್ ಅವಧೀಃ ಕಾಮಮೋಹಿತಮ್॥

'ಸಂಗಾತ ಸುಖದಲ್ಲಿ ಮೈಮರೆತಿದ್ದ ಹಕ್ಕಿಗಳಲ್ಲಿ ಒಂದನ್ನು ಕೊಂದು ಮತ್ತೊಂದರ ಚೀತ್ಕಾರಕ್ಕೆ ಕಾರಣವಾದವನೇ, ಇದರ ಫಲವಾಗಿ ನಿನ್ನ ಜೀವನ ಪರ್ಯಂತ ಶಾಂತಿ ಕಳೆದುಕೊಳ್ಳುವಂತಾಗಲಿ!' ಇದು ರಾಮಾಯಣದ ಮೂಲ ಶ್ಲೋಕ ಹಾಗೂ ಅದರ ಅರ್ಥ.

ವಾಲ್ಮೀಕಿ ಮಹರ್ಷಿಗಳ ಆಶ್ರಮ ತಮಸಾ ನದೀತೀರದಲ್ಲಿರುತ್ತದೆ. ಒಮ್ಮೆ ಸಂಧ್ಯಾವಂದನೆಗೆ ನದಿಗೆ ತೆರಳಿದ್ದಾಗ ಅವರು ಸಂತೋಷವಾಗಿ ಹಾರಾಡುತ್ತಿದ್ದ ಕ್ರೌಂಚಪಕ್ಷಿ ಜೋಡಿಯನ್ನು ನೋಡುತ್ತಿರುತ್ತಾರೆ. ಅದೇ ಸಮಯಕ್ಕೆ ಬೇಡನೊಬ್ಬನು ಬಂದು ಬಾಣ ಹೂಡಿ ಗಂಡು ಹಕ್ಕಿಯನ್ನು ಸಂಕಟದಿಂದ ಕೂಗಲಾರಂಭಿಸುತ್ತದೆ.

ಈ ಹೃದಯವಿದ್ರಾವಕ ಸನ್ನಿವೇಶವನ್ನು ನೋಡಿ, ಕರುಣೆ, ದುಃಖ, ಕೋಪದಿಂದ ಮಹರ್ಷಿಗಳು ಬೇಡನನ್ನು ಶಪಿಸುವಾಗ, ಶೋಕದಿಂದ ಮೇಲ್ಕಂಡ ವಾಕ್ಯವನ್ನು ಶ್ಲೋಕ ರೂಪದಲ್ಲಿ ಉದ್ಗರಿಸುತ್ತಾರೆ.

ಗದ್ಯ ರೂಪದಲ್ಲಿರದೆ, ಪ್ರಾಸಬದ್ಧವಾಗಿ, ಲಯ-ಛಂದಸ್ಸುಗಳಿಂದ ಕೂಡಿದ್ದ ಈ ವಿಶಿಷ್ಟ ಪ್ರಾಕಾರದ ತಮ್ಮ ನುಡಿಗಳಿಗೆ ತಾವೇ ಬೆರಗಾಗಿ ನಿಂತಿರುವಾಗ ನಾರದರು ಆಗಮಿಸುತ್ತಾರೆ ಮತ್ತು ರಾಮನ ಕಥೆಯನ್ನು ಈ ರೂಪದಲ್ಲೇ ಬರಿ ಎಂದು ಸೂಚಿಸುತ್ತಾರೆ. ವಾಲ್ಮೀಕಿಗಳಿಗೆ ರಾಮ ಕಥನವನ್ನು ಸಂಗ್ರಹ ರೂಪದಲ್ಲಿ ಹೇಳಿದವರೂ ನಾರದರೇ.

ಅದನ್ನು ಆಧರಿಸಿ ವಾಲ್ಮೀಕಿ ಮಹರ್ಷಿಗಳು ಏಳು ಕಾಂಡಗಳ 24,000 ಶ್ಲೋಕಗಳನ್ನೊಳಗೊಂಡ ಮಹಾ ಗ್ರಂಥವನ್ನು ರಚಿಸುತ್ತಾರೆ. ಈ ಗ್ರಂಥವೇ 'ರಾಮಾಯಣ'.

ಸಾವಿರಾರು ವರ್ಷಗಳಿಂದ ತನ್ನ ಜನಪ್ರಿಯತೆಯನ್ನು ಉಳಿಸಿ ಕೊಂಡು ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದಿರುವ ಆದಿ ಕಾವ್ಯ. ಕವಿಯೊಬ್ಬನ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಂತೆ, ಮೂಲ ವರ್ಣನೆಗಳು, ನೀತಿ ವಾಕ್ಯಗಳು ಹಾಗೂ ಮನೋಜ್ಞ ನಿರೂಪಣೆಗಳಿಂದ ಕೂಡಿದ ಕೃತಿಯಿದು.

### ಸೂತ್ರಧಾರನೆ ಪಾತ್ರವಾಗಿ...

ರಾಮನು ಅಯೋಧ್ಯೆಯ ಕೆಲವು ಸಾಮಾನ್ಯ ಜನರು ಸೀತೆಯ ಬಗೆಗೆ ಆರೋಪ ಮಾಡುತ್ತಿರುವುದನ್ನು ಗೂಢಚಾರರ ಮೂಲಕ ತಿಳಿದು ನೊಂದು ತುಂಬು ಗರ್ಭಿಣಿ ಸೀತೆಯನ್ನು ಪರಿತ್ಯಾಗ ಮಾಡುತ್ತಾನೆ. ರಾಮನ ಆಜ್ಞೆಯಂತೆ ಲಕ್ಷ್ಮಣನು ಸೀತೆಯನ್ನು ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ. ಈ ಸಂದರ್ಭದಲ್ಲಿ ಕೊಂಚ ವಿವೇಚಿಸಿ, ತುಂಬು ಗರ್ಭಿಣಿಯಾಗಿದ್ದ ತನ್ನ ಅತ್ತಿಗೆಯನ್ನು ವಾಲ್ಮೀಕಿ ಮುನಿಯ ಆಶ್ರಮದ ಹತ್ತಿರ ಬಿಡುತ್ತಾನೆ.

ಏಕಾಂಗಿಯಾಗಿ ಅರಣ್ಯದಲ್ಲಿ ಶೋಕತಪ್ತಳಾಗಿದ್ದ ಸೀತೆಯನ್ನು ವಾಲ್ಮೀಕಿ ಮಹರ್ಷಿಗಳು ತಮ್ಮ ಆಶ್ರಮಕ್ಕೆ ಕರೆತಂದು, ಋಷಿಪತ್ನಿಯರ ಮೂಲಕ ಆಕೆಯನ್ನು ಉಪಚರಿಸಿ, ಆದರಿಸುತ್ತಾರೆ. ಅಲ್ಲೇ ಲವ - ಕುಶರ ಜನನವಾಗುತ್ತದೆ. ಆ ಅವಳಿ ಮಕ್ಕಳಿಗೆ ವಾಲ್ಮೀಕಿ ಮಹರ್ಷಿಗಳೇ ಗುರುಗಳು. ಅವರಿಗೆ ರಾಜ್ಯ ವಿದ್ಯೆಗಳನ್ನೆಲ್ಲ ಕಲಿಸಿ ಅರ್ಹರನ್ನಾಗಿ ಮಾಡುವುದೂ ಅವರೇ.

ಮುಂದೆ ಅಶ್ವಮೇಧ ಯಾಗದಲ್ಲಿ ಸೀತೆಯನ್ನು ರಾಮನಲ್ಲಿಗೆ ವಾಲ್ಮೀಕಿ ಮಹರ್ಷಿಗಳೇ ಕರೆತರುತ್ತಾರೆ. ಹೀಗೆ ಕಥಾ



ನಿರೂಪಕನೇ ಪಾತ್ರವೂ ಆಗಿ ಮಹತ್ವದ ಘಟನೆಗಳಿಗೆ ಕಾರಣ ರಾಗುತ್ತಾರೆ ವಾಲ್ಮೀಕಿ.

ಶ್ರೀಮದ್ರಾಮಾಯಣದಿಂದ ವಾಲ್ಮೀಕಿ ಆದಿಕವಿ ಎಂದೆನಿಸಿ ಕಾವ್ಯ ಪ್ರಪಂಚದ ಪರಮೋನ್ನತ ಸ್ಥಾನವನ್ನಲಂಕರಿಸಿದನೋ ಅಥವಾ ಕೋಗಿಲೆಗಳ ಕೋಕಿಲನಾದ ವಾಲ್ಮೀಕಿಯಿಂದ ರಚನೆಯಾದುದರಿಂದ ಆ ಕೃತಿ ಶ್ರೇಷ್ಠ ಕೃತಿಯೆನಿಸಿ ಅಂದಿಗೂ ಇಂದಿಗೂ ಮುಂದೆ ಎಂದೆಂದಿಗೂ ಅತ್ಯುನ್ನತ ಶಿಖರ ಗ್ರಂಥವೆಂಬ ಹೆಗ್ಗಳಿಕೆ ಪಡೆದಿದೆಯೋ-ನಿಜಕ್ಕೂ ಮಂಥಿಸಬೇಕಾದ ವಿಷಯ. ಶ್ರೀ ಮದ್ರಾಮಾಯಣದ ಪುರಾಣವೂ ಹೌದು ಶ್ರೇಷ್ಠ ಕಾವ್ಯವೂ ಹೌದು. ವಿಷಯ ವೈವಿಧ್ಯ. ಸಾಗರೋಪಮವಾದ ಆ ಗ್ರಂಥದ ವಿಶಾಲತೆ, ದೇವ ದಾನವ ಸಂಘರ್ಷ,ಪುರುಷೋತ್ತಮ ಶ್ರೀರಾಮನ ಸತ್ಯ ಸಂಧತೆ, ಭ್ರಾತೃತ್ವ-ಇತ್ಯಾದಿಗಳು ಅದನ್ನು ಪುರಾಣದ ದಂಡೆಯಲ್ಲಿ ನಿಲ್ಲಿಸಿದರೆ, ಏಕ ಕವಿಯ ಆ ಕೃತಿ ಆ ಕಾಲ ಸಂಸ್ಕೃತಿ ದರ್ಶನ, ರಾಗ ತೀಕ್ಷ್ಣತೆ, ರಸಾವೇಶ ಪ್ರಸಂಗಗಳಿಂದ ಸುಮಧುರ ಕಾವ್ಯಪುಷ್ಪವಾಗಿ ಕಂಗೊಳಿಸುತ್ತದೆ. ಈ ಎತ್ತರದ ಕೃತಿಯನ್ನು ಕವಿ ಶ್ರೇಷ್ಠನನ್ನು ಪಡೆದ ನಾವು ನಿಜಕ್ಕೂ ಧನ್ಯರು.

ಶ್ರೀ ಮದ್ರಾಮಾಯಣದ ಹೆಸರನ್ನು ಕೇಳದ ಹಿಂದೂ ಯಾರಾದರೂ ಇದ್ದಾರೇನು? ರಾಮನ ಹೆಸರನ್ನು ಕೇಳದ ಭಾರತೀಯನೂ ಭಾರತೀಯನೆ? ಶ್ರೀರಾಮ ದೇಗುಲವಿಲ್ಲದ ಊರು-ಹಳ್ಳಿ ಎಲ್ಲಿಯಾದರೂ ಇದೆಯೆ? ಇಂತಹ ಕವಿ ಕೋಕಿಲವನ್ನು ಓದದವರ್ಯಾರು? ಹಾಡದವರು ಯಾರು? ಹೊಗಳದವರು ಯಾರು?

ಅಶ್ವಯುಜ ಶುಕ್ಲ ಪಕ್ಷ ಹುಣ್ಣಿಮೆ - ವಾಲ್ಮೀಕಿ ಜಯಂತಿ. ಶ್ರೀ ರಾಮಭಕ್ತ ಮಹಾತ್ಮ ಗಾಂಧೀಜಿಯವರು ಜನಿಸಿದ ಅಕ್ಟೋಬರ್ ಮಾಸದಲ್ಲಿ ಬಂದಿರುವುದು ಅರ್ಥಪೂರ್ಣ. ವಾಲ್ಮೀಕಿ ಜಯಂತಿಯನ್ನು ಆಚರಿಸುವುದೆಂದರೆ ರಾಮಾಯಣದ ಹುಟ್ಟುಹಬ್ಬವನ್ನು ಆಚರಿಸಿದಂತೆ. ಭಾರತೀಯರ ಅಂತರಾಳದ ಆಧ್ಯಾತ್ಮಿಕ ಜ್ಯೋತಿಯನ್ನು ಬೆಳಗಿದಂತೆ. ಹಿಂದೂ ಸಂಸ್ಕೃತಿಯ ಆರಾಧನೆ ಮಾಡಿದಂತೆ . ಆ ಆಚರಣೆ ಕೇವಲ ವಾಲ್ಮೀಕಿಯ ಚಿತ್ರಪಟಕ್ಕೆ ಹೂಹಾರ ಹಾಕಿ ಜಯಕಾರ ಕೂಗುವುದರಲ್ಲಿಲ್ಲ. ಜಯಂತಿಯ ಸಾರ್ಥಕತೆ ಎಂದರೆ ಅಮರ ರಾಮಾಯಣ ಕಾವ್ಯದ ರಸಾಸ್ವಾದನೆ. ಆಸ್ವಾದನೆ ಸುಲಭ ಸಾಧ್ಯವಲ್ಲ. ನಮ್ಮ ಬಾಳು ಉತ್ಕರ್ಷವಾಗಬೇಕಾದರೆ. ಆ ಕೃತಿ ನೀಡುವ ಪ್ರತಿಮೆಗಳು, ಸಾಂಕೇತಿಕ ಮೌಲ್ಯಗಳು, ಭೌತಿಕತೆಯ ದರ್ಶನವಾಗಬೇಕು. ಆ ಮಹಾ ದರ್ಶನಕ್ಕೆ ಸಂಸ್ಕೃತ ಪಂಡಿತರಷ್ಟೆ ಸಾಲದು ಕವಿ ಹೃದಯದ ವಿದ್ವಜ್ಜನ ಬೇಕು.

ಇಂದು ಮಹರ್ಷಿಗಳು ಋಷಿ ಸ್ಥಾನದಿಂದ ದೈವತ್ವಕ್ಕೇರಿದ್ದಾರೆ. ಅವರ ಹೆಸರಿನಲ್ಲಿ ಅನೇಕ ಮಂದಿರಗಳು, ದೇಗುಲಗಳು ಭಾರತಾದ್ಯಂತ ಕಂಡು ಬರುತ್ತವೆ. ಅದರಲ್ಲಿ ದೆಹಲಿಯಲ್ಲಿರುವ ವಾಲ್ಮೀಕಿ ದೇಗುಲ ಪುರಾತನವೆಂದು ಹೇಳುತ್ತಾರೆ. ವಾಲ್ಮೀಕಿಯ ಪ್ರತಿಮೆಯ ಜೊತೆಯಲ್ಲಿ ಶ್ರೀರಾಮ - ಸೀತೆಯರ ವಿಗ್ರಹಗಳೂ ಇದ್ದು ಪ್ರತಿ ದಿನವೂ ಪೂಜೆ, ದೀಪಾಲಂಕಾರಗಳು ನಡೆಯುತ್ತಿವೆ.ದೆಹಲಿಯಲ್ಲಲ್ಲದೆ ಅಮೃತಸರ, ಹರಿದ್ವಾರ, ತಮಿಳುನಾಡಿನ ತಿರುವಾನ್ಮಯೂರ್‌ಗಳಲ್ಲಿಯೂ ವಾಲ್ಮೀಕಿ ಮಂದಿರಗಳಿವೆ. ಪಾಕಿಸ್ತಾನದ ಲಾಹೋರ್‌ನಲ್ಲಿಯೂ ವಾಲ್ಮೀಕಿ ಮಂದಿರವಿರುವುದು ಉಲ್ಲೇಖನೀಯ.

ವಾಲ್ಮೀಕಿ ಬೇರೆಯಲ್ಲ, ರಾಮಾಯಣ ಬೇರೆಯಲ್ಲ. ಹೀಗಾಗಿ ಜಗತ್ತಿನಲ್ಲಿ ಎಲ್ಲಿಯವರೆವಿಗೆ ರಾಮಾಯಣವಿರುವುದೋ ಅಲ್ಲಿಯವರೆವಿಗೆ ವಾಲ್ಮೀಕಿಗಳು ಚಿರಂತನ.

ಕವಿ ಕೋಗಿಲೆಗೆ ನಮ್ಮ ನಮನವನ್ನು ಹೀಗೆ ಸಲ್ಲಿಸೋಣ:

ನಮಸ್ತಸ್ಯೇ ಮುನೀಶಾಯ ಶ್ರೀಯುತಾಯ ತಪಸ್ವಿನೇ
ಸ್ತಬ್ಧ ಜ್ಞಾನಾದಿ ವಾಸಾಯ ತಸ್ಮೈ ವಾಲ್ಮೀಕಯೇ ನಮಃ

### ಅವಿಸ್ಮರಣೀಯ ಪರಿವರ್ತನೆ

ಮಹರ್ಷಿ ವಾಲ್ಮೀಕಿಯ ಪೂರ್ವನಾಮ ರತ್ನಾಕರ. ಮೂಲತಃ ಬೇಡ ಜನಾಂಗದವರು. ಆತನ ಮುಖ ದುಂಡಾಗಿತ್ತು ಎನ್ನುವ ಕಾರಣಕ್ಕೆ ದುಂಡ ಅಂತಲೂ ಕರೆಯುತ್ತಾರೆ ಮತ್ತೆ ಇನ್ನು ಕೆಲವು ಗ್ರಂಥಗಳಲ್ಲಿ ಶಂಖ ಚೂಡಾ ಎಂದೂ ಕರೆಯುತ್ತಾರೆ. ರತ್ನಾಕರ ಒಮ್ಮೆ ಜಿಂಕೆ, ಮೊಲ ಎಲ್ಲವನ್ನು ಬೇಟೆಯಾಡಿಕೊಂಡು ಬಂದು ದಾರಿಯ ಮಗ್ಗುಲ ಮರದ ಕೆಳಗೆ ಕುಳಿತುಕೊಳ್ಳುತ್ತಾನೆ. ಅದು ಋಷಿ ಮುನಿಗಳು, ಮಹಾ ತಪಸ್ವಿಗಳು ವಾಸ ಮಾಡುವ ಹಿಮಾಲಯದ ತಪ್ಪಲು ಪ್ರದೇಶ, ಆಗ ಒಬ್ಬ ಗುರುವಿನ ಆಗಮನ ಆಗುತ್ತದೆ. ಬೇಟೆಯಾಡಿರುವ ಪ್ರಾಣಿಗೆ ಬಾಣ,ಭರ್ಜಿಯ ಮೂಲಕ ನೆಟ್ಟು ರಕ್ತ ಚಿಮ್ಮಿರುವುದನ್ನು ನೋಡಿ ಗುರುಗಳಿಗೆ ಬಹಳ ಕಸಿವಿಸಿ, ನೋವು ಆಗುತ್ತದೆ. ಆಗ ರತ್ನಾಕರನಿಗೆ ಕೇಳುತ್ತಾನೆ. "ನೀನು ಮಾಡುವ ಹಿಂಸೆ ಇದೆಯಲ್ಲ, ಅದು ಮಹಾ

ಪಾಪ.'ಅದು ನಿನ್ನನ್ನು ನರಕಕ್ಕೆ ತಳ್ಳುತ್ತದೆ' ಎಂದು ಹೇಳು ತ್ತಾರೆ. ಆಗ ರತ್ನಾಕರ ಪ್ರಶ್ನೆ ಮಾಡುತ್ತಾನೆ. 'ಅದು ಹೇಗೆ ಗುರುಗಳೇ? ಈ ಪ್ರಾಣಿ ಪಕ್ಷಿಗಳೆಲ್ಲ ನಾವು ತಿನ್ನಲ್ಲಿಕ್ಕೆ ಬದುಕಿವೆ' ಎಂದು ಸಮರ್ಥಿಸಿಕೊಳ್ಳುತ್ತಾನೆ. ಆಗ ಗುರು ಹೇಳುತ್ತಾನೆ. 'ಇಲ್ಲಪ್ಪಾ ನಮ್ಮ ಹಾಗೇನೇ ಈ ಪ್ರಾಣಿ ಪಕ್ಷಿಗಳಿಗೂ ಕೂಡಾ ಜೀವ ಇದೆ. ಹಾಗಾಗಿ, ಪ್ರಾಣಿ ಹಿಂಸೆ ಮಹಾಪಾಪ, ಪ್ರಾಣಿ ಹಿಂಸೆ ತೊರೆದು ನೀನು ಸಾತ್ವಿಕ ಮಾರ್ಗದಲ್ಲಿ ನಡೆಯಬೇಕು. ಪರಮಾತ್ಮ ನಮಗೆ ಹಣ್ಣು, ಹಂಪಲು, ಗೆಡ್ಡೆ, ಗೆಣಸು ಇಂತಹ ಸಾತ್ವಿಕ ಆಹಾರ ಕೊಟ್ಟಿದ್ದಾನೆ. ನಾವು ಅದನ್ನು ಸೇವಿಸಿ ಜೀವಿಸಿರಬಹುದು ಎಂದು ಹೇಳುತ್ತಾರೆ. ಆಗ ರತ್ನಾಕರ ನಿಗೆ ಎಲ್ಲೋ ಒಂದು ಕಡೆ ಪಶ್ಚಾತ್ತಾಪ ಆಗುತ್ತದೆ. ಗುರು ವಿನ ಮಾತು ಕೇಳಿ ಪರಿವರ್ತನೆ ಆಗುತ್ತಾನೆ.

ಮೂಲತಃ ಮಾಂಸ ಆಹಾರದ ಹಿನ್ನೆಲೆ ಇರುವ ಸಮುದಾಯಗಳಲ್ಲಿ ಹುಟ್ಟಿದ್ದರೂ ಕೂಡಾ ಗುರುವಿನ ಉಪದೇಶ ತೆಗೆದುಕೊಂಡು,ತಾರಕ ಮಂತ್ರ ಜಪ ಮಾಡುತ್ತಾ ಇಡೀ ಮಾಂಸಹಾರ ತ್ಯಜಿಸಿ, ಸಾತ್ವಿಕ ಜೀವನ ನಡೆಸುವ ಅನೇಕರು ನಮ್ಮ ಸಮಾಜದಲ್ಲಿ ಸಿಗುತ್ತಾರೆ. ಹಾಗೆ ರತ್ನಾಕರ ಪರಿವರ್ತನೆ ಆಗುತ್ತಾನೆ. ನಂತರ ನಾನೇನು ಮಾಡಬೇಕು ಎಂದು ಪ್ರಶ್ನೆ ಮಾಡು ತ್ತಾನೆ.ಒಂದು ತಾರಕ ಮಂತ್ರವನ್ನು ಪಂಚಾಕ್ಷರಿ, ಷಡಾ ಕ್ಷರಿ, ಶ್ರೀಮನ್ನಾನಾರಾಯಣ, ಹಾಗೇನೆ ರಾಮ ಕೃಷ್ಣ ಇವೆಲ್ಲ ತಾರಕ ಮಂತ್ರಗಳು. ಬಸವ ತಾರಕ ಮಂತ್ರ, ರಾಮ ಎನ್ನುವ ತಾರಕ ಮಂತ್ರವನ್ನು ಜಪ ಮಾಡಲಿಕ್ಕೆ ಹೇಳುತ್ತಾನೆ.

### ತಾರಕ ಮಂತ್ರ ಜಪ

ತಾರಕ ಮಂತ್ರವನ್ನು ಎಷ್ಟರ ಮಟ್ಟಿಗೆ ಜಪಿಸುತ್ತಾ ಹೋಗುತ್ತಾನೆಂದರೆ, ಅದು ಎಷ್ಟರ ಮಟ್ಟಿಗೆ ಸಿದ್ಧಿಯಾಗು ತ್ತದೆ. ಎಂದರೆ, ಆತ ಮುಂದೊಂದು ದಿನ ಮಹಾನ್ ತಪಸ್ವಿ ಆಗುತ್ತಾನೆ. ಹಾಗೆ ಆತ ತಪಸ್ಸನ್ನು ಮಾಡ್ತಾ ಮಾಡ್ತಾ ಸಿದ್ಧಿ ಪಡೆದುಕೊಳ್ಳುತ್ತಾನೆ ಮತ್ತೆ ಆ ಮಾರ್ಗ ದಲ್ಲಿ ಗುರು ಹೋಗುವ ಸಂದರ್ಭದಲ್ಲಿ ಅವನನ್ನು ಎಬ್ಬಿಸಿ ನಿನ್ನಿಂದ ಈ ಲೋಕ ಕಲ್ಯಾಣ ಆಗಬೇಕು. ನೀನೊಂದು ಮಹಾನ್ ಕಾರ್ಯಕ್ಕೆ ಬಂದಿದ್ದೀಯ. ಹುತ್ತ ಅಂದರೆ ಅದು ಜಡತ್ವ.ಹುತ್ತದಿಂದ ಬರುವುದೆಂದರೆ ಅದು ಸಜೀ ವವಾಗಿರುವಂತಾದ್ದು.ಜ್ಞಾನ, ಚೇತನ ವಸ್ತು ಹಾಗಾಗಿ ಹುತ್ತವೆನ್ನುವ ಜಡತ್ವದಿಂದ ಹೊರ ಹೊಮ್ಮಿ ಜ್ಞಾನಿಯಾದ. ಹುತ್ತ ಅಂದರೆ ವಲ್ಮೀಕ. ಜಡತ್ವದಿಂದ ಜ್ಞಾನದ ಕಡೆ ಬಂದವನು. ಆತನನ್ನು ಹರಸಿ, ಮುಂದಿನ ಕಾರ್ಯಕ್ಕೆ ಅಣಿಗೊಳಿಸುತ್ತಾರೆ.

ಇಡೀ ಜಗತ್ತಿಗೆ ವಿಶೇಷವಾಗಿ ನಮ್ಮ ಭಾರತ ದೇಶಕ್ಕೆ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಗೆ ರಾಮಾಯಣ ಕಾವ್ಯವನ್ನು ಕಟ್ಟಿಕೊಂಡಿರುತ್ತಾರೆ. 'ಆದಿ ಕವಿ ವಾಲ್ಮೀಕಿ ಮಹರ್ಷಿ'. ರಾಮಾಯಣ ಅಂತಂದಾಗ ಹಲವಾರು ದೃಷ್ಟಿಕೋನಗಳಿವೆ. ರಾಮ ಅಂದರೆ ಆತ್ಮ. ಈ ಭೂಮಿ ಎಲ್ಲರೂ ಆತ್ಮವನ್ನು ಧರಿಸಿಕೊಂಡು ಹುಟ್ಟಿ ದ್ದಾರೆ. ಸಮಾಜದಲ್ಲಿ ನಾವು ಯಾವ ರೀತಿ ನಡೆಯ ಬೇಕು. ನನ್ನ ಕರ್ತವ್ಯವೇನು? ರಾಮಾಯಣ ಅಂದರೆ, ರಾಮ ನಯನ ಐತಿಹಾಸಿನ ರಾಮ ಒಬ್ಬ ರಾಜ. ಅವರ ಆದರ್ಶಗಳು ನಮ್ಮ ಸಮಾಜಕ್ಕೆ ಪೂರಕವಾಗಿವೆ. ಆ ಹಿನ್ನೆಲೆಯಲ್ಲಿ ಆಧ್ಯಾತ್ಮಿಕವಾಗಿ ಕೂಡಾ ರಾಮಾಯಣ ಮುಖ್ಯವಾಗುತ್ತದೆ. ಸಾಮಾಜಿಕ ಜೀವನದಲ್ಲಿ ರಾಮಾ ಯಣವನ್ನು ಪಾತ್ರದ ಮೂಲಕ ಕಟ್ಟಿಕೊಡುವಂತ ಹಿನ್ನೆಲೆ ಯಲ್ಲಿದೆ. ಇಂತಹ ಮಹಾಕಾವ್ಯ ಕೊಟ್ಟಿರುವಂತ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ನಾಡಿನಾದ್ಯಂತ ಪ್ರತಿವರ್ಷ ಸೀಗೆ ಹುಣ್ಣಿಮೆಯಲ್ಲಿ ಆಚರಿಸಲಾಗುತ್ತಿದೆ.

ವಾಲ್ಮೀಕಿ ಜಯಂತಿಯಲ್ಲಿ ಬೇಡ ಸಮುದಾಯದ ವನ್ನು ಮಾತ್ರ ಒಳಗೊಳ್ಳದೆ ಎಲ್ಲಾ ಜಾತಿ ಸಮುದಾಯಗಳ ವಿಶ್ವಾಸ ಪಡೆದು ಕೂಡಿಕೊಂಡು ಆಚರಣೆ ಮಾಡ ಬೇಕಿದೆ. ಅಂತೆಯೇ ಮೇಲುಜಾತಿಗಳ ದಬ್ಬಾಳಿಕೆಗೆ ಒಳ ಗಾದ ಕಡೆಗಳಲ್ಲಿ ಪ್ರಜಾಸತ್ತಾತ್ಮಕ ಪ್ರತಿರೋಧವನ್ನು ದಾಖ ಲಿಸಬೇಕಿದೆ. ಎಷ್ಟೋ ಕಡೆಗಳಲ್ಲಿ ದಲಿತರ ಶೋಷಣೆ ಯಲ್ಲಿ ಹಿಂದುಳಿದ ವರ್ಗ ಮತ್ತು ಜಾತಿಗಳು ಸೇರ್ಪಡೆ ಗೊಂಡಿವೆ.ಅದರಲ್ಲಿ ವಾಲ್ಮೀಕಿ ಸಮುದಾಯವೂ ಒಂದು. ಜಾತಿದ್ವೇಷಗಳು ಬೆಳೆಯದ ಹಾಗೆ ಜಾತ್ಯಾತೀತ ತಿಳಿವನ್ನು ಹಂಚುವ ವೇದಿಕೆಗಳಾಗಿ ಈ ಆಚರಣೆ ರೂಪುಗೊಳ್ಳ ಬೇಕಿದೆ. ಹೀಗೆ ವಾಲ್ಮೀಕಿ ಜಯಂತಿಯು ಪುರಾಣದ ಪುನ ರಾವರ್ತಿತ ಸಂಗತಿಯಾಗದೆ, ವರ್ತಮಾನದಲ್ಲಿ ಸಮು ದಾಯ ಆತ್ಮಾವಲೋಕನ ಮಾಡಿಕೊಳ್ಳುವ ವೇದಿಕೆ ಯಾಗಬೇಕಿದೆ.

ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಮಲೆ
# ಶ್ರೀ ವೇಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವ

**30-09-2019 ರಿಂದ 08-10-2019 ರ ವರೆಗೆ**

## ಭಕ್ತರು ಕಲಾಬೃಂದಗಳು



30-09-2019 ಸೋಮವಾರ
ರಾತ್ರಿ : ದೊಡ್ಡ ಶೇಷ ವಾಹನ



01-10-2019 ಮಂಗಳವಾರ
ಹಗಲು :ಚಿಕ್ಕಶೇಷ ವಾಹನ



01-10-2019 ಮಂಗಳವಾರ
ರಾತ್ರಿ : ಹಂಸ ವಾಹನ



ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಮಲೆ
# ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವ

30-09-2019 ರಿಂದ 08-10-2019 ರ ವರೆಗೆ

## ಭಕ್ತರು ಕಲಾಬೃಂದಗಳು



02-10-2019 ಬುಧವಾರ
ಹಗಲು : ಸಿಂಹ ವಾಹನ



02-10-2019 ಬುಧವಾರ
ರಾತ್ರಿ: ಮುತ್ತಿನಚಪ್ಪರ ವಾಹನ



03-10-2019 ಗುರುವಾರ
ಹಗಲು: ಕಲ್ಪವೃಕ್ಷ ವಾಹನ



03-10-2019 ಗುರುವಾರ
ರಾತ್ರಿ : ಸರ್ವಭೂಪಾಲವಾಹನ

ತಿರುಮಲ ತಿರುಪತಿ ದೇವಸ್ಥಾನಗಳು

# ತಿರುಮಲೆ
# ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವ

30-09-2019 ರಿಂದ 08-10-2019 ರ ವರೆಗೆ

## ಭಕ್ತರು ಕಲಾಬೃಂದಗಳು



04-10-2019 ಶುಕ್ರವಾರ, ರಾತ್ರಿ: ಗರುಡವಾಹನ

05-10-2019 ಶನಿವಾರ ಹಗಲು : ಹನುಮದ್ವಾಹನ

05-10-2019 ಶನಿವಾರ ರಾತ್ರಿ: ಗಜವಾಹನ

04-10-2019 ಶುಕ್ರವಾರ ಹಗಲು : ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ

ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಮಲೆ
# ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವ

30-09-2019 ರಿಂದ 08-10-2019 ರ ವರೆಗೆ

## ಭಕ್ತರು ಕಲಾಬೃಂದಗಳು



06-10-2019 ಭಾನುವಾರ
ಹಗಲು : ಸೂರ್ಯಪ್ರಭವಾಹನ



06-10-2019 ಭಾನುವಾರ
ರಾತ್ರಿ : ಚಂದ್ರಪ್ರಭವಾಹನ



07-10-2019 ಸೋಮವಾರ
ರಾತ್ರಿ : ಅಶ್ವವಾಹನ





# ಕಾರ್ತೀಕ ದೀಪ ಸಂಭ್ರಮ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

ಇದೀಗ ಎಲ್ಲೆಡೆ ಲಕ್ಷ ದೀಪೋತ್ಸವದ ಸಂಭ್ರಮ. ಆಧ್ಯಾತ್ಮಿಕ ದೃಷ್ಟಿಯಲ್ಲಿ ದೀಪೋತ್ಸವದ ಅರ್ಥವೇನು? ದೀಪವನ್ನು ಹಚ್ಚುವುದಾದರೂ ಏಕೆ? ದೀಪವನ್ನು ಶಿವ ಮತ್ತು ವಿಷ್ಣುವಿನ ಪ್ರೀತ್ಯರ್ಥವಾಗೇ ಏಕೆ ಹಚ್ಚುತ್ತಾರೆ. ಕಾರ್ತೀಕ ಮಾಸದಲ್ಲೇ ಕೊಡುವ ದೀಪದಾನದ ಹಿಂದಿನ ಮಹತ್ವ ವೇನು? ಮತ್ತಿತರ ಸಂಗತಿಗಳ ಒಳನೋಟ.

ದೀಪದಿಂದ ದೀಪ ಹಚ್ಚಬೇಕು. ಬೆಳಕಿನಿಂದ ಕತ್ತಲೆ ನೀಗಬೇಕು, ಅಂತರಂಗದಲ್ಲಿ ಅರಿವಿನ ಜ್ಯೋತಿ ಮೂಡಬೇಕು. ಇದು ದೀಪೋತ್ಸವದ ಹಿಂದಿರುವ ಅನುಪಮ ಭಾವ. ಬತ್ತಿಹಾಕಿ, ಎಣ್ಣೆ ಸುರಿದು ಹುಚ್ಚುವ ದೀಪದಿಂದ ಮೂಡುವ ಬೆಳಕು ಹೊರಗಿನ ಕತ್ತಲು ಮಾತ್ರವಲ್ಲ  ನಮ್ಮೊಳಗಿನ ಅಜ್ಞಾನದ ಅಂಧಕಾರವನ್ನೂ ನೀಗಬೇಕು. ದೀಪ ಹಚ್ಚಿ ಒಂದು ನಿಮಿಷ ಕಣ್ಣುಮುಚ್ಚಿಕೊಳ್ಳಿ. ಮನದೊಳಗೆ ಬೆಳಕಿನ ಕಿಂಡಿ ತೆರೆದ ಭಾವ ಮೂಡುತ್ತದೆ. ದೀಪ ಸಂಯೋಜನಾತ್ ಜ್ಞಾನಂ.. ದೀಪ ಹಚ್ಚುವುದರಿಂದ ಜ್ಞಾನ, ವಿವೇಕ ಬೆಳೆಯುತ್ತದೆ. ಎದುರಿಗೆ ಉರಿವ ದೀಪದಿಂದ ನಮ್ಮೊಳಗೆ ಆಧ್ಯಾತ್ಮಿಕತೆ ಬೆಳಕು ಬರುತ್ತದೆ. ಅಜ್ಞಾನದ ಕತ್ತಲೆ ದೂರವಾಗುತ್ತದೆ. ಸಾಂಸಾರಿಕ ಜಂಜಾಟ, ಸಾಮಾಜಿಕ  ಸಂಘರ್ಷ ಎಲ್ಲವೂ ಅಜ್ಞಾನದ ಹಿನ್ನೆಲೆಯಿದೆ. ಉತ್ತಮ ಬಾಳ್ವೆಯ ಹಾದಿಗೆ ಜ್ಞಾನದ ಬೆಳಕೇ ಮಾರ್ಗದರ್ಶಕ. ದೀಪ ಹಚ್ಚಿ ಪಡೆವ ಉತ್ತಮ  ದೃಷ್ಟಿಯ ಮೂಲಕ ಸಮಾಜವನ್ನು ಸರಿಯಾದ, ಚಿಕಿತ್ಸಕ ದೃಷ್ಟಿಯಿಂದ ನೋಡುವುದು ಸಾಧ್ಯ. ದೇವರಿಗೆ ಅತ್ತಿತ್ತ ಎರಡು ದೀಪ ಹಚ್ಚುವುದು ನಮ್ಮೆರಡು ಕಣ್ಣಿನ ದೃಷ್ಟಿಗೂ ಪೂರಕ.

ಆಯುರ್ವೇದದ ಪ್ರಕಾರ ದೀಪ ಬೆಳಗುವುದರಿಂದ (ದೀಪಃ ಕಾಂತಿಂ ಪ್ರಯಚ್ಛತಿ) ಕಾಂತಿ ಹೆಚ್ಚುತ್ತದೆ. ದೀಪ ಬೆಳಗುವುದರಿಂದ, ದಾನದಿಂದ ವಂಶ ಬೆಳೆಯುತ್ತದೆ. ಸುಖ, ಶಾಂತಿ, ನೆಮ್ಮದಿ ಸಿಗುತ್ತದೆ.ಜ್ಞಾನಚಕ್ಷು ಕಾಂತಿ, ದೇಹ ಕಾಂತಿಯನ್ನೂ ಹೆಚ್ಚಿಸುತ್ತದೆ.ದೀಪ ದಾನದಿಂದ ಅನಿಷ್ಟ ನಿವಾರಣೆ, ಗ್ರಹಗತಿ ದೋಷವೂ ಪರಿಹಾರ ಸಾಧ್ಯ.

### ಎಲ್ಲೆಲ್ಲಿ ದೀಪೋತ್ಸವ ಸಂಭ್ರಮ

ತಿರುಪತಿಯಲ್ಲಿ ನಿತ್ಯ ಸಹಸ್ರ ದೀಪಾಲಂಕಾರ ಸೇವೆಯಿದ್ದರೆ ದೀಪಾವಳಿಯಿಂದ ತುಳಸಿ ಪೂಜೆ ತನಕ, ಕಾರ್ತೀಕ ಮಾಸದವರೆಗೆ ಉಡುಪಿಯ ಶ್ರೀಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನ, ಕಾರ್ಕಳದ ವೆಂಕಟರಮಣ ದೇವಸ್ಥಾನ, ಶ್ರೀ ಕ್ಷೇತ್ರ ಧರ್ಮಸ್ಥಳ, ಬೆಂಗಳೂರಿನ ಇಸ್ಕಾನ್ ,ಮಲೆ ಮಹದೇಶ್ವರ ಬೆಟ್ಟ. ಶೃಂಗೇರಿ ಇತ್ಯಾದಿ ಕ್ಷೇತ್ರಗಳಲ್ಲಿ ದೀಪೋತ್ಸವ ಸಂಭ್ರಮಕ್ಕೆ ಹಣತೆ, ವಿದ್ಯುದ್ದೀಪಗಳ ಅಲಂಕಾರದ ಶೋಭೆಯಿದೆ.

ದೀಪಾವಳಿಯ ಮುಕ್ತಾಯದೊಂದಿಗೆ, ಆರಂಭಗೊಳ್ಳುವ ಕಾರ್ತೀಕ ದೀಪೋತ್ಸವವು ಹಬ್ಬದ ಬೆಳಕಿನ ಸಂಭ್ರಮವನ್ನು ಮಾಸಪರ್ಯಂತ ವಿಸ್ತರಿಸುತ್ತದೆ. ಕಾರ್ತೀಕ ಮಾಸದಲ್ಲಿ ಇರುಳು ಸುಧೀರ್ಘ. ಹಗಲು ಸಣ್ಣ, ಬೇಗನೆ ಸಂಜೆಯಾಗುತ್ತದೆ.ಚಳಿಯೂ ವಿಪರೀತ.ಈ ಋತುಮಾನವು ದೀಪೋತ್ಸವಕ್ಕೆ ಹೇಳಿ ಮಾಡಿಸಿದಂತಿದೆ. ದೀಪಾವಳಿಯಲ್ಲಿ ದೀಪ ಹಚ್ಚುವ ಪ್ರಥೆ ಆರಂಭವಾದರೆ, ಮುಂದೆ ಕಾರ್ತೀಕ ಮಾಸದುದ್ದಕ್ಕೂ ಮನೆ ಮುಂದೆ 'ನಾಲ್ಕು ಹಣತೆ' ಯಾದರೂ ಹಚ್ಚಿಡಬೇಕೆಂದು ಸಂಪ್ರದಾಯ ಹೇಳುತ್ತದೆ.

ಕಾರ್ತೀಕಮಾಸಕ್ಕೆ ಪಂಚಾಂಗದಲ್ಲಿ ವಿಶೇಷ ಮನ್ನಣೆ ಇದೆ.ಈ ಮಾಸವನ್ನು ಅತ್ಯಂತ ಮಂಗಳಕರವೆಂದು ಪರಿಗಣಿಸಲಾಗುತ್ತದೆ.ಈ ಮಾಸದಲ್ಲಿ ಸಮುದ್ರ ಸ್ನಾನ, ಸಂಗಮ ಸ್ನಾನ ಮಾಡುವುದು ರೂಢಿ. ದೇವಾಲಯಗಳಲ್ಲಿ ಮಾಸದುದ್ದಕ್ಕೂ ವಿಶೇಷ ಭಜನೆ ಕೀರ್ತನೆಗಳು ನಡೆಯುತ್ತವೆ. ರಥೋತ್ಸವಗಳು ಆರಂಭವಾಗುತ್ತವೆ. ಕಾರ್ತಿಕ ಹುಣ್ಣಿಮೆ, ಅಮಾವಾಸ್ಯೆಗಳಂದು ವಿಶೇಷ ದೀಪೋತ್ಸವ ಲಕ್ಷದೀಪೋತ್ಸವಗಳು ನಡೆಯುತ್ತವೆ. ಈ ಮೂಲಕ ಪಿತೃದೇವತೆಗಳನ್ನು ಸಂತುಷ್ಟರನ್ನಾಗಿಸಬಹುದು ಎಂದು ಹರಿಹರರು ಪ್ರಸನ್ನರಾಗುವರೆಂದೂ ಹೇಳಲಾಗುತ್ತದೆ. ಅಯ್ಯಪ್ಪಮಾಲೆಯನ್ನು ಧರಿಸಿ ವ್ರತ ಸ್ವೀಕರಿಸುವುದು ಈ ಮಾಸದ ಮತ್ತೊಂದು ಮುಖ್ಯವಿಧೀ. ವ್ರತಧಾರಿಗಳು ಅಯ್ಯಪ್ಪ ವ್ರತ ದೀಕ್ಷೆ ತೊಟ್ಟು ನೇಮಗಳನ್ನು ಆರಂಭಿಸುತ್ತಾರೆ.ಇದು ಮಕರ ಸಂಕ್ರಾಂತಿಯ ಶಬರಿಮಲೆ ಯಾತ್ರೆಯೊಂದಿಗೆ ಅಧಿಕೃತವಾಗಿ ಕೊನೆಗೊಳ್ಳುತ್ತದೆ.

ಕಾರ್ತೀಕಮಾಸಕ್ಕೆ ಕೃಷ್ಣಪಕ್ಷದ ನಿರ್ದಿಷ್ಟ ತಿಥಿಗಳಂದು ನಿರ್ದಿಷ್ಟ ದೇವತೆಗಳನ್ನು ಆರಾಧಿಸಿದರೆ ವಿಶೇಷ ಫಲಗಳುಂಟೆಂದು ಹೇಳಲಾಗಿದೆ. ಈ ಪ್ರಕಾರವಾಗಿ ಬಹುಳ ಪಾಡ್ಯದಂದು ಅಗ್ನಿಯನ್ನು, ಬಿದಿಗೆಯಂದು ಅಶ್ವಿನಿದೇವತೆಗಳನ್ನು, ತದಿಗೆಯಂದು ಗೌರಿಯನ್ನು, ಚೌತಿಯಂದು ವಿನಾಯಕನನ್ನು ಪಂಚಮಿ-ಷಷ್ಠಿಗಳಂದು ಕುಮಾರಸ್ವಾಮಿಯನ್ನು, ಸಪ್ತಮಿಯಂದು ಸೂರ್ಯದೇವನನ್ನು, ಅಷ್ಟಮಿಯಂದು ಅಷ್ಟಲಕ್ಷ್ಮಿಯರನ್ನು, ನವಮಿಯಂದು ದುರ್ಗೆಯನ್ನು, ದಶಮಿಯಂದು ವಿಷ್ಣುವನ್ನು ತ್ರಯೋದಶಿಯಂದು ಯಮನನ್ನು, ಚತುರ್ದಶಿಯಂದು ಮತ್ಯುಂಜಯನನ್ನು ಅಮಾವಾಸ್ಯೆಯಂದು ಪಿತೃ ದೇವತೆಗಳನ್ನು ಪೂಜಿಸಬೇಕೆಂದು ಶಾಸ್ತ್ರಗಳು ಹೇಳುತ್ತವೆ.

### ದೇವರಿಗೆ ತುಪ್ಪದ ದೀಪ ಹಚ್ಚುವುದು ಏಕೆ?

ಮನೆಯಲ್ಲಿ ದೇವರಿಗೆ ತುಪ್ಪದ ದೀಪ ಹಚ್ಚುವುದು , ಆರತಿ ಬೆಳಗುವುದು, ಮಂಗಳ ಕಾರ್ಯಗಳಲ್ಲಿ ತಾಯಿ ಮಗುವಿಗೆ ಜನ್ಮಕೊಟ್ಟಾಗ ಹಾಗೂ ಇನ್ನಿತರ ವಿಶೇಷ ಸಂದರ್ಭಗಳಲ್ಲಿಯೂ ಸಹ ತುಪ್ಪದ ದೀಪ ಬೆಳಗುವ ಸಂಪ್ರದಾಯ ಬಹಳ ಹಿಂದಿನ ಕಾಲದಿಂದಲೂ ರೂಢಿಯಲ್ಲಿದೆ.ನಮ್ಮ ಪ್ರಾಚೀನ ಆಯುರ್ವೇದ ವೈದ್ಯಶಾಸ್ತ್ರ, ತುಪ್ಪ ಮತ್ತು ಅದರಲ್ಲಿನ ಔಷಧಿ ಗುಣಗಳ ಬಗ್ಗೆ ಸುಧೀರ್ಘವಾಗಿ ವಿವರಿಸುತ್ತಾ ಆಯಸ್ಸು ಮತ್ತು ಆರೋಗ್ಯ ವೃದ್ಧಿಗೆ ತುಪ್ಪ ಶ್ರೇಷ್ಠ ಪೌಷ್ಠಿಕ ಪದಾರ್ಥ ಎಂದು ಸಾರುತ್ತದೆ.

ಸೋಮಗುಣವುಳ್ಳ ತುಪ್ಪ, ಮಧುರ ರಸ, ಸ್ನಿಗ್ಧ ಗುಣ, ಶೀತವೀರ್ಯಗಳಿಂದ ಕೂಡಿದ್ದು, ದೇಹದಲ್ಲಿ ಪಿತ್ತ ಮತ್ತು ವಾತ ದೋಷಗಳನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ.ಅಗ್ನಿ ದೀಪಕ (ಜೀರ್ಣಶಕ್ತಿಯನ್ನು ಹೆಚ್ಚಿಸುವ) ಕ್ರಾಂತಿವರ್ಧಕ, ಶುಕ್ರವರ್ಧಕ, ಓಜೋವರ್ಧಕ ಯೌವನ ಕಾರಕ, ವೀರ್ಯವರ್ಧಕ, ಓಕ್ಷುಷ್ಯ (ಕಣ್ಣಿಗೆ ಹಿತ) ಹಿಷಪ್ಪ, ಮುಂತಾದ ಅಮೂಲ್ಯ ಗುಣಗಳನ್ನು ಹೊಂದಿರುವುದರ ಜೊತೆಗೆ ತುಪ್ಪ, ಧೀ, ಧೃತಿ, ಸ್ಮೃತಿವರ್ಧಕ, ಅಂದರೆ ವಿಷಯಗಳನ್ನು ಗ್ರಹಿಸುವ ಶಕ್ತಿಧಾರಣಶಕ್ತಿ, ಸ್ಮರಣಶಕ್ತಿ, ಪ್ರಸಾಧನ ಶಕ್ತಿ, ಮುಂತಾದ ಅಷ್ಟಾಂಗ ಗುಣಗಳನ್ನು ಹೆಚ್ಚಿಸುವ ಸಾಮರ್ಥ್ಯ ಹೊಂದಿದೆ.

ಮನಸ್ಸಿನಲ್ಲಿ ಮೂಡಬಹುದಾದ ದುಷ್ಟ ವಿಭಾಗಗಳನ್ನು ನಿವಾರಿಸಿ ಶಾಂತ ಚಿತ್ತ ಸ್ಥಿತಿಯನ್ನುಂಟು ಮಾಡುವ ಒಂದು ಅಪೂರ್ವ ಗುಣವಿದೆ. ಇಂಥ ಅಪೂರ್ವ ಗುಣಗಳಿಂದ ಕೂಡಿದ ತುಪ್ಪದ ಸೇವನೆಯಿಂದ ಆಯಸ್ಸು ಮತ್ತು ಆರೋಗ್ಯ ವೃದ್ಧಿಯಾಗುತ್ತವೆ ಎಂಬುದನ್ನು ಅರಿತಿದ್ದ ನಮ್ಮ ಪೂರ್ವಿಕರು ಇದನ್ನು ನಮ್ಮ ದೈನಂದಿನ ಆಹಾರದಲ್ಲಿ, ಆಚಾರದಲ್ಲಿ ಹಾಗೂ ಔಷಧಿಯಾಗಿ ಬಹು ವ್ಯಾಪಕವಾಗಿ ಬಳಸುತ್ತಿದ್ದರು.

ಪ್ರತಿದಿನ ದೇವರಿಗೆ ತುಪ್ಪದ ದೀಪ ಹಚ್ಚಿ ಪೂಜಿಸುವ ಪದ್ಧತಿಯನ್ನು ಈಗಲೂ ಕಾಣಬಹುದು. ಹೀಗೆ ಹಚ್ಚುವ ತುಪ್ಪದ ದೀಪ, ಬೆಳಗಿಸುವ ತುಪ್ಪದ ಆರತಿ, ಅಂಧಶ್ರದ್ಧೆ, ಗೊಡ್ಡು ಸಂಪ್ರದಾಯ ಮೂಢನಂಬಿಕೆ ಎಂದು ಅನೇಕರು ಭಾವಿಸುವರು. ಆದರೆ ಇಲ್ಲಿ ದೇವರ ಮುಂದೆ ದೀಪ ಹಚ್ಚುವ, ಆರತಿ

ಬೆಳಗುವ ಪರಂಪರೆಯನ್ನು ವೈಜ್ಞಾನಿಕವಾಗಿ ವಿಚಾರ ಮಾಡಿದಾಗ ದೀಪ ಉರಿಯುವಾಗ ಹೊರಸೂಸುವ ಧೂಮ ಮನೆಯಲ್ಲಿನ ವಾತಾವರಣವನ್ನು ಸೇರಿ ಅದರಲ್ಲಿ ಬಹುದಾದ ವಿಷಕ್ರಿಮಿಗಳನ್ನು ನಾಶಮಾಡಿ ಗಾಳಿಯನ್ನು ಶುದ್ಧಿ ಮಾಡುತ್ತದೆ. ಇದಲ್ಲದೆ ಈ ಧೂಮ ಸೇರಿದ ವಾಯುವನ್ನು ಸೇವಿಸಿದಾಗ ತುಪ್ಪದಲ್ಲಿನ ಮೇಧೋವರ್ಧಕ ಗುಣದ ಪ್ರಭಾವದಿಂದ ಮೆದುಳಿನಲ್ಲಿ ಚೇತನ ಉಂಟಾಗಿ,ಮೆದುಳಿನ ಗ್ರಹಣ, ಧಾರಣ, ಸ್ಮರಣ, ಪ್ರಸಾಧನ ಶಕ್ತಿಗಳು ವೃದ್ಧಿಯಾಗುತ್ತವೆ. ಇದರಿಂದ ವ್ಯಕ್ತಿಯಲ್ಲಿ ವಿಷಯವನ್ನು ಗ್ರಹಿಸುವ ಜ್ಞಾಪಕ ಶಕ್ತಿ, ರಸಾರಣ ಶಕ್ತಿಗಳು ಹೆಚ್ಚಾಗುತ್ತವೆ.ಇದಲ್ಲದೆ ತುಪ್ಪದ ಮತ್ತೊಂದು ಅಮೂಲ್ಯ ಗುಣವಾದ ಮನಸ್ಸಿನ ದೋಷಗಳಾದ ರಜೋ ಗುಣ, ಮತ್ತು ತಮೋಗುಣಗಳು ನಾಶವಾಗಿ ಸಾತ್ವಿಕ ಗುಣ ವೃದ್ಧಿಯಾಗುತ್ತದೆ. ಇದರಿಂದ ಮನಸ್ಸಿನಲ್ಲಿ ಮೂಡಬಹುದಾದ ಪಾಪ ವಿಚಾರಗಳು ದುಷ್ಟ ವಿಚಾರಗಳು ದೂರವಾಗಿ ಶಾಂತಚಿತ್ತತೆ ಮೂಡುತ್ತದೆ. ದೇವರ ಮುಂದೆ ದೀಪ ಹಚ್ಚಿ, ಪೂಜೆ, ಧ್ಯಾನಗಳಲ್ಲಿ ತೊಡಗಿದಾಗ ಮನಸ್ಸಿನ ಚಂಚಲತೆ ದೂರವಾಗಿ ಮನಸ್ಸು ಧ್ಯಾನದಲ್ಲಿ ಅಚಲವಾಗಿ ನಿಲ್ಲುತ್ತದೆ. ಇದರಿಂದ ಧ್ಯಾನದ ಪೂರ್ಣಫಲ ನಮಗೆ ದೊರೆಯುತ್ತದೆ. ಆದುದರಿಂದ ದೇವರ ಮುಂದೆ ತುಪ್ಪದ ದೀಪ ಹಚ್ಚುವ ಸಂಪ್ರದಾಯ ಮೂಢನಂಬಿಕೆಯಾಗಿರದೆ ಮನಸ್ಸಿನ ಆರೋಗ್ಯವನ್ನು ಕಾಪಾಡುವ ಒಂದು ಅಪೂರ್ವ ವೈಜ್ಞಾನಿಕ ಸತ್ಯವನ್ನು ನಿರೂಪಿಸುತ್ತದೆ. ತುಪ್ಪವನ್ನು ಸೇವಿಸುವುದರಿಂದ ಹೇಗೆ ದೇಹ ಆರೋಗ್ಯಗೊಳ್ಳುತ್ತದೆಯೋ ಹಾಗೆ ತುಪ್ಪದ ಧೂಪ ಸೇವನೆಯಿಂದ ಮನಸ್ಸಿನ ಆರೋಗ್ಯ ಹೆಚ್ಚುತ್ತದೆ.

ಇದಲ್ಲದೆ, ಹೋಮ, ಹವನ, ಯಜ್ಞಯಾಗಾದಿಗಳಲ್ಲಿ ಅಗ್ನಿಗೆ ತುಪ್ಪ ಸುರಿಯುವ ಪರಂಪರೆಯೂ ಸಹ ಬಹಳ ವೈಜ್ಞಾನಿಕ ಮಹತ್ವವನ್ನು ಹೊಂದಿದೆ. ಹೋಮ ಯಜ್ಞಗಳಲ್ಲಿ ಬಳಸುವ ವನಸ್ಪತಿಗಳು ಮತ್ತು ತುಪ್ಪ ಅಗ್ನಿಯ ಸಂಪರ್ಕದಿಂದ ಉಂಟಾಗುವ ಧೂಮ, ಸುತ್ತಮುತ್ತಲಿನ ವಾತಾವರಣವನ್ನು ನಿರ್ಮಲಗೊಳಿಸುತ್ತದೆ ಹಾಗೂ ಈ ಧೂಮದ ಸೇವನೆಯಿಂದ ಮನಸ್ಸಿನಲ್ಲಿ ಶಾಂತಚಿತ್ತ ನೆಲೆಸಿ,ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಕಾಪಾಡುವ ಸಾಮರ್ಥ್ಯವುಳ್ಳದ್ದಾಗಿದೆ ಎಂಬ ವಿಚಾರವನ್ನು ಇತ್ತೀಚಿನ ಕೆಲವು ವಿಚಾರವಾದಿ ವಿಜ್ಞಾನಿಗಳು ಪ್ರಮಾಣೀಕರಿಸಿದ್ದಾರೆ.




## ಶುಕ್ರವಾರಾಭಿಷೇಕ


***ಶ್ರೀ ವೆಂಕಟೇಶ್ವರ ಸ್ವಾಮಿಯವರ ಮೂಲ ಮೂರ್ತಿಗೆ ಪ್ರತಿ ಶುಕ್ರವಾರ ಬೆಳಗ್ಗೆ 5 ಗಂಟೆಗೆ ನಡೆಯುವ ಅಭಿಷೇಕವೇ ಶುಕ್ರವಾರಾಭಿಷೇಕ. ಪುನುಗು, ಕಸ್ತೂರಿ, ಜವ್ವಾದಿ ಇತ್ಯಾದಿ ಸುಗಂಧ ಪರಿಮಳ ದ್ರವ್ಯಗಳಿಂದ ಆಕಾಶಗಂಗಾ ತೀರ್ಥದಿಂದ ಸುಮಾರು ಒಂದು ಗಂಟೆ ಹೊತ್ತು ಅಭಿಷೇಕ ನಡೆಯುತ್ತದೆ. ಆ ಮೇಲೆ ಅರಿಶಿನದಿಂದ ಸ್ವಾಮಿಯ ವಕ್ಷಃಸ್ಥಳದ ಮೇಲೆ ಮಹಾಲಕ್ಷ್ಮಿಗೂ ಸಹ ಅಭಿಷೇಕ ನಡೆಯುತ್ತದೆ.***

***ಯಾವಾಗಲೂ, ಬ್ರಹ್ಮಾದಿ ದೇವತೆಗಳ ಕೋರಿಕೆ ಮೇರೆಗೆ ಕಲಿಯುಗದ ಮಾನವರಿಗೋಸ್ಕರ ನೆಲೆಸಿದ ಶ್ರೀನಿವಾಸನ ಯಥಾ ತಥಾವಾದ ರೂಪವನ್ನು ವಕ್ಷಃಸ್ಥಳ ಲಕ್ಷ್ಮಿ ಸಮೇತವಾಗಿ ಈ ಶುಕ್ರವಾರಾಭಿಷೇಕ ಸಮಯದಲ್ಲಿ ಮಾತ್ರವೇ ದರ್ಶನ ಪಡೆಯಲು ಸಾಧ್ಯವಾಗುತ್ತದೆ. ಅಭಿಷೇಕ ಆದ ನಂತರ ಸ್ವಾಮಿಯ ಕೊರಳಲ್ಲಿರುವ ಬಂಗಾರು ಅಲಮೇಲುಮಂಗ ಅಮ್ಮನವರಿಗೂ ಕೂಡ ಅಭಿಷೇಕ ನಡೆಯುತ್ತದೆ.***

***ಅಭಿಷೇಕಾನಂತರ ಭಕ್ತರೆಲ್ಲರ ಮೇಲೆ ಅಭಿಷೇಕ ತೀರ್ಥವನ್ನು ಸಂಪ್ರೋಕ್ಷಣೆ ಮಾಡುವುದರ ಜೊತೆ ಅಭಿಷೇಕ ದರ್ಶನ ಮುಗಿಯುತ್ತದೆ. ಸ್ವಾಮಿಯ ಶುಕ್ರವಾರಾಭಿಷೇಕ ದರ್ಶನದಿಂದ ಭಕ್ತರು ತಮ್ಮ ಪಾಪಗಳನ್ನು ತೊಳೆದುಕೊಂಡಂತೆ ಶುಭ್ರವಾಗಿ ತೊಲಗುವುದಲ್ಲದೆ, ಆರೋಗ್ಯ, ಐಶ್ವರ್ಯ, ಸಂಪತ್ತು ಸಮೃದ್ಧಿಯಾಗುತ್ತದೆ.***

***ಅಭಿಷೇಕಾ ನಂತರ ಸ್ವಾಮಿಯವರ ನಿಜಪಾದಗಳನ್ನು ಅಂದರೆ ಯಾವುದೇ ರೀತಿ ಕವಚಗಳಿಲ್ಲದೆ, ಸ್ವಾಮಿಯ ನಿಜಪಾದಗಳನ್ನು ದರ್ಶನ ಪಡೆಯಬಹುದು. ಈ ದರ್ಶನದಲ್ಲಿ ಮಾತ್ರವೇ ಸ್ವಾಮಿಯ ನಿಜ ಪಾದಗಳನ್ನು ದರ್ಶಿಸಲು ಸಾಧ್ಯವಾಗುತ್ತದೆ.***


ಹಸಿರು ತೋರಣ



# ತಿರುಮಲೆಯಲ್ಲಿ ಅಖಂಡ

– ತೆಲುಗು ಮೂಲ: ಎಂ.ವಿ. ರಮಣ
– ಅನುವಾದ : ಕೆ. ನರಸಿಂಹಮೂರ್ತಿ

ಹಿಂದೆ ಕಲಿಯುಗ ಆರಂಭದಲ್ಲಿ, ಜಂಬೂದೀಪ ಮಂಡಲಿಯು ಭಾರತದೇಶದಲ್ಲಿಯ ಗಂಗಾನದಿಗೆ ದಕ್ಷಿಣ ದಿಕ್ಕಿನ ಎರಡುನೂರು ಯೋಜನೆಗಳ ದೂರದಲ್ಲಿ, ಪೂರ್ವದ ಸಮುದ್ರಕ್ಕೆ ಪಶ್ಚಿಮಕ್ಕೆ ಐದುಯೋಜನೆಯ ದೂರದಲ್ಲಿ ನಾರಾಯಣ ಪರ್ವತದ ಮೇಲೆ ಸ್ವಾಮಿ ಪುಷ್ಕರಿಣಿ ತೀರಕ್ಕೆ ಪಶ್ಚಿಮ ಕನ್ಯಾಭಾದ್ರಪದ ಮಾಸ ಶ್ರವಣಾ ನಕ್ಷತ್ರದಿಂದ ಕೂಡಿದ ಸಿದ್ಧಿಯೋಗ ಶುಭವೇಳೆಯಲ್ಲಿ ಸಮಸ್ತ ದೇವತಾ ಸಮೂಹದಿಂದ ಪ್ರಾರ್ಥಿಸಲ್ಪಟ್ಟು, ಲೋಕರಕ್ಷಕನೂ, ಪರಮ ಪುರುಷನೂ ಆದ ಶ್ರೀನಿವಾಸ ಭಗವಂತನು ಅವತರಿಸಿದ್ದಾನೆಂದು ಪದ್ಮಪುರಾಣದ ಮಾತು.




ಹಾಗೆ ಅವತರಿಸಿದ ಸ್ವಾಮಿಯನ್ನು ಬ್ರಹ್ಮಾದಿದೇವತೆಗಳೆಲ್ಲರೂ ದರ್ಶಿಸಿದ್ದಾರೆ.ಆ ಸಮಯದಲ್ಲಿ ಸ್ವಾಮಿಯ ಉತ್ಸವವನ್ನು ವೈಭವೋಪೇತವಾಗಿ ಜರುಗಿಸಬೇಕೆಂದು ಆಸೆಪಟ್ಟಿದ್ದಾರೆ ಅದಕ್ಕೆ ಅಂಗೀಕರಿಸಿದ್ದಾನೆ ಸ್ವಾಮಿ. ಇದೇ ನಿಟ್ಟನಲ್ಲಿ ಬ್ರಹ್ಮನು ಒಂಭತ್ತು ದಿನಗಳ ಉತ್ಸವವನ್ನು ಏರ್ಪಾಟು ಮಾಡಿ ಅದರಲ್ಲಿ ವಾಹನ ಸೇವೆಯಲ್ಲಿ ಸ್ವಾಮಿಯು ಮೆರವಣಿಗೆ ಹೊರಡುವಂತೆ ಏರ್ಪಡಿಸಿದ್ದಾನೆ. ಉತ್ಸವ ಮೊದಲ ದಿನ ಮೊಟ್ಟ ಮೊದಲು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಉತ್ಸವದ ಆಹ್ವಾನವೆಂಬಂತೆ ಗರುಡಧ್ವಜವನ್ನು ಹಾರಿಸಿ ದೇವತೆ ಗಳೆಲ್ಲರಿಗೆ ಆಹ್ವಾನವನ್ನು ಕಳಿಸುವಂತೆ ವ್ಯವಸ್ಥೆ ಮಾಡಿದ್ದಾನೆ. ಅದರಲ್ಲಿ ಪ್ರಮುಖವಾಗಿ ಇಂದ್ರಾದಿ ದಿಕ್ಪಾ ಲಕರೆಲ್ಲರೂ ಆಹ್ವಾನಗೊಂಡಿದ್ದಾರೆ. ಇವರೆಲ್ಲರೂ ಅಷ್ಟದಿಕ್ಪಾಲಕರೆಂದು ಹೆಸರು ಪಡೆದವರು.

ಇವರೆಲ್ಲರೂ ಬ್ರಹ್ಮೋತ್ಸವಕ್ಕೆ ಬಂದು ತಿರುಮಲೆಯ ಬೀದಿಗಳಲ್ಲಿ ಎಂಟು ದಿಕ್ಕುಗಳಲ್ಲಿ ನೆಲೆಗೊಂಡು ಸ್ವಾಮಿಗೆ ಬ್ರಹ್ಮೋತ್ಸವ ವಾಹನಗಳ ಸೇವೆಯ ಸಂದರ್ಭದಲ್ಲಿ ಸ್ವಾಮಿ ತಿರುಮಲೆಯ ಬೀದಿ ಬೀದಿಗಳಲ್ಲಿ ಮೆರವಣಿಗೆ ಯಲ್ಲಿರುವಾಗ ಸ್ವಾಮಿಗೆ ಯಾವುದೇ ರೀತಿಯ ದೃಷ್ಟಿಯಾಗದಂತೆ ದುಷ್ಟ ಶಕ್ತಿಗಳು ಆವಾಹನೆಗೊಳ್ಳದಂತೆ ಬ್ರಹ್ಮೋತ್ಸವವು ಯಶಸ್ವಿಯಾಗಿ ಜರುಗುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಈ ಸಮಯದಲ್ಲಿ ಬ್ರಹ್ಮನು, ಕುಬೇರರು ಸಮರ್ಪಿಸಿದ ಆಭರಣಗಳಿಂದಲೇ ಅಲಂಕರಿಸಲ್ಪಡುತ್ತಾನಂತೆ.


ಹಾಗೆ ಬ್ರಹ್ಮೋತ್ಸವದಲ್ಲಿ ಅತ್ಯಂತ ಪ್ರಾಧಾನ್ಯತೆ ವಹಿಸಿಕೊಳ್ಳುವ ಈ ಅಷ್ಟದಿಕ್ಪಾಲಕರು ಯಾರು? ಅವರ ವಿಶೇಷ ಗಳೇನು? ಈ ಬ್ರಹ್ಮೋತ್ಸವದ ಸಂದರ್ಭದಲ್ಲಿ ತಿಳಿದುಕೊಳ್ಳೋಣ.....





ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಎಂಬುವು ನಾಲ್ಕು ದಿಕ್ಕುಗಳು. ಆಗ್ನೇಯ, ನೈರುತ್ಯ, ವಾಯುವ್ಯ, ಈಶಾನ್ಯ ಎಂಬುವು ನಾಲ್ಕು ಮೂಲೆಗಳು ಅಥವಾ ಉಪ ದಿಕ್ಕುಗಳು.ಈ ಎಂಟನ್ನು ಸೇರಿಸಿ ಅಷ್ಟದಿಕ್ಕುಗಳೆಂದು ಕರೆಯುವರು. ಈ ಅಷ್ಟದಿಕ್ಕುಗಳಿಗೆ ಸಂಬಂಧಿಸಿದವರ ವಿಶೇಷತೆಗಳನ್ನು ತಿಳಿದುಕೊಳ್ಳೋಣ.

### ಅಷ್ಟದಿಕ್ಪಾಲಕರ ವೃತ್ತಾಂತ

**1. ಇಂದ್ರದೇವ:** ಇಂದ್ರನು ದೇವತೆಗಳಿಗೆ ರಾಜನೆಂದು ವೇದ ಗಳಲ್ಲಿ ಕೀರ್ತಿಸಲಾಗಿದೆ. ಈತನು ಪೂರ್ವ ದಿಕ್ಕಿನ ಅಧಿಪತಿ. ಈತನು ಅದಿತಿಯ ಸುತನು. ಈತನ ಮಡದಿ







# ಬ್ರಹ್ಮೋತ್ಸವದಲ್ಲಿ ಅಷ್ಟದಿಕ್ಪಾಲಕರು




ಶಚೀದೇವಿ. ಆಯುಧವು ವಜ್ರ. ವಾಹನ ಐರಾವತ. ನಿವಾಸ ಅಮರಾವತಿ ಪಟ್ಟಣ. ಕ್ಷೀರಸಾಗರ ಮಥನದಲ್ಲಿ ಉದ್ಭವಿಸಿದ ಐರಾವತನೆಂಬ ಆನೆಯನ್ನು ಉಚ್ಚೈಶ್ರವನೆಂಬ ಕುದುರೆಯನ್ನು ಈತನು ವಶಪಡಿಸಿಕೊಂಡಿದ್ದಾನೆ.

ದೇವಾಸುರ ಸಂಗ್ರಾಮ ಸಮಯದಲ್ಲಿ ರಾಕ್ಷಸರನ್ನು ಸೋಲಿಸಿ, ದೇವತೆಗಳು ಗೆದ್ದಾಗ ಈ ವಿಜಯವು ತಮ್ಮ ಹಿರಿಮೆಯೆಂದು ದೇವತೆಗಳು ಭಾವಿಸಿದ್ದಾರೆ. ಈ ಸಮಯದಲ್ಲಿ ಅವರಿಗೊಂದು ಶೂನ್ಯ ಪ್ರದೇಶದಲ್ಲಿ ಪರಬ್ರಹ್ಮ ದೇದೀಪ್ಯ ಮಾನವಾದ ಬೆಳಕೊಂದು ಗೋಚರಿಸಿದೆ.ಆ ತೇಜಸ್ಸನ್ನು ನೋಡಿ ಆಶ್ಚರ್ಯಪಟ್ಟ ದೇವತೆಗಳು ಆ ರೂಪವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದಾರೆ. ಅವರಲ್ಲಿ ಅಗ್ನಿ ಮತ್ತು ವಾಯುವು ಮೊದಲು ಹೋಗಿ ಸಂಪೂರ್ಣ ತಿಳಿಯಲಾರದೇ ಹಿಂತಿರುಗಿ ಬಂದಿದ್ದಾನೆ. ಹಿಂದೆಲೇ ಇಂದ್ರನು ಆ ಪ್ರದೇಶಕ್ಕೆ ಹೋಗಿದ್ದಾನೆ. ಇಂದ್ರನು ಸಮೀಪಿಸುತ್ತಲೇ ಆ ಪ್ರಕಾಶವು ಅದೃಶ್ಯಗೊಂಡಿದೆ. ಆ ಸ್ಥಳದಲ್ಲಿ ದಿವ್ಯಮಂಗಳ ದೇಹಧಾರಿಯಾದ ಉಮೆಯು ಪ್ರತ್ಯಕ್ಷಗೊಂಡಿದ್ದಾಳೆ. ಆ ಉಮೆಗೆ ಇಂದ್ರನು ಮಾಯಮಾಟವಾದ ಯಕ್ಷನು ಯಾರೆಂದು ಕೇಳಿದ್ದಾನೆ.ಅದಕ್ಕೆ ಆಕೆ ಆತನು ಪರಬ್ರಹ್ಮನೆಂದೂ, ಆತನ ಕೃಪೆಯಿಂದಲೇ ನೀವುಗಳು ವಿಜಯಶಾಲಿಗಳಾಗಿರುವಿರೆಂದೂ ತಿಳಿಸಿದ್ದಾಳೆ. ಇಂದ್ರನು ಕೃತಜ್ಞತೆಯಿಂದ ಪರಬ್ರಹ್ಮನನ್ನು ಪ್ರಾರ್ಥಿಸಿದ್ದಾನೆ. ದೇವತೆಗಳಲ್ಲಿ ಇಂದ್ರಾಗ್ನಿ ವಾಯುಗಳು ಪರಬ್ರಹ್ಮನ ಬಳಿಗೆ ಸಾರಿದ್ದರಿಂದಲೇ ಶ್ರೇಷ್ಠರೆಂದು ಪ್ರಸಿದ್ಧಿ ಪಡೆದಿದ್ದಾರೆ. ಪರಬ್ರಹ್ಮ ಸ್ವರೂಪವನ್ನು ಕುರಿತು ಅಧಿಕವಾಗಿ ತಿಳಿದವನು ಇಂದ್ರನು ಮಾತ್ರನೇ ಆದುದರಿಂದ ಆತನೇ ದೇವತೆಗಳ ರಾಜನಾಗಿ ದೇವಲೋಕದ ಅಧಿಪತಿಯಾಗಿದ್ದಾನೆ.




8

**2.ಅಗ್ನಿದೇವ:** ಅಗ್ನಿ ಪಂಚಭೂತಗಳಲ್ಲೊಂದು, ಆಗ್ನೇಯಾಧಿಪತಿ ಮಹಾತೇಜಸ್ವಿ, ಸಪ್ತ ಹಸ್ತಗಳು, ಚತುರ್ಶಂಗಗಳು, ಏಳು ನಾಲಿಗೆಗಳು ಎರಡು ತಲೆಗಳಿಂದ ಕೂಡಿ ಶುಭ್ರವಾದ ಮಂದಹಾಸವನ್ನು ಹೊಂದಿದ ಸ್ವರೂಪನು. ಈತನ ತಂದೆಯ ಹೆಸರು ವೈಶ್ವಾನರುಡು. ತಾಯಿ ಶುಚಿಷ್ಮತಿ. ಪತ್ನಿ ಸ್ವಾಹಾದೇವಿ. ಆಯುಧ ಶಕ್ತಿ, ವಾಹನ - ಟಗರು ನಿವಾಸ ತೇಜೋವತಿ ಪಟ್ಟಣ. ಈ ಅಗ್ನಿ ಶಿವ ಪ್ರಭಾವ ಜನಿತನು. ಈತನು ಬಾಲಕನಾಗಿದ್ದಾಗ ನಾರದರೊಮ್ಮೆ ನೋಡಿ ಪ್ರಚಂಡ ಶಕ್ತಿಯುಳ್ಳವನೆಂದು ತಿಳಿಸಿದ್ದಾರೆ. ತನ್ನ ತಾಯ್ತಂದೆಯರ ಆಣತಿ ಮೇರೆಗೆ ಕಾಶಿಕ್ಷೇತ್ರಕ್ಕೆ ಹೊರಟ್ಟಿದ್ದಾನೆ. ಆತನು ಶಿವನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿದ್ದಾನೆ. ಇಂದ್ರನು ಅಗ್ನಿಯಿದ್ದಲ್ಲಿಗೆ ಬಂದು ವರವೀಯುವುದಾಗಿಯೂ ಏನು ವರಬೇಕೋ ಕೇಳಿಕೊಳ್ಳೆಂದಿದ್ದಾನೆ.ಆದರೆ ಅಗ್ನಿಯು ಅದನ್ನು ದಿಕ್ಕರಿಸಿ ಶಿವನು ಪ್ರತ್ಯಕ್ಷವಾಗುವವರೆಗೂ ತಪಸ್ಸು ಮಾಡುತ್ತೇನೆಂದು ಹೇಳಿ ಸಾಗಿಹಾಕಿದ್ದಾನೆ.ಕೋಪಗೊಂಡ ಇಂದ್ರನು ವಜ್ರಾಯುಧದಿಂದ ಮೂರ್ಛೆ ಹೋಗುವವರೆಗೆ ಹೊಡೆದಿದ್ದಾನೆ. ಆಗ ಶಿವನು ಪ್ರತ್ಯಕ್ಷನಾಗಿ ಅಗ್ನಿಯನ್ನು ರಕ್ಷಿಸಿ ಅನೇಕ ವರಗಳನ್ನು ಪ್ರಸಾದಿಸಿದ್ದಾನೆ. ಆಗ್ನೇಯಾಧಿಪತಿಯಾಗಿ ನೇಮಿಸಿದ್ದಾನೆ. ಈತನು ಅಷ್ಟವಸುಗಳಲ್ಲೊಬ್ಬನು. ಸರ್ವಭಕ್ಷಕನಾದ ಪರಮ ಪವಿತ್ರನು.ದೇವತೆಗಳಿಗೆ ಹವಿಸ್ಸನ್ನು ಮುಟ್ಟಿಸುವ ಕರ್ತವ್ಯ ಈತನದು.ಪರಬ್ರಹ್ಮಸ್ವರೂಪವನ್ನು ಅರಿತುಕೊಳ್ಳಲು ಹೊರಟ ಮೊಟ್ಟ ಮೊದಲಿಗನಾದ್ದರಿಂದ ಸಕಲ ಲೋಕ ವಂದಿತನಾದ ದೇವತೆಗಳಲ್ಲೇ ಶ್ರೇಷ್ಠನು.



7

**3.ಯಮದೇವ:**ಯಮನು ಪಿತೃಗಣಾಧಿಪತಿ, ದಕ್ಷಿಣ ಭಾಗದ ಪರಿಪಾಲನೆ ಈತನದೇ. ಈತನ ತಂದೆ ಸೂರ್ಯನು ತಾಯಿ ಸಂಜ್ಞಾದೇವಿ. ಪತ್ನಿ ಶ್ಯಾಮಲಾದೇವಿ. ಆಯುಧ ದಂಡವು. ವಾಹನ ಮಹಿಷಿ, ನಿವಾಸ ಸಂಯಮನಿ ಪಟ್ಟಣ, ಯಮನು ಮಹಾ ಉಗ್ರನಾದ ಧರ್ಮಾತ್ಮನು. ಯಮುನಾ ನದಿ ಯಮುನ



5



6

ಸಹೋದರಿ. ಚಿತ್ರಗುಪ್ತ, ಲೇಖರಿ, ಚಂಡ ಹಾಗೂ ಮಹಾಚಂಡ ಈತನ ಸೇವಕರು. ಧರ್ಮ-ಧರ್ಮ ವಿವೇಚನೆಯಲ್ಲಿ ನ್ಯಾಯ-ನ್ಯಾಯ ಪರಿಪಾಲನೆ ಯಲ್ಲೀತ ಮಹಾಸಮರ್ಥನು. ಪಾಪಿಗಳನ್ನು ಶಿಕ್ಷಿಸುವುದೇ ವೃತ್ತಿ. 'ಸಮವರ್ತಿ' ಎನ್ನುವುದು ಈತನ ಬಿರುದು. ಶನೇಶ್ವರನು ಈತನ ಮಲ - ಸೋದರ . ಪುಣ್ಯಾತ್ಮರಿಗೆ ಪ್ರಸನ್ನನಾಗಿಯೂ, ಪಾಪಿಗಳಿಗೆ ಭೀಕರವಾಗಿ ಕಾಣಿಸುವ ಈ ಯಮನಿಗೆ ಆಲದಮರವೆಂದರೆ ಬಲು ಪ್ರೀತಿ.

**4. ನಿರ್‌ಋತಿ:** ನಿರ್‌ಋತಿ ನೈರುತ್ಯ ದಿಕ್ಪಾಲಕನು. ಲೋಕಾಧಿಪತಿ, ಸತ್ಪುರುಷ, ಕೀರ್ತಿವಂತ, ಪತ್ನಿ ದೀರ್ಘಾದೇವಿ, ಆಯುಧ ಗುರಾಣಿಯು ವಾಹನವು ನರನು. ನಿವಾಸವು ಕೃಷ್ಣಾಂಗನ ಪಟ್ಟಣ. ಈತನ ಹಿಂದಿನ ಜನ್ಮದಲ್ಲಿ ಪಿಂಗಾಕ್ಷನೆಂಬ ಹೆಸರುಳ್ಳವನು. ಕುಲವೃತ್ತಿಯನ್ನು ಸ್ವೀಕರಿಸದೇ ಸದಾಚಾರ ವರ್ತನೆಯುಳ್ಳವನಾಗಿದ್ದನು. ಹೀಗಿರಲು ಪಿಂಗಾಕ್ಷನ ಚಿಕ್ಕಪ್ಪ ದಾರುಕನು ಮಹಾದುರ್ಮಾರ್ಗನು. ಆತನು ತನ್ನ ಅನುಚರರೊಂದಿಗೆ ಕೂಡಿ ದಾರಿಹೋಕರ ಗುಂಪೊಂದನ್ನು ದಾಳಿಮಾಡಿದ್ದಾನೆ. ಅವರನ್ನು ನಾನಾ ವಿಧ ಆಯುಧಗಳಿಂದ ಹೊಡೆದು ಹಿಂಸಿಸಿದ್ದಾನೆ. ಅವರ ಆರ್ತನಾದ ಮಾಡಲು ಕೇಳಿಸಿಕೊಂಡ ಪಿಂಗಾಕ್ಷಕನು ಆ ಪ್ರದೇಶಕ್ಕೆ ಬಂದು ಅವರನ್ನು ರಕ್ಷಿಸಲು ತನ್ನ ಚಿಕ್ಕಪ್ಪನೊಡನೆ ಯುದ್ಧಗೈದಿದ್ದಾನೆ. ಆ ಯುದ್ಧದಲ್ಲಿ ದಾರಕನು, ಆತನ ಅನುಚರರೆಲ್ಲಾ ಸೇರಿ ಪಿಂಗಾಕ್ಷನನ್ನು ಬಾಣಗಳಿಂದ ಹೊಡೆದು ಸಾಯಿಸಿದ್ದಾರೆ. ಪರೋಪಕಾರ ಪಾರಾಯಣನಾದ, ದೈವ ಭಕ್ತನಾದ, ಸದಾಚಾರ ಸಂಪನ್ನನಾದ, ಧರ್ಮಾತ್ಮನಾದ ಪಿಂಗಾಕ್ಷನು ಈ ವಿಧವಾಗಿ ಮರಣಿಸಿ ಪುಣ್ಯ ಲೋಕವನ್ನು ಪಡೆದನು. ಶುಭಗುಣ ಸಂಪನ್ನನಾದ ನಿರ್‌ಋತಿ ಲೋಕಾಧಿಪತಿಯಾಗಿ ನೇಮಕಗೊಂಡ ಪ್ರಸಿದ್ಧಿ ಪಡೆದಿದ್ದಾನೆ.

**5.ವರುಣದೇವ:** ಯಜ್ಞ ಸಮಯದಲ್ಲಿ ಹವಿರ್ಭಾಗವನ್ನು ತಲುಪಿಸಲು ಆಹ್ವಾನಿಸಲ್ಪಡುವ ವರುಣನು ಪಶ್ಚಿಮ ದಿಕ್ಪಾಲಕನು.ಜಲಾಧಿಪತಿ ಈತನ ತಂದೆ ಕರ್ದಮ ಪ್ರಜಾಪತಿ.ಪತ್ನಿ ಕಾಳಿಕಾದೇವಿ. ಆಯುಧ ಪಾಶವು. ವಾಹನವು ಮೊಸಳೆ. ನಿವಾಸವು ಶ್ರದ್ಧಾವತಿ ಪಟ್ಟಣವು ಈತನಿಗೆ ಶುಚಿಷ್ಮಂತನೆಂದು ಸಹಾ ಹೆಸರು.

ಬಾಲ್ಯದಲ್ಲಿ ಈ ಶುಚಿಷ್ಮಂತನು ಗೆಳೆಯರೊಡನೆ ಕೂಡಿ ಒಂದು ಕಾಲುವೆಯ ಹತ್ತಿರದಲ್ಲಿ ಆಡುತ್ತಿರಲು ಒಂದು ಮೊಸಳೆ ಆತನನ್ನು ನುಂಗಿ ಸಮುದ್ರದೆಡೆಗೆ ಆತನನ್ನು ಕರೆದೊಯ್ದಿದೆ. ಗೆಳೆಯರೆಲ್ಲರೂ ಶುಚಿಷ್ಮಂತನನ್ನು ಮೊಸಳೆ ನುಂಗಿದೆಯೆಂದು ಕರ್ದಮನಿಗೆ ಹೇಳಿದ್ದಾರೆ. ಕರ್ದಮನಾಗ ನಿಶ್ಚಿಲನಾಗಿ ತಪದಲ್ಲಿ ತೊಡಗಿದ್ದಾನೆ. ಶಿವನು ಕಳಿಸಲಾಗಿ ಶಿವಭಟನೊಬ್ಬನು ಸಮುದ್ರದುದ್ದಕ್ಕು ಕಾರ್ಯಾರ್ಥಿಯಾಗಿ ಬಂದು ಅಲ್ಲಿ ಶುಚಿಷ್ಮಂತನನ್ನು ನೋಡಿ ಕರ್ದಮನ ಪುತ್ರನನ್ನು ಇಲ್ಲಿಗೇಕೆ ತಂದೆಯೆಂದು ಪ್ರಶ್ನಿಸಿದ್ದಾನೆ.ಕರ್ದಮನ ಪುತ್ರನೆಂದು ತಿಳಿಯುತ್ತಲೇ ಸಮುದ್ರನು ಆತನನ್ನು ಶಿವನ ಬಳಿ ಬಿಟ್ಟಿದ್ದಾರೆ. ಶಿವನು ಆತನನ್ನು ಕರ್ದಮನಿಗೆ ಸೇರಿಸಿದ್ದಾನೆ. ಶಿವ ದರುಶನದ ಪ್ರಭಾವದಿಂದ ಶುಚಿಷ್ಮಂತನಿಗೆ ಜ್ಞಾನೋದಯವಾಗಿದೆ. ತಂದೆ ಅನುಜ್ಞೆಯ ಮೇರೆಗೆ ಕಾಶಿಪಟ್ಟಣದಲ್ಲಿ ಶಿವನನ್ನು ಕುರಿತು ಕಠೋರ ತಪಸ್ಸನ್ನು ಮಾಡಿದ್ದಾನೆ. ಶಿವನು ಪ್ರಸನ್ನನಾಗಿ ವರವನ್ನು ಕೇಳಿಕೊಳ್ಳೆಂದು ನುಡಿದಿದ್ದಾನೆ. ವರುಣನು ತನಗೊಂದು ಪದವಿ ಕೊಡಬೇಕೆಂದು ಕೇಳಿಕೊಂಡಿದ್ದಾನೆ. ಶಿವನು ಅನುಗ್ರಹಿಸಿದ್ದಾನೆ. ಆ ದಿನದಿಂದ ಶುಚಿಷ್ಮಂತನು ವರುಣನಾಗಿ ವರುಣ ಲೋಕಕಕ್ಕೆ ಅಧಿಪತಿಯಾಗಿ ಪ್ರಸಿದ್ಧಿ ಪಡೆದಿದ್ದಾನೆ.

**6.ವಾಯುದೇವ:** ವಾಯುವು ಪಂಚಭೂತಗಳಲ್ಲೊಬ್ಬನು ಸರ್ವವ್ಯಾಪಕನು, ಮಹಾಬಲವಂತನು, ವಾಯುವ್ಯ ದಿಕ್ಕಿಗೆ ಅಧಿಪತಿಯಾದ ಈತನು ಜೀವ ಕೋಟಿಗೆ ಪ್ರಾಣನು



ಶಿವನ ವರ ಪ್ರಭಾವದಿಂದ ದಿಕ್ಪಾಲತೆ,ಪ್ರಾಣಾಪಾನಾದಿ ಪಂಚ ಮೂರ್ತಿತ್ವ, ಸರ್ವಗತ್ವ, ಸರ್ವ ಸತ್ಯ ಭೋಧಿತತ್ವಗಳು ಈತನಿಗೆ ಲಭಿಸಿವೆ. ಈ ವಾಯು ದೇವನು ಪೂರ್ವ ಜನ್ಮದಲ್ಲಿ ಪೂತಾತ್ಮನೆಂಬ ಬ್ರಾಹ್ಮಣನು.ಕಶ್ಯಪ ಮಹರ್ಷಿ ದಾತನು.ಪತ್ನಿ ಅಂಜನಾ ದೇವಿ. ಆಯುಧವು ಧ್ವಜವು, ವಾಹನವು ಜಿಂಕೆ, ನಿವಾಸವು ಗಂಧವತಿ ಪಟ್ಟಣ.

ವಾಯುದೇವನು ಕುಂಜರನ ಪುತ್ರಿ ಆದ ಅಂಜನಾ ಎಂಬ ವಾನರ ಸ್ತ್ರೀಯನ್ನು ಕಂಡು ಮೋಹಿಸಿದ್ದಾನೆ. ವಾಯುದೇವನ ಅನುಗ್ರಹದಿಂದಾಗಿ ಆಕೆ ತನ್ನ ಪಾತಿವ್ರತ್ಯಕ್ಕೆ ಧಕ್ಕೆ ಬಾರದಂತೆ ಆಂಜನೇಯನೆಂಬ ಪುತ್ರನಿಗೆ ಜನ್ಮವಿತ್ತಿದ್ದಾಳೆ. ವಾಯುದೇವನಿಗೆ ಆಂಜನೇಯನು ಮಾನಸಪುತ್ರನು, ವಾಯು ವ್ಯಾಧಿಗಳಿಗೆ ಅಧಿ ಪತಿಯಾದ ವಾಯು ದೇವನು ವಿವಿಧ ಪುರಾಣೇತಿಹಾಸಗಳಲ್ಲಿ ಅನೇಕ ಬಾರಿ ದರ್ಶನವೀಯುತ್ತಾನೆ. ಅಗ್ನಿಗೆ ಆತನು ಒಳ್ಳೆಯ ಸ್ನೇಹಿತನು.

**7. ಕುಬೇರ:** ಕುಬೇರನು ಸಕಲ ದೇವತಾ ಪ್ರಿಯತಮನು ಉತ್ತರದಿಕ್ಕಿನ ಅಧಿಪತಿ. ಧನಪತಿ. ಭಾಗ್ಯಶಾಲಿ ಕುಬೇರನ ತಂದೆ ವಿಶ್ರವೋಬ್ರಹ್ಮ, ತಾಯಿ ಇಲ ಬಿಲ, ಪತ್ನಿ ಚಿತ್ರರೇಖಾದೇವಿ. ಆಯುಧಖಡ್ಗ,ವಾಹನ ಕುದುರೆ ನಿವಾಸ ಅಲಕಾಪುರಿ ಪಟ್ಟಣ.ರಾವಣಬ್ರಹ್ಮ ಈತನ ಮಲ ಸಹೋದರ. ಕುಬೇರನು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ನಳಕುಬೇರನೆಂಬ ಸುಂದರವಾದ ಪುತ್ರನನ್ನು, ಲೋಕ ಪಾಲಕತ್ವವನ್ನು, ಧನಾಧಿಪತ್ಯ ವನ್ನು, ಶಂಕರನ ಸಖ್ಯವನ್ನು,ಲಂಕಪಟ್ಟಣಗಳನ್ನು ವರಗಳಾಗಿ ಕೋರಿ ಕೊಂಡಿದ್ದಾನೆ. ಬ್ರಹ್ಮನು ಅನುಗ್ರಹಿಸಿದ್ದಾನೆ. ಅಷ್ಟೇ ಅಲ್ಲದೇ 'ಪುಷ್ಪಕ'ವೆಂಬ ದಿವ್ಯ ವಿಮಾನವನ್ನು ಸಹಾ ಪ್ರಸಾದಿದ್ದಾನೆ.

ರಾವಣಬ್ರಹ್ಮನು ವರ ಪಡೆದು ಅಹಂಕಾರಿಯಾಗಿ ಲೋಕ ಗಳನ್ನು ಪೀಡಿಸುತ್ತಾ ಅಣ್ಣನಾದ ಕುಬೇರನನ್ನು ಕೂಡಾ ಹಿಂಸಿಸಿ ಪುಷ್ಪಕವಿಮಾನವನ್ನು ಲಂಕಾಪಟ್ಟಣವನ್ನು ಆತನಿಂದ ಕಿತ್ತು ಸ್ವಾಧೀನ ಮಾಡಿಕೊಂಡಿದ್ದಾನೆ. ಕುಬೇರನು ಶಿವನ ಮೊರೆ ಹೋಗಲು ಆತನು ಅಲಕಾಪುರಿಪಟ್ಟಣವನ್ನು ಪ್ರಸಾದಿಸಿದ್ದಾನೆ. ಕಲಿಯುಗದೈವವಾದ ಶ್ರೀ ವೆಂಕಟೇಶ್ವರನು ಪದ್ಮಾವತಿಯನ್ನು ವಿವಾಹವೆಸಗುವ ಸಂದರ್ಭದಲ್ಲಿ ಈ ಕುಬೇರನ ಬಳಿಗೆ ಸಾಲಕ್ಕಾಗಿ ಸಾರಿ ಬಂದಿದ್ದಾರೆ. ಈತನು ಅತ್ತಿ ಮರವನ್ನು ಸಾಕ್ಷಿಯಾಗಿಟ್ಟುಕೊಂಡು ಸ್ವಾಮಿಗೆ ಧನಸಹಾಯವನ್ನು ಮಾಡಿದ್ದಾನೆ. ಆದಕಾರಣವೇ ಬಡ್ಡಿಕಾಸು ಬಿಡದವನಾಗಿ ಇಂದಿನವರೆಗೂ ಸ್ವಾಮಿಯು ಕುಬೇರನಿಗೆ ಬಡ್ಡಿ ಕಟ್ಟುತ್ತಲೇ ಇದ್ದಾನೆಂದು ಹೇಳುತ್ತಾರೆ. ಮಹಾಲಕ್ಷ್ಮಿ ಕಟಾಕ್ಷ ಸಂಪನ್ನ ನಾದ ಕುಬೇರನು ನಿಜಕ್ಕು ಧನ್ಯನು, ಧರ್ಮಾತ್ಮನು.

**8.ಈಶಾನ್ಯಾಧಿಪತಿ:** ಸಾಕ್ಷಾತ್ ಈಶಾನ್ಯಾಧಿಪತಿಯೇ ಈ ಪರಮಶಿವನು. ಜಗದಂಬ ಪಾರ್ವತಿದೇವಿ ಈತನ ಮಡದಿ. ಆಯುಧ ತ್ರಿಶೂಲವು. ವಾಹನ ವೃಷಭವು.ನಿವಾಸ ಯಶೋವತಿ ಪಟ್ಟಣ. ಪಾರ್ವತಿ ಪರಮೇಶ್ವರರು ಆದಿದಂಪತಿಗಳೆಂದು ಪ್ರತೀತಿ. ಈ ಶಂಕರನು ಕೋರಿದವರ ಬಯಕೆಗಳನ್ನೆಲ್ಲಾ ಹಿಂದು - ಮುಂದು ನೋಡದೇ ನೆರವೇರಿಸುವುದರಿಂದಲೇ ಈತನಿಗೆ ಭೋಳಾ ಶಂಕರನೆಂದು ಹೆಸರು.ಇವನು ಮಹಾಶಕ್ತಿವಂತನು. ತ್ರಿಮೂರ್ತಿಗಳ ಲೊಬ್ಬನು. ಸರ್ವ ಸ್ವತಂತ್ರನು. ಭೂತಗಣ ಸಂಸೇವಿತನಾಗಿ ದೃಷ್ಟಿ ಯಿಂದಲೇ ಬೂದಿ ಮಾಡಿ ಬಿಡುವ ಶಕ್ತಿಯುಳ್ಳ ಮೂರನೇ ಕಣ್ಣನ್ನು ಹೊಂದಿರುವ ಈತನು ಲಯಕತ್ವವು. ಕೈಲಾಸ ಈತನ ನಿವಾಸ. ಲೋಕಕಂಟಕನಾದ ಹಾಲಾಹಲ ಸಾಗರದಿಂದ ಉತ್ಪನ್ನದ ವಿಷಯವನ್ನು ನುಂಗಿ ಲೋಕವನ್ನು ಕಾಪಾಡಿದ್ದಾನೆ. ಈ ಶಿವನು ಸರ್ವ ಶಕ್ತಿವಂತನು ಆಗ್ರಹಾನುಗ್ರಹ ಸಮರ್ಥನು. ವಿಷ್ಣುವಿನ ಪ್ರಾಣಸ್ನೇಹಿತನು. ಭೃಗು ಮಹರ್ಷಿಯಿಂದ ಶಾಪಕ್ಕೊಳಪಟ್ಟು ಲಿಂಗಾಕಾರದಲ್ಲಿ ಪೂಜೆಗಳನ್ನು ತೆಗೆದುಕೊಳ್ಳುವ ಪರಮೇಶ್ವರನು ಎಲ್ಲರಿಗೂ ಪೂಜ್ಯನು, ವಂದಿತನು, ಮಹಾನುಭಾವನು.

ಮೇಲೆ ತಿಳಿಸಿದ ಅಷ್ಟದಿಕ್ಪಾಲಕರೆಲ್ಲರನ್ನೂ ಸ್ವಾಮಿಯ ಬ್ರಹ್ಮೋತ್ಸವದಲ್ಲಿ ಸ್ಮರಿಸೋಣ.


## ಶ್ರೀ ವೆಂಕಟೇಶ್ವರ ವೇದ ಪರಿರಕ್ಷಣ ಟ್ರಸ್ಟ್

ಹಿಂದೂ ಸಂಸ್ಕೃತಿಯನ್ನು, ಸನಾತನ ಧರ್ಮಕ್ಕೆ ಮೂಲ ಸೋತ್ರವಾದ ವೈದಿಕ ಸಂಪ್ರದಾಯ ಪರಿರಕ್ಷಣೆಯಿಂದ ಅದರ ಪರಿವ್ಯಾಪ್ತಿಯನ್ನು ಹಿಗ್ಗಿಸುವ ಮಹೋನ್ನತ ಲಕ್ಷ್ಯದಿಂದ 2007 ರಲ್ಲಿ ತಿ.ತಿ.ದೇ ವೇದ ಪರಿರಕ್ಷಣ ಟ್ರಸ್ಟ್ ಆರಂಭವಾಗಿದೆ. ಉನ್ನತಧ್ಯೇಯ ಹೊಂದಿದ ಈ ಟ್ರಸ್ಟ್ ಗೆ ಸದ್ಭಾವನೆಯಿಂದ ವಂತಿಗೆ ನೀಡಬೇಕೆಂದು ಲೋಕೋಪಕಾರಿಗಳನ್ನು ಆಹ್ವಾನಿಸುತ್ತಿದ್ದೇವೆ.80(ಜಿ) ಅಧಿಕರಣ ದನ್ವಯ ಆದಾಯಕರ ವಿನಾಯಿತಿ ದೊರೆಯುತ್ತವೆ.

**ಡಿಮಾಂಡ್ ಡ್ರಾಫ್ಟ್ /ಚೆಕ್‌ಗಳನ್ನು ಕಳುಹಿಸಬೇಕಾದ ವಿಳಾಸ:**

ಮುಖ್ಯ ಗಣಾಂಕಾಧಿಕಾರಿ . ತಿ.ತಿ.ದೇ. ಆಡಳಿತ ಭವನ,
ಕೆ.ಟಿ.ರಸ್ತೆ ,ತಿರುಪತಿ - 517501

*ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಬೇಕಾದ*

☎ - *0877-2277777,2264258*

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯ ಆರ್ಜಿತ ಸೇವೆಗಳು – ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ|| | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ|| | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ|| | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ|| | 2 | ರೂ. 1,000.00 |
| 5. | ಡೋಲೋತ್ಸವ (ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ|| | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ|| | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ|| | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ|| | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ|| | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ|| | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ|| | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ|| | 1 | ರೂ. 850.00 |
| 13. | ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ|| | 2 (ಗಂಡ ಹೆಂಡತಿ) | ರೂ. 12,250.00 |
| ಅ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ|| | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ|| | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ|| | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ|| | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ|| | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ|| | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ|| | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ|| | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ|| | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ|| | 1 | ರೂ. 300.00 |

Call Centre : 0877–2233333,
0877–2277777
Toll free : 18004254141,
1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್ ನಲ್ಲಿ ಮಾತ್ರವೇ ಟಿಕೆಟ್ ಬುಕ್ ಮಾಡಿಕೊಳ್ಳಬೇಕು. ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.

# ಎಚ್ಚರಿಕೆ – ಕರ್ತವ್ಯೋಪದೇಶ

ಮೂಲ - ವೈಷ್ಣವಾಂಘ್ರಿ ಸೇವಕ್‌ದಾಸ್
ಅನುವಾದ - ಡಿ.ಎಸ್. ಭೂಮಿಕ

ಎಚ್ಚರಿಸುವವರು ಬಹಳಾ ಜನ ಸಿಗುತ್ತಾರೆ. ಆದರೆ ಪ್ರಮಾದದ ಎಚ್ಚರಿಕೆಯ ಜೊತೆಗೆ ತಕ್ಷಣಕ್ಕೆ ಮಾಡಬೇಕಾದ ಕರ್ತವ್ಯವನ್ನು ಕುರಿತು ತಿಳಿಸುವವರು ಬಹಳವೇ ವಿರಳ ವಾಗಿರುತ್ತಾರೆ. ಮನುಷ್ಯನಿಗೆ ಪರಮ ಶತ್ರುವಾದುದು. ಮಹಾ ರೋಗವಾದುದು ಭಯವೆಂಬುದೇ ಎಂಬ ವಿಷಯವನ್ನು ಭಗ ವದ್ಗೀತೆಯು ಮಹೋನ್ನತವಾದ ಎಚ್ಚರಿಕೆಯೊಂದಿಗೆ ತಿಳಿ ಸುತ್ತದೆ. ಆದರೊಂದಿಗೆ ಕರ್ತವ್ಯ ಬೋಧನೆಯನ್ನು ಸಹಾ ಮಾಡುತ್ತದೆ.

"ಓ ಪಾರ್ಥಾ॥ ಈ ಪತನಕ್ಕೆ ಕಾರಣವಾದ ಈ ನಪುಂ ಸಕತ್ವವನ್ನು ಪಾಲಿಸದಿರು. ಅದು ನಿನಗೆ ತರವಲ್ಲ. ಓ ಪರಂ ತವನೇ,ಇಂತಹ ಹೃದಯ ದೌರ್ಬಲ್ಯವನ್ನು ಬಿಟ್ಟು ಹೊರಡು" (ಭಗವದ್ಗೀತೆ 2.3)

ಪ್ರತಿಯೊಬ್ಬ ಮನುಷ್ಯನಲ್ಲೂ ಶಕ್ತಿ ಅಡಗಿ ಕುಳಿ ತಿರುತ್ತದೆ. ಆದರೆ ಭಯದ ಕಾರಣದಿಂದ ಶಕ್ತಿ ಕ್ಷೀಣಿಸುತ್ತಾ ಹೋಗುತ್ತದೆ. ಅಲ್ಲದೇ, ಕಾರ್ಯಕ್ಷೇತ್ರದಲ್ಲಿ ಧುಮುಕುವುದರ ಮೂಲಕ, ಉತ್ಸಾಹದಿಂದ ಕಾರ್ಯವೆಸಗುವ ಮೂಲಕ, ಗುರಿಯನ್ನು ಪದೇ ಪದೇ ನೆನೆಸಿಕೊಂಡು ಮುನ್ನಡೆಯು



ವುದರ ಮೂಲಕ ಶಕ್ತಿ ವೃದ್ಧಿಸುತ್ತದೆ. ಅರ್ಜುನನು ಶತ್ರುವೀರ ರನ್ನು ನೋಡುತ್ತಲೇ ಅವರೆಲ್ಲಾ ತನ್ನ ಬಂಧುಗಳೇ ಆಗಿರುವು ದರಿಂದ ಅವರೊಂದಿಗೆ ಹೇಗೆ ಯುದ್ಧ ಮಾಡುವುದೆಂದು ಭಯ ಪಟ್ಟಿದ್ದಾನೆ. ಅವರೆಲ್ಲರನ್ನು ಕೊಂದು ಹಾಕಬೇಕಾಗುವುದೆಂಬ ಭಯ ಆತನನ್ನು ಆವರಿಸಿದೆ. ಅದೇ ಕಾರಣದಿಂದ ಆತನು ಶಕ್ತಿ ಹೀನನಾಗಿದ್ದಾನೆ.ಮಾನಸಿಕ ದೌರ್ಬಲ್ಯವೇ ಆ ಶಕ್ತಿ ಹೀನತೆಗೆ ಕಾರಣ. ಅಂತದ್ದೊಂದು ಹೃದಯ ನ್ಯೂನತೆಯನ್ನು ಬಿಟ್ಟು ಏಳು-ಅದು ಅತ್ಯಂತ ಹೀನಾಯವಾದುದೆಂದು ಭಗವದ್ಗೀತೆ ಎಚ್ಚರಿಸುತ್ತದೆ. ವಿದ್ಯಾರ್ಥಿಗಳು ಕೂಡ ಇದೇ ರೀತಿ ಯಲ್ಲಿ ಅದೆಷ್ಟೋ ಸಂದರ್ಭಗಳಲ್ಲಿ ಹೃದಯ ದೌರ್ಬಲ್ಯಕ್ಕೆ ಬಲಿ ಯಾಗಿರುತ್ತಾರೆ. ಅದೂ ಪ್ರಮುಖವಾಗಿ ಪರೀಕ್ಷಾ ಸಮಯದಲ್ಲಿ ಇಂಟರ್‌ವ್ಯೂ ವೇಳೆಯಲ್ಲಿ,ಯಾವುದಾದರೂ ಎಂಟ್ರನ್ಸ್ ಪರೀಕ್ಷೆಗಳನ್ನು ಬರೆಯುವಾಗ ಉಂಟಾಗುತ್ತಿರುತ್ತದೆ. ಈ ಹೃದಯ ದೌರ್ಬಲ್ಯ ಅತಿ ಹೀನಾಯ ಮಾನವಾದುದೆಂದು ಭಗವದ್ಗೀತೆ ಹೇಳುತ್ತದೆ.ಅದರೊಂದಿಗೆ ಭಗವದ್ಗೀತೆ ಕರ್ತ ವ್ಯೋಪದೇಶವನ್ನು ಸಹಾ ಮಾಡುತ್ತಾ ಹೃದಯ ದೌರ್ಬಲ್ಯ ವನ್ನು ತೊಡೆದುಹಾಕು - ತೊರೆದು ಎದ್ದು ನಿಂತು ಮಾಡಬೇಕಾ ಗಿರುವ ಕಾರ್ಯವನ್ನು ಮಾಡು ಎಂದು ಹುರಿದುಂಬಿಸುತ್ತದೆ. ಎದೆಯಲ್ಲಿ ಧೈರ್ಯ ಹೊಂದಿರುವವನು ಎಂತಹ ಹೇಮಾ ಹೇಮಿಗಳು ಎದುರುನಿಂತರೂ ಹೆದರುವುದಿಲ್ಲ; ಹಿಂತೆಗೆಯುವು ದಿಲ್ಲ-ಧೈರ್ಯವಾಗಿ ಮುಂದೆ ಮುಂದೆ ಸಾಗಿ ಹೋಗುತ್ತಾನೆ.

ಶ್ರೀರಾಮನು ಸಾಕ್ಷಾತ್ ಭಗವಂತನೇ ಆತನಿಗೆ ಸಹಾಯ ಮಾಡಲು ಮಹಾಬಲ ಸಂಪನ್ನರಾದ ವಾನರ ವೀರರಿದ್ದರು. ವಾನರಸೇನೆಯ ಎಲ್ಲರೂ ಲಂಕೆಗೆ ಹೋಗಲು ವಾರಿಧಿಗೆ ಸೇತುವೆ ಕಟ್ಟುವ ಯತ್ನದಲ್ಲಿದ್ದರು. ದೊಡ್ಡ ದೊಡ್ಡ ಕಲ್ಲುಗಳನ್ನು, ಬಂಡೆಗಳನ್ನು, ಗಿಡಗಳನ್ನು ಉರುಳಿಸಿ ಸಮುದ್ರಕ್ಕೆ ಹಾಕಿ ಮಾರ್ಗವನ್ನು ತಯಾರಿಸಲು ಅವರು ಮುಂದಾಗಿದ್ದಾರೆ. ಅವರ ಕಾರ್ಯಗಳನ್ನು, ರಾಮನ ಕಾರ್ಯೋತ್ಸಾಹವನ್ನು ನೋಡಿ ಒಂದು ಸಣ್ಣ ಅಳಿಲು ತಾನು ಸಹಾ ರಾಮ ಕಾರ್ಯ ದಲ್ಲಿ ಪಾಲ್ಗೊಳ್ಳಬೇಕೆಂದು ಅಂದು ಕೊಂಡಿದೆ. ಅದರ ಕುಬ್ಜತ್ವ ಅದಕ್ಕೆ ಯಾವ ರೀತಿಯ ಸಂಕೋಚವನ್ನು ಉಂಟು ಮಾಡ

ಲಲ್ಲಿ. ಅದಕ್ಕೆ ಬೆಟ್ಟದಷ್ಟು ಧೈರ್ಯವಿತ್ತು. ವಾನರವೀರರ ಬಲ ಪರಾಕ್ರಮಗಳನ್ನು ಕಂಡು ಅದು ಹೆದರಲಿಲ್ಲ. ತನ್ನನ್ನು ತಾನೇ ಕೀಳಾಗಿ ಕಂಡುಕೊಳ್ಳಲಿಲ್ಲ. ಅದಕ್ಕೆ ಹೃದಯ ದೌರ್ಬಲ್ಯ ವಂತೂ ಉಂಟಾಗಲೇ ಇಲ್ಲ. ಅದು ನೇರವಾಗಿ ಹೋಗಿ ಮರಳಿ ನಲ್ಲಿನ ಚಿಕ್ಕ ಚಿಕ್ಕ ಕಲ್ಲುಗಳನ್ನು ತಂದು ಸಮುದ್ರಕ್ಕೆ ಅಡ್ಡಹಾಕ ಲಾರಂಭಿಸಿದೆ. ಅಳಿಲು ಮಾಡುತ್ತಿದ್ದ ಕಾರ್ಯವನ್ನು ಕಂಡು ವಾನರವೀರರಿಗೆ ನಗೆ ತಂದಿದೆ. ಹಲವು ವೀರರಂತೂ ಅದರ ಕೆಲಸ ಕಂಡು ಬಿದ್ದು ಬಿದ್ದು ನಕ್ಕಿದ್ದಾರೆ. ಆದರೂ ಅದು ಅದರ ಕೆಲಸವನ್ನು ಬಿಡಲಿಲ್ಲ. ತನ್ನ ಕಾರ್ಯವು ಚಿಕ್ಕದೆಂದೂ ಅದು ಭಾವಿಸಲಿಲ್ಲ. ಇದರಲ್ಲೇ ಶ್ರೀ ರಾಮಚಂದ್ರನಿಗೆ ಆ ಅಳಿಲಿನ ಭಕ್ತಿ ತಿಳಿದು ಬಂದಿದೆ. ಕೂಡಲೇ ಆ ದೇವೇಶನು ಅದರ ಬಳಿ ಬಂದು ಅಳಿಲನ್ನು ತನ್ನ ಅಂಗೈಯಲ್ಲಿ ಹಿಡಿದುಕೊಂಡು ಮತ್ತೊಂದು ಕೈಯಿಂದ ಅದನ್ನು ಪ್ರೇಮದಿಂದ ನೇವರಿ ಸಿದ್ದಾನೆ. ಶ್ರೀರಾಮ ತೋರಿದ ಆ ಅನುರಾಗವೇ ಅಳಿಲಿನ ಬೆನ್ನ ಮೇಲೆ ಗೆರೆಗಳಾಗಿ ಇಂದಿಗೂ ಕಂಡು ಬರುತ್ತದೆ. ಈ ಗೆರೆಗಳೇ ನಮಗೆ ಸ್ಫೂರ್ತಿಯಾಗಬೇಕು. ಕೃಷಿ ಮಾಡು ವವರಿಗೆ ಜಯವು ತಪ್ಪದೇ ದೊರೆಯುತ್ತದೆ. ತನ್ನನ್ನು ತಾನು ಕೀಳಾಗಿ ಕಾಣದೇ, ಎದೆಗುಂದದೇ, ಧೈರ್ಯವನ್ನು ಕಳೆದು ಕೊಳ್ಳದೇ ಯಾರು ಸಾಧನೆಯಲ್ಲಿ ತೊಡಗುತ್ತಾರೋ ಅವರಿಗೆ ಹಿರಿಯರ ಆಶೀರ್ವಾದವೂ ಸಹ ತಪ್ಪದೇ ಲಭಿಸುತ್ತದೆ.

ಗುರಿಸಾಧಕರಲ್ಲಿ ಮೂರು ವಿಶೇಷವಾದ ಗುಣಗಳಿರು ತ್ತವೆ. ಅವರಿಗೆ ತೀವ್ರವಾದ ಬಯಕೆಯಿರುತ್ತದೆ. ಅವರ ಗುರಿ ಅಚಲವಾದುದು. ಅದನ್ನು ಮುಟ್ಟುವ ಸಂಕಲ್ಪವೂ ಇರುತ್ತದೆ. ಈ ಮೂರರಿಂದ ಅವರು ಖಚಿತವಾಗಿ ಕಾರ್ಯ ದಕ್ಷತೆಯನ್ನು ಪಡೆದುಕೊಳ್ಳುತ್ತಾರೆ. ರಾಮದೂತನಾದ ಹನುಮಂತನಿಗೆ ಅಪಾರವಾದ ಶಕ್ತಿಯಿತ್ತು. ಅದೆಲ್ಲಿಂದ ಬಂತು? ರಾಮಕಾರ್ಯ ಮಾಡಬೇಕೆಂಬ ತೀವ್ರವಾದ ಇಚ್ಛೆಯಿಂದ ಬಂದುದು. ಲಂಕೆಗೆ ತೆರಳಿ ಸೀತೆಯ ಜಾಡನ್ನು ಹಿಡಿಯುವುದೇ ಹನುಮಂತನ ಲಕ್ಷ್ಯ. ಇನ್ನು ಹನುಮಂತನು ಮಾಡಿದ ಸಂಕಲ್ಪವು ವಜ್ರ ಕ್ಕಿಂತಲೂ ದೃಢವಾದುದು. ಆದ್ದರಿಂದಲೇ ಆತನು ನೂರು ಯೋಜನೆಗಳ ಸಮುದ್ರವನ್ನು ದಾಟಿ, ಸೀತೆಯನ್ನು ಕಂಡು, ರಾವಣನ ಗರ್ವಭಂಗ ಮಾಡಿ ತಿರುಗಿ ಬಂದಿದ್ದಾನೆ. ಆದ್ದ ರಿಂದಲೇ ಯುವ ಜನರು ತೀವ್ರವಾದ ಬಯಕೆಯಿಂದ, ಸ್ಥಿರ ವಾದ ಗುರಿಯಿಂದ, ಗುರಿ ಮುಟ್ಟಬೇಕೆಂಬ ಸಂಕಲ್ಪದಿಂದ ಮುಂದೆ ಸಾಗಿ ಸಮಸ್ತ ವಿಜಯಗಳನ್ನು ಸಾಧಿಸಬೇಕು.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಾಪನೆ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮ ಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸ ದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸ ಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದ ಲಾವಣೆ ಇದ್ದಲ್ಲಿ 0877 - 2264543 ದೂರ ವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆ ಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆ ಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk @tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸ ಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು



# ಆರೋಗ್ಯದ ಮಹಾಪುರ ನೇರಳೆ

- ತೆಲುಗು ಮೂಲ.ಡಾ॥ ಸಿ. ಮಧುಸೂದನ ಶರ್ಮ
- ಅನುವಾದ ಶ್ರೀಮತಿ

ನೇರಳೆ ಹಣ್ಣು ಆಹಾರವಾಗಿ ಉಪಯೋಗವಾಗುತ್ತವೆಂಬುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯವಾದರೂ ಈ ಹಣ್ಣು ಮತ್ತು ಆ ವೃಕ್ಷದ ಪ್ರತಿಯೊಂದು ಭಾಗದಲ್ಲೂ ಮಹತ್ತರವಾದ ಔಷಧೀಯ ಗುಣಗಳನ್ನು ನಿಕ್ಷೇಪಿಸಿ ಭಗವಂತನು ನಮಗೆ ಪ್ರಸಾದಿಸಿದ್ದಾನೆ.

ಮೇಘದೇವನು ನೇರಳೆ ಹಣ್ಣಾಗಿ ಮೈತಳೆದಿದ್ದಾನೆಂಬುದು ಪ್ರತೀತಿ. ನೇರಳೆ ಹಣ್ಣು ಶ್ರೀ ಕೃಷ್ಣನ ಬಣ್ಣವನ್ನು ಹೊಂದಿರುವುದರಿಂದ ಆತನಿಗೆ ಅದು ಪ್ರೀತಿಪಾತ್ರವಾದುದೆಂದು ಅರಿತು ಅದನ್ನು ಪೂಜಿಸುತ್ತಾರೆ.

ಸಂಸ್ಕೃತದಲ್ಲಿ ಜಂಬೂ ಫಲವೆಂದು ವ್ಯವಹರಿಸಲ್ಪಡುವ ಈ ನೇರಳೆ ಹಣ್ಣು ಹಣ್ಣುಗಳಲ್ಲೇ ಶ್ರೇಷ್ಠವಾದುದು. ಆದ್ದರಿಂದಲೇ ಫಲೇಂದ್ರ ಎಂದೂ ನೀಲಿ ಬಣ್ಣವಿರುವುದರಿಂದ ನೀಲದ ಹಣ್ಣೆಂದೂ,ಸುವಾಸನಾಯುಕ್ತ ಎಲೆಗಳನ್ನು ಹೊಂದಿರುವುದರಿಂದ ಸುರಭಿಪತ್ರವೆಂದೂ,ಕೋಗಿಲೆಗೆ ಇಷ್ಟವಾಗಿರುವುದರಿಂದ ಕೋಕಿಲೇಷ್ಟ, ಪಿಕಭಕ್ಷನೆಂಬ ಹೆಸರುಗಳೂ ಸಹಾ ಇವೆ. ಆಂಗ್ಲದಲ್ಲಿ ಬ್ಲ್ಯಾಕ್ ಬೆರ್ರಿಯೆಂದು ಕರೆಯಲ್ಪಡುವ ಈ ನೇರಳೆ ಮಿರ್ಟೇಸಿ ಎಂಬ ವೃಕ್ಷ ಕುಟುಂಬಕ್ಕೆ ಸೇರಿದೆ. ಇದರ ಶಾಸ್ತ್ರೀಯ ನಾಮಧೇಯ 'ಸೈಜಿಜಿಯಂ ಕ್ಯುಮಿನಿ'.

### ಗುದಛಿದ್ರಗಳಿಗೆ

ನೇರಳೆ ಹಣ್ಣು ಲಭಿಸುವ ದಿನಗಳಲ್ಲಿ ಬರೀಹೊಟ್ಟೆಯಲ್ಲಿ ಒಂದು ಲೋಟದಲ್ಲಿ 5-7 ನೇರಳೆ ಹಣ್ಣುಗಳನ್ನು ಹಾಕಿಕೊಂಡು ಅದರಲ್ಲಿ 3-4 ಚಿಟಿಕೆ ಉಪ್ಪು ಹಾಕಿ ಆ ಹಣ್ಣುಗಳನ್ನು ತಿನ್ನುತ್ತಿರಬೇಕು. ಈ ವಿಧವಾಗಿ 2,3 ವರ್ಷಗಳು ಪ್ರತಿ ಸೀಜನ್‌ನಲ್ಲಿ ಸಿಗುವಷ್ಟು ದಿನ ಈ ಹಣ್ಣುಗಳನ್ನು ತಿನ್ನುತ್ತಿದ್ದಲ್ಲಿ ಉತ್ತಮ ಪರಿಹಾರ ದೊರಕುತ್ತದೆ. ನೇರಳೆ ಹಣ್ಣುಗಳು ಮೇನಿಂದ ಜುಲೈವರೆಗೆ ದೊರಕುತ್ತವೆ.

### ಅತಿಮೂತ್ರಕ್ಕೆ

ದಿನಕ್ಕೆರಡು ಬಾರಿ ಬಾರಿಯೊಂದಕ್ಕೆ 1-3 ಗ್ರಾಂ ನೇರಳೆ ಬೀಜದ ಪುಡಿಯನ್ನು 100 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿರಬೇಕು. ಈ ರೀತಿ ಮಾಡುವುದರಿಂದ ನಿದ್ರೆಯಲ್ಲಿ ಮೂತ್ರ ವಿಸರ್ಜನೆಯು ಕಡಿಮೆಯಾಗುತ್ತದೆ.

### ದಂತವ್ಯಾಧಿಗಳು

ದಿನವೂ ಒಂದೆರಡು ಸಾರಿ ನೇರಳೆ ಬೀಜದ ಪುಡಿಯಿಂದ ದಂತ ಧಾವನವನ್ನು ಮಾಡುತ್ತಿದ್ದಲ್ಲಿ ದಂತ,ವಸುಡು ವ್ಯಾಧಿಗಳು ಕಡಿಮೆಯಾಗಿ ವಸಡುಗಳು ದೃಢವಾಗುತ್ತವೆ.

### ಮೊಡವೆಗಳಿಗೆ

ದಿನವೂ ಒಂದು ಬಾರಿ ನೇರಳೆ ಬೀಜದ ಪುಡಿಯನ್ನು ತಕ್ಕಷ್ಟು ಆಕಲು ಹಾಲಲ್ಲಿ ಕಲಿಸಿ ಮುಖದ ಮೇಲೆ ಲೇಪಿಸಿ ಒಂದು ತಾಸು ಬಿಟ್ಟು ಉಗುರು ಬೆಚ್ಚಗಿನ ನೀರಿನಲ್ಲಿ ಮುಖವನ್ನು ತೊಳೆಯುತ್ತಿದ್ದಲ್ಲಿ ಮೊಡವೆಗಳ ಸಮಸ್ಯೆ ಕಳೆದು ಮುಖವು ಸುಂದರವಾಗುತ್ತದೆ.

### ಮಧುಮೇಹ ಕಡಿಮೆ ಮಾಡಲು

ನೇರಳೆ ಬೀಜದ ಪುಡಿ, ಮುತ್ತುಗದ ಪುಡಿ, ನೆಲ್ಲಿಕಾಯಿ ಪುಡಿ, ಅರಶಿನ ಪುಡಿ ಒಂದೊಂದು 100 ಗ್ರಾಂನಂತೆ ಕಲಿಸಿಟ್ಟುಕೊಂಡು ದಿನವೂ ಮೂರು ಹೊತ್ತು ಆಹಾರಕ್ಕೆ 15 ನಿಮಿಷ ಮುಂಚೆ ಅರ್ಧ ಟೀ ಸ್ಪೂನ್ ಪುಡಿಯನ್ನು 50 ಮಿ.ಲೀ.

ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಷಗರ್ ಲೆವೆಲ್ ನಿಯಂತ್ರಣಕ್ಕೆ ಬರುವುದೊಂದೇ ಅಲ್ಲದೇ ಮುಂಬರುವ ದಿನಗಳಲ್ಲಿ ಷುಗರ್ ವ್ಯಾಧಿಯಿಂದುಂಟಾಗುವ ಉಪದ್ರವಗಳನ್ನು ತಡೆಗಟ್ಟಬಹುದು.

**ವಿವಿಧ ದೋಷ ನಿವಾರಣೆಗೆ**

ನೇರಳೆ ಬೀಜದ ಪುಡಿ, ಮಾವಿನ ಚಿಗುರಿನ ಪುಡಿ, ಕಾರ್ಚಿಕಾಯಿ ಸಿಪ್ಪೆಯ ಪುಡಿ ಒಂದೊಂದು 50 ಗ್ರಾಂನಂತೆ ತೆಗೆದುಕೊಂಡು ದಿನವೂ 3 ಬಾರಿ, ಬಾರಿಯೊಂದಕ್ಕೆ 1-2 ಗ್ರಾಂ ಪುಡಿಯನ್ನು 100.ಮಿ.ಲಿ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ, ಉರಿ, ಶೀತ, ರಕ್ತ ದೋಷಗಳು ತಗ್ಗುತ್ತವೆ.

**ಮುಖದ ಮೇಲೆ ಬರುವ ಕರಿಮಚ್ಚೆಗಳಿಗೆ**

ನೇರಳೆ ಸಿಪ್ಪೆಯ ಪುಡಿ, ಒಣಗಿದ ನಿಂಬೆ ಚಿಗುರಿನ ಪುಡಿ,ಕಡ್ಲೆಹಿಟ್ಟನ್ನು ಸಮಾನವಾಗಿ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ಬೇಕಾದಷ್ಟು ಪುಡಿಗೆ ತಕ್ಕಷ್ಟು ನೀರು ಹಾಕಿ 7-8 ಹನಿ ಬಾದಾಮಿ ಎಣ್ಣೆಯನ್ನು ಮುಖಕ್ಕೆ ಹಚ್ಚಿ,ಚೆನ್ನಾಗಿ ಒಣಗಿದ ಮೇಲೆ ಮುಖ ತೊಳೆಯಬೇಕು.

**ಸುಟ್ಟಗಾಯಕ್ಕೆ - ಬೊಬ್ಬೆಗಳಿಗೆ**

ಬೇಕಾಗುವಷ್ಟು ನೇರಳೆ ಎಲೆಗಳನ್ನು ತೆಗೆದುಕೊಂಡು ಮರುಳುತ್ತಿರುವ ನೀರಿನಲ್ಲಿ ಸ್ವಲ್ಪ ಹೊತ್ತು ಹಾಕಿ ನಂತರ ಶುಭ್ರವಾದ ಬಟ್ಟೆಯಿಂದ ಎಲೆಗಳನ್ನು ಒರೆಸಿ ಅವನ್ನು ಸುಟ್ಟಗಾಯದ ಮೇಲೆ ಹೊದಿಸಿ ಶುಭ್ರವಾದ ಬಟ್ಟೆಯಿಂದ ಕಟ್ಟಬೇಕು. ಆ ಎಲೆಗಳನ್ನು 12 ಗಂಟೆಗೊಂದು ಬಾರಿ ಬದಲಾಯಿಸುತ್ತಿರಬೇಕು. ಬೊಬ್ಬೆಗಳನ್ನು ಎಲೆಗಳು ಅಂಟದಿರುವ ಕಾರಣ ಸುಲಭವಾಗಿ ಎಲೆಗಳನ್ನು ತೆಗೆಯಬಹುದು.ಗ್ರಾಮೀಣ ಪ್ರಾಂತ್ಯಗಳಲ್ಲಿ ಇದನ್ನು ಅನುಭವೀಯ ಶುಶ್ರೂಷೆಯಾಗಿ ಬಳಸುತ್ತಾರೆ.

**ಶರೀರದ ದುರ್ಗಂಧಕ್ಕೆ**

400 ಮಿ.ಲೀ ನೀರಿನಲ್ಲಿ 50 ಗ್ರಾಂ ನಂತೆ ನೇರಳೆ ಗಿಡದ ತೊಗಟೆ, ಎಲೆಗಳನ್ನು ನೀರಿನಲ್ಲಿ ಹಾಕಿ 100 ಮಿ.ಲೀ. ನೀರು ಮಿಗಿಲುವಂತೆ ಕುದಿಸಿ, ಕೆಳಗಿಳಿಸಿ ಉಗುರು ಬೆಚ್ಚಗಿರುವಾಗಲೇ ಶೋಧಿಸಿ ಮೈಯಲ್ಲಾ ಸವರಿಕೊಂಡು ತಾಸು ಬಿಟ್ಟು ಸ್ನಾನ ಮಾಡುತ್ತಿರಬೇಕು.

**ರಕ್ತಶುದ್ಧಿಗೆ**

ಎಳೆ ನೇರಳೆ ಎಲೆಗಳನ್ನು ಒಣಗಿಸಿ, ಚೂರ್ಣವನ್ನಾಗಿ ಮಾಡಿ,ದಿನವೂ ಎರಡು ಬಾರಿ ಬಾರಿಯೊಂದಕ್ಕೆ 1-2 ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ರಕ್ತ ಶುದ್ಧಿಯಾಗಿ ಮೈತುರಿಕೆ, ಮಚ್ಚೆಗಳು, ಕಜ್ಜಿಯಂತಹ ವ್ಯಾಧಿಗಳು ತಗ್ಗುತ್ತವೆ.

**ಸ್ತ್ರೀಯರಲ್ಲಿ ಅಧಿಕ ರಕ್ತಸ್ರಾವಕ್ಕೆ**

ನೇರಳೆ ಬೇರಿನ ಚೂರ್ಣ, ಶ್ರೀಗಂಧದ ಪುಡಿ, ಒಂದೊಂದು 25 ಗ್ರಾಂನಂತೆ ಕಲಿಸಿಟ್ಟುಕೊಂಡು ದಿನವೂ 3-4 ಬಾರಿ ಬಾರಿಯೊಂದಕ್ಕೆ 1-2 ಗ್ರಾಂಪುಡಿಯನ್ನು 50 ಮಿ.ಲೀ.ನೀರಿನಲ್ಲಿ ಕಲಿಸಿ ತಕ್ಕಷ್ಟು ಕಲ್ಲುಸಕ್ಕರೆ ಹಾಕಿ ಸೇವಿಸುತ್ತಿದ್ದರೆ ಶೀಘ್ರವಾಗಿ ಸಮಸ್ಯೆ ಬಗೆ ಹರಿಯುತ್ತದೆ.

ನೇರಳೆ ಹಣ್ಣನ್ನು ಅತಿಯಾಗಿ ತಿಂದರೆ, ಗಂಟಲ ಸಮಸ್ಯೆಗಳು ಉದ್ಭವಿಸಬಹುದು. ಕೆಮ್ಮು ಕೂಡ ಬರಬಹುದು. ಅಂತಹ ಸಂದರ್ಭಗಳಲ್ಲಿ ಉಪ್ಪು, ಕಾಳುಮೆಣಸುಗಳನ್ನು ಬಳಸಿದರೆ ಈ ಸಮಸ್ಯೆ ಶಮನಗೊಳ್ಳುತ್ತದೆ.



**ಮಾತೃಶ್ರೀ ತರಿಗೊಂಡ ವೆಂಗಮಾಂಬ ನಿತ್ಯಾನ್ನ ಪ್ರಸಾದ ಭವನ**

ಸ್ವಾಮಿಯ ಆಲಯದ ಈಶಾನ್ಯಕ್ಕೆ ಮೂಲೆಯ ಸರಿಯಾಗಿ ಮೂರಂತಸ್ತಿನ ವಿಶಾಲವಾದ ಎತ್ತರವಾದ ಪ್ರಸಾದ ವಿತರಣ ಭವನ ಭಕ್ತರಿಗೆ ಕಂಡು ಬರುತ್ತದೆ. ಇದೇ "ಮಾತೃಶ್ರೀ ತರಿಗೊಂಡ ವೆಂಗಮಾಂಬ ನಿತ್ಯಾನ್ನ ಪ್ರಸಾದ ಭವನ" ಈ ಭವನದಲ್ಲಿ ಭಕ್ತರಿಗೆ ಬೆಳಗ್ಗೆ 7 ಗಂಟೆಯಿಂದ 11 ರ ವರೆಗೆ ಅನ್ನಪ್ರಸಾದ ವಿತರಣೆ ನಡೆಯುತ್ತದೆ. ಭಕ್ತಾದಿಗಳು ಈ ಭವನಕ್ಕೆ ಭೇಟಿ ನೀಡಿ ಅಲ್ಲಿ ಸಾವಿರಾರು ಮಂದಿ ಭಕ್ತರಿಗೆ ವಿತರಣೆಯಾಗುವ ಪ್ರಸಾದ ವಿತಾರಣಾ ಮಹಾಯಜ್ಞವನ್ನು ಕಾಣಬಹುದು. ತಾವೂ ಪ್ರಸಾದವನ್ನು ಸ್ವೀಕರಿಸಬಹುದು.

ಹಿಂದೆ ಇದೇ ಸ್ಥಳದಲ್ಲಿ ಮಾತೃಶ್ರೀ ತರಿಗೊಂಡ ವೆಂಗಮಾಂಬಯವರು ತಿರುಮಲೆಯ ಭಕ್ತರಿಗೆ ನಿತ್ಯ ಅನ್ನದಾನವನ್ನು ಮಾಡುವವರೆಂದೂ, ಆದ್ದರಿಂದಲೇ ಅದೇ ಜಾಗದಲ್ಲಿ ಆಕೆಯ ಹೆಸರಿನಲ್ಲಿ ಈ ಅನ್ನಪ್ರಸಾದ ಭವನವು ನೆಲೆಗೊಂಡಿದೆ. ಈ ಭವನದಲ್ಲಿ ನಿತ್ಯವೂ ನಡೆಯುವ ಅನ್ನಪ್ರಸಾದ ವಿತರಣೆಗೆ ಸಂಬಂಧಿಸಿದ ಆ ಅನ್ನದಾತರೆಲ್ಲರೂ ಆನಂದನಿಲಯನನ್ನು ದರ್ಶಿಸಿ ಆನಂದದಿಂದ ಇರಬೇಕೆಂದು ಹಾರೈಸೋಣ.









ಧಾರಾವಾಹಿಕ

# ದಿವ್ಯಕ್ಷೇತ್ರ ತಿರುಮಲೆ

ತೆಲುಗು ಮೂಲ: ಜೂಲಗಂಟಿ ಬಾಲಸುಬ್ರಹ್ಮಣ್ಯಂ
ಅನುವಾದ : ಶ್ರೀಮತಿ ಬಿ. ಪದ್ಮಜ

## ಅನೇಕಾನೇಕ ಹೆಸರುಗಳು

ಈ ತಿರುಮಲೇಶನಿಗೆ ಅನೇಕಾನೇಕ ಹೆಸರುಗಳಿವೆ. ಅವೆಲ್ಲವೂ ವಿಚಿತ್ರವಾದ ಹೆಸರುಗಳೆ! ಅವೆಲ್ಲವೂ ಆ ಸ್ವಾಮಿಯ ನಿಜವಾದ ಸ್ವಂತ ಹೆಸರುಗಳೇ ಎಂದರೆ ಅದೂ ಹೇಳಲಾಗುವುದಿಲ್ಲ. ಆದರೆ ಒಂದು ಮಾತ್ರಾ ನಿಜ, ಭಕ್ತರುಗಳು ಪ್ರೀತಿಯಿಂದ ಕೂಗುವ ಹೆಸರುಗಳೇ! ಮನಸ್ಸಿಗೆ ಹತ್ತಿರವಾದವರನ್ನು ಹೇಗೆ ಕರೆಯುತ್ತೇವೋ ಹಾಗೆಯೇ ಕರೆಯುವ ಹೆಸರುಗಳು.

ಅವುಗಳಲ್ಲಿ ಪ್ರಸಿದ್ಧಿಯಾಗಿರುವುದು "ಏಡುಕೊಂಡಲವಾಡಾ!"ಎಂದು ಶೇಷಾದ್ರಿ, ವೇಂಕಟಾದ್ರಿ, ನಾರಾಯಣಾದ್ರಿ, ಗರುಡಾದ್ರಿ, ವೃಷಾದ್ರಿ, ವೃಷಭಾದ್ರಿ, ಅಂಜನಾದ್ರಿ, ಎಂಬ ಏಳು ಬೆಟ್ಟಗಳಲ್ಲಿ ಇರುವ ಸ್ವಾಮಿಯಾದ್ದರಿಂದ ಏಡುಕೊಂಡಲವಾಡನಾದ. ಹಾಗೆಯೇ ವೇಂ=ಪಾಪಗಳನ್ನು,ಕಟಃ = ಕಳೆಯುತ್ತಾನೆ,ಆದ್ದರಿಂದ "ವೇಂಕಟಪತಿ"ಎಂದೂ, ತಿರುಮಲೇಶನೆಂದೂ, ಸ್ಥಳವನ್ನು ಆಧರಿಸಿ,ಮಾಡುವ ಕೆಲಸದ ಪ್ರಕಾರವಾಗಿ ಕರೆಯಲ್ಪಡುತ್ತಿರುವ ಸ್ವಾಮಿ ಈ ಶ್ರೀನಿವಾಸ.

ಆದರೆ ಎಲ್ಲಾ ಹೆಸರುಗಳಿಗಿಂತಲೂ ಮತ್ತೊಂದು ವಿಚಿತ್ರವಾದ ಹೆಸರು ಇದೇ. ಅದೇನೆಂದರೆ ಹೆಂಡತಿಯ ಹೆಸರಿನಿಂದ ಕರೆಯಲ್ಪಡುವುದು. ಅದೇ "ಶ್ರೀ" ನಿವಾಸ. ಆತನ ವಕ್ಷಃಸ್ಥಳದಲ್ಲಿರುವ "ವ್ಯೂಹಾಲಕ್ಷ್ಮಿ"ಭಕ್ತರ ಕೋರಿಕೆಗಳನ್ನು ತೀರಿಸುವುದರಲ್ಲಿ, ಸ್ವಾಮಿಗೆ ಶಿಫಾರಸ್ಸು ಮಾಡುತ್ತಾಳಂತೆ. ಆಕೆ "ವಾತ್ಸಲ್ಯ ಗುಣೋಜ್ಜ್ವಲಾಂ" ಆದ್ದರಿಂದ ಭಕ್ತರ ಮೇಲೆ ಪ್ರೇಮ ಹೆಚ್ಚಾಗಿರುತ್ತದಂತೆ. ಆ ತಾಯಿಯಿಂದಾಗಿಯೇ "ಶ್ರೀ"ನಿವಾಸ ಎಂದು ಕರೆಯಲ್ಪಡುತ್ತಿದ್ದಾನೆ. ನಿನ್ನ ಹೆಸರೇನು ಎಂದು ಕೇಳಿದರೆ ಹೇಳುವುದಿಲ್ಲವಾಗಲೀ "ಅಡುಗಡುಗು ದಂಡಾಲವಾಡಾ! (ಹೆಜ್ಜೆ ಹೆಜ್ಜೆಗೂ ನಮಸ್ಕಾರ ಮಾಡಿದರೆ ಸಂತೋಷಿಸುವವನು)!! ಎಂದರೂ ಉತ್ತರಿಸುತ್ತಾನೆ. "ಆಪದ್ಬಾಂಧವಾ!"ಎಂದರೂ ಉತ್ತರಿಸುತ್ತಾನೆ. ಈ ರೀತಿ ಯಾವ ಹೆಸರಿನಿಂದ ಕರೆದರೂ ನಮ್ಮ ಇಚ್ಛೆಗಳನ್ನು ತೀರಿಸುತ್ತಲೇ ಇರುವ ಅನೇಕಾನೇಕ ಹೆಸರುಗಳಿಂದ ಕರೆಯಲ್ಪಡುತ್ತಿರುವ ದೇವ ದೇವ ಈ ವೇಂಕಟೇಶ್ವರ.

## ಸಂಭ್ರಮಗೊಳಿಸುವ ಆಭರಣಗಳು

ಘನವೇಂಕಟೇಶನಿಗೆ ಪಾದಗಳಿಂದ ಶಿರಸ್ಸಿನವರೆಗೂ ಎಷ್ಟೋ ದಿವ್ಯಾಭರಣಗಳು, ಮಣಿಹಾರಗಳಿಂದ ಅಲಂಕರಿಸಲ್ಪಟ್ಟು ಭಕ್ತರಿಗೆ ಆಶ್ಚರ್ಯದೊಂದಿಗೆ ಆನಂದವನ್ನೂ ಉಂಟು ಮಾಡುತ್ತವೆ. ಆ ರೀತಿ ಹೊಳೆಯುವ ಅಲಂಕಾರಗಳು ಅದೆಷ್ಟೋ!

ಬಂಗಾರದ ಪದ್ಮಪೀಠ. ಬಂಗಾರದ ಪಾದ ಕವಚ, ಸ್ವರ್ಣ ಪೀತಾಂಬರ, ಬಂಗಾರದ ನಂದಕ ಖಡ್ಗ, ವಜ್ರಗಳನ್ನು ಹುದುಗಿಸಿರುವ ಸೂರ್ಯಕಠಾರಿ,ವೈಕುಂಠ



ಹಸ್ತ (ವರದ ಹಸ್ತ),ಕಟಿಹಸ್ತ,ಬಂಗಾರದ ಕವಚಗಳು, ಸಾಲಿಗ್ರಾಮ ಹಾರಗಳು,ಶಂಖುಚಕ್ರಗಳ ಬಂಗಾರದ ಕವಚಗಳು, ನವರತ್ನಗಳು ಹುದುಗಿಸಿರುವ ಲಕ್ಷ್ಮೀಹಾರ, ನಾಲ್ಕು ಎಳೆಗಳ ಸಹಸ್ರನಾಮ ಮಾಲೆಗಳು,ವಜ್ರ ಕಿರೀಟಗಳು, ಮಕರತೋರಣ,ಈ ರೀತಿ ಶ್ರೀ ವೇಂಕಟೇಶ್ವರನಿಗೆ ಅಪಾದ ಮಸ್ತಕವಾಗಿ ಎಷ್ಟೋ ಮತ್ತೆಷ್ಟೋ ಆಭರಣಗಳು ಇವೆ.

ಆಯಾ ವಿಶೇಷ ಸಂದರ್ಭಗಳಲ್ಲಿ ಇವನ್ನು ಸ್ವಾಮಿಗೆ ಅಲಂಕರಿಸುತ್ತಾರೆ. ಇವೆಲ್ಲವೂ ಎಲ್ಲಿಯವು? ಯಾರು ನೀಡಿದ್ದಾರೆ? ಅಂದರೇ ಕೋರಿಕೆಗಳನ್ನು ತೀರಿಸಿದ ಭಕ್ತರುಗಳು ನೀಡಿರುತ್ತಾರೆ.ಎಷ್ಟು ಜನರಿಗೆ ಮಾತುಗಳನ್ನು ನೀಡಿದ್ದಾನೋ? ಮಾತುಗಳನ್ನು ನಡೆಸಿಕೊಟ್ಟನೋ? ಎಷ್ಟು ಜನರಿಗೆ ಸಂತಾನ ನೀಡಿದನೋ? ಎಷ್ಟು ಜನರಿಗೆ ಸಹಾಯ ಹಸ್ತ ನೀಡಿದನೋ? ಎಷ್ಟು ಜನರಿಗೆ ಕಣ್ಣುಗಳನ್ನು ನೀಡಿದನೋ? ಯಾರಿಗೆ ಗೊತ್ತು? ಇದೋ! ಆ ರೀತಿ ಬಯಕೆಗಳನ್ನು ಪಡೆದ ಭಕ್ತರುಗಳೇ ಸ್ವಾಮಿಗೆ ಆಭರಣಗಳನ್ನು ನೀಡಿರಬಹುದು. ಆ ಭಕ್ತರುಗಳು ನೀಡಿದ್ದನ್ನೇ ಶ್ರೀನಿವಾಸನು ಸಂತೋಷವಾಗಿ ಅಲಂಕರಿಸಿಕೊಂಡು ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಆದರೇ ಸ್ವಾಮಿಯು ಯಾವ ಭಕ್ತನಿಗೆ ಯಾವ ಕೋರಿಕೆಯನ್ನು ತೀರಿಸಿದನೋ ಆ ಸ್ವಾಮಿಗೇ ತಿಳಿಯಬೇಕು. ಅಷ್ಟೇ! ಅಷ್ಟೇ!

## ಘಮಘಮಿಸುವ ನೈವೇದ್ಯಗಳು

ಆನಂದನಿಲಯನು ಅಲಂಕಾರ ಪ್ರಿಯ! ಅದಕ್ಕಿಂತಲೂ ಹೆಚ್ಚಾಗಿ ಆಹಾರ ಪ್ರಿಯ! ಅದಕ್ಕಿಂತಲೂ ಹೆಚ್ಚಾಗಿ ಭಕ್ತ ಪ್ರಿಯ! ಭಕ್ತರಿಗಾಗಿಯೇ ಘಮಘಮಿಸುವ ಲಾಡು, ವಡೆ, ದೋಸೆ, ಅತಿರಸ, ಕ್ಷೀರಾನ್ನ,ಪಾಯಸ, ಕದಂಬ,ಮುಚ್ಚೋರೆ, ಪೊಂಗಲ್, ಸಿರಾ, ಕೇಸರಿ ಮೊದಲಾದ ಅನ್ನ ಪ್ರಸಾದಗಳನ್ನು ತೃಪ್ತಿಯಿಂದ ಸ್ವೀಕರಿಸುತ್ತಾನೆ.

ಭೋಜನಪ್ರಿಯನಾದ ಶ್ರೀನಿವಾಸ ಪ್ರಭುವು ಪ್ರತಿನಿತ್ಯವೂ "ತೊಳೆಯದ ತಟ್ಟೆ" ಯಲ್ಲಿ ನೈವೇದ್ಯವನ್ನು ಸ್ವೀಕರಿಸುತ್ತಾನೆ. ಒಮ್ಮೆ ನೈವೇದ್ಯ ಮಾಡಿದ ನಂತರ ಆ ತಟ್ಟೆಯನ್ನು ತೊಳೆಯದೇ ಹೊರಹಾಕುತ್ತಾರೆ.ಪುನಃ ನೈವೇದ್ಯಕ್ಕೆ ಮತ್ತೊಂದು ಹೊಸ ತಟ್ಟೆಯನ್ನು ಉಪಯೋಗಿಸುತ್ತಾರೆ.ವಿಚಿತ್ರವಲ್ಲವೇ? ಅದೇನೆಂದರೆ "ಮಣ್ಣಿನಮಡಿಕೆ" ಅದೂ ಅರ್ಧ ಒಡೆದ ಮಣ್ಣಿನ ಮಡಿಕೆ. ಅದನ್ನೇ ''ಓಡು''ಎನ್ನುತ್ತಾರೆ. ಪ್ರತೀದಿನ "ಈ ಓಡಿನಲ್ಲೇ''ಮಾತ್ರ ನೈವೇದ್ಯವನ್ನು ಸ್ವೀಕರಿಸುವ ಆನಂದ ನಿಲಯನ ವೈಭವ ಎಂತದು ಎಂದು ಆಶ್ಚರ್ಯಪಡದೇ ವಿಧಿ ಇಲ್ಲ. ಈ ರೀತಿ ಏನನ್ನೂ ಸ್ವೀಕರಿಸಿದರೂ, ಎಷ್ಟು ತಿಂದರೂ ಆ ಭುಕ್ತ ಶೇಷವನ್ನು ಪುನಃ ಭಕ್ತರಿಗೇ ಪ್ರಸಾದಿಸುತ್ತಾನೆ. ಅವನ್ನು ಸ್ವೀಕರಿಸಿದ ಭಕ್ತರಿಗೆ ತೃಪ್ತಿ, ಪುಷ್ಟಿ, ಸಂತೋಷದೊಂದಿಗೆ ಎಲ್ಲಾ ಕೋರಿಕೆಗಳು ತೀರುತ್ತಿವೆ. ಸಂಪೂರ್ಣವಾದ ಆರೋಗ್ಯವೂ ದೊರೆಯುತ್ತದೆ.

## ಚಿತ್ರವಿಚಿತ್ರವಾದ ಹರಕೆಗಳು

"ತಲೆಗೊಂದು ಬುದ್ಧಿ ನಾಲಿಗೆಗೊಂದು ರುಚಿ" ಎನ್ನುವಂತೆ ಎಷ್ಟೆಷ್ಟು ತಲೆಗಳಿವೆಯೋ, ಅವುಗಳ ಯೋಚನೆಗಳೂ ಬೇಕಾದಷ್ಟು ಇವೆ.ಆ ಯೋಚನೆಗಳಿಗೆ ಸರಿಯಾದ ಅಭಿರುಚಿಗಳಿದ್ದರೂ, ಆ ಯೋಚನೆಗಳಿಗೆ, ಅಭಿರುಚಿಗಳಿಗೆ ಸರಿಯಾದ ದೇವರು ಈ ತಿರುಮಲೇಶ.

ಭಕ್ತರ ಆಚಾರ ವ್ಯವಹಾರಗಳು ಬೇರೆ ಬೇರೆಯಾದರೂ, ಭಾಷೆಗಳು ಬೇರೆ ಬೇರೆ ಯಾದರೂ ಹರಕೆಗಳನ್ನು ವಿಧವಿಧವಾಗಿ ತೀರಿ ಸಿದರೂ ಅವನ್ನೆಲ್ಲಾ ಪ್ರೀತಿಯಿಂದ ಸ್ವೀಕರಿಸಿ, ಅವರ ಕೋರಿಕೆಗಳನ್ನು ತೀರಿಸುತ್ತಿರುವ ಸ್ವಾಮಿ ತಿರುಮಲೇಶ!



ನಿಜ ಹೇಳಬೇಕೆಂದರೆ ಈ ಹರಕೆಗಳ ವಿಷಯದಲ್ಲೇ ಭಕ್ತರನ್ನು ತನ್ನೆಡೆಗೆ ಸೆಳೆದು ಕೊಳ್ಳುತ್ತಾನೆ ಈತ. ಹರಕೆಗಳ ಸಮರ್ಪಣೆ ಯಲ್ಲಿ ಹೆಣ್ಣು ಗಂಡೂ, ಹಿರಿಯ, ಕಿರಿಯ ವ್ಯತ್ಯಾಸವಿಲ್ಲದೇ ಕೆಲವರು ತಲೆಗೂದಲನ್ನು ಸಮರ್ಪಿಸುತ್ತಾರೆ. ಅವರ ತಲೆ ಯಲ್ಲಿ ಸಿಕ್ಕನ್ನು ಸ್ವೀಕರಿಸಿ ಅವರ ಜೀವನದಲ್ಲಿನ ಸಿಕ್ಕನ್ನು ಬಿಡಿಸುವ ಅಪರೂಪವಾದ ದೈವ ಈ ನಮ್ಮ ಶ್ರೀನಿವಾಸ.

ಸಾಮಾನ್ಯರೇ ಅಲ್ಲದೇ ಮಾನ್ಯರು, ಅಸಾಮಾನ್ಯರೂ ಸಹಾ ಈ ದೇವದೇವನಿಗೆ ಹರಕೆಗಳನ್ನು ಸಲ್ಲಿಸಿದ್ದಾರೆ.

ವಿಜಯನಗರದ ಅರಸನಾದ ಶ್ರೀ ಕೃಷ್ಣದೇವರಾಯರು 1513 ರಿಂದ 1521 ರ ವರೆಗೂ ಏಳು ಬಾರಿ ತಿರುಮಲೆಯ ಯಾತ್ರೆಯನ್ನು ಮಾಡಿ, ನವರತ್ನಖಚಿತವಾದ ಹಾರಗಳನ್ನು, ಹಾಲಿನ ನೈವೇದ್ಯಕ್ಕಾಗಿ ಬಂಗಾರದ ಪಾತ್ರೆಯನ್ನು, ಮಕರ ತೋರಣವನ್ನು, ವಿಮಾನ ಗೋಪುರಕ್ಕೆ ಬಂಗಾರದ ಲೇಪನ ವನ್ನು ಹರಕೆಯಾಗಿ ಸಮರ್ಪಿಸಿದನಂತೆ! ಅಚ್ಯುತರಾಯ, ವೇಂಕಟಪತಿರಾಯ ಅನೇಕ ಹರಕೆಗಳನ್ನು ಸಲ್ಲಿಸಿದ್ದಾರೆ.

ಅದಕ್ಕೂ ಮೊದಲು 614 ರಲ್ಲಿ ಪಲ್ಲವರಾಣಿಯಾದ ಸಾಮವೈ ಬೆಳ್ಳಿಯ ಶ್ರೀನಿವಾಸನ ವಿಗ್ರಹವನ್ನು ಹರಕೆಯಾಗಿ ಸಲ್ಲಿಸಿ, ಬ್ರಹ್ಮೋತ್ಸವದ ಮೊದಲು ಮೆರವಣಿಗೆ ಮಾಡಿಸಿ ದಳಂತೆ!

ತುಲಾಭಾರ, ಉರುಳುಸೇವೆ, ಆಲಯಪ್ರದಕ್ಷಿಣೆ, ಅಖಂಡ ದೀಪಾರಾಧನೆ.... ಹೀಗೆ ಶ್ರೀಸ್ವಾಮಿಗೆ ಸಮರ್ಪಿಸುವ ಹರಕೆಗಳು ಎಷ್ಟೋ! ಯಾರಿಗೆ ಗೊತ್ತು.

**ವಿಚಿತ್ರವಾದ ವರಗಳು ... ಆನಂದಕರವಾದ ಲೀಲೆಗಳು**

ಬೆಟ್ಟದೊಡೆಯ "ಬಯಸಿದ ವರಗಳನ್ನು ನೀಡುವ ದೇವರು" ಎಂದು ಅನ್ನಮಯ್ಯ ಹೇಳಿದಂತೆ ....

"ಏಮಿವಲಸಿನ ಇಚ್ಚು ಎಪ್ಪುಡೈನನು
ಏಮರಕ ಕೊಲಿಚಿನ ಇತಡೇ ದೈವಮು"

ಅಂದರೆ ಏನು ಬೇಕೆಂದರೂ ನೀಡುವ, ಯಾವಾಗ ಬೇಕೆಂದರೂ ನೀಡುವ ದೈವ ಈತನೇ ಕೆಲವರಿಗೆ ಕಣ್ಣು ಗಳನ್ನು ನೀಡುತ್ತಾನೆ. ಕಾಲುಗಳನ್ನು ನೀಡು ತ್ತಾನೆ. ಕೆಲಸ ಮಾಡುವುದಕ್ಕೆ ಕೈಗಳನ್ನು ನೀಡು ತ್ತಾನೆ. ಪ್ರಾಣವನ್ನು ನೀಡುತ್ತಾನೆ, ಪದವಿಗಳನ್ನು ನೀಡುತ್ತಾನೆ, ಸಂತಾನವನ್ನು ನೀಡುತ್ತಾನೆ.

"ಶ್ರೀನಿವಾಸಾ! ಬಹುಕ್ತ್ಯಾ ಕಿಂ? ಭಕ್ತ ಸರ್ವಾರ್ತಿನಾಶನೇ
ಸರ್ವಾರ್ಥ ಪೂರಣೇ ಚಾಪಿ ತ್ವತ್ಸಮೋಂಡೇ ನ ಕುತ್ರಚಿತ್"

ಆಯ್ಯಾ! ಭಕ್ತರಿಗೆ ಅದು ಕೊಟ್ಟೆ ಇದು ಕೊಟ್ಟೆ ಎಂದು ಹೊಗಳುವುದೇಕೆ? ಭಕ್ತರ ಕಷ್ಟ ಗಳನ್ನು ದೂರಮಾಡುತ್ತಾ, ಸರ್ವಾರ್ಥಗಳನ್ನು ಪ್ರಸಾದಿಸುವ ನಿನ್ನಂತಹಾ ದೇವರು ಈ ಬ್ರಹ್ಮಾಂಡದಲ್ಲೇ ಎಲ್ಲೂ ಇಲ್ಲ, ಕಂಡು ಬರುವುದೂ ಇಲ್ಲ ಸ್ವಾಮಿ! ಎಂದು ಹೊಗಳಿಸಿ ಕೊಳ್ಳುತ್ತಿದ್ದಾನೆ ಈ ತಿರುಮಲೇಶ.

ಈ ಕ್ಷೇತ್ರಕ್ಕೆ ನಂತರದ ಕಾಲದಲ್ಲಿ ಶೇಷಾದ್ರಿ, ಗರುಡಾದ್ರಿ, ವೇಂಕಟಾದ್ರಿ, ನಾರಾಯಣಾದ್ರಿ, ವೃಷಭಾದ್ರಿ, ವೃಷಾದ್ರಿ ಅಂಜ ನಾದ್ರಿ ಎಂಬ ಏಳು ಹೆಸರುಗಳು ಏರ್ಪಟ್ಟುವು. ಆದ್ದರಿಂದಲೇ ಈ ಕ್ಷೇತ್ರ "ಸಪ್ತಗಿರಿ" ಎಂದು ಏಳುಬೆಟ್ಟಗಳೆಂದೂ ಕರೆಯಲ್ಪ ಡುತ್ತಿದೆ. ಕೇವಲ ಈ ಏಳು ಹೆಸರುಗಳೇ ಅಲ್ಲದೇ ಈ ಕ್ಷೇತ್ರಕ್ಕೆ ಇನ್ನೆಷ್ಟು ಹೆಸರುಗಳಿವೆಯೋ ಲೆಕ್ಕವಿರಿಸಿ ಹೇಳುವುದು ತುಂಬಾ ಕಷ್ಟವಾದ ಕೆಲಸ.

ಹಾಗೆಯೇ ಈ ಪುಣ್ಯಕ್ಷೇತ್ರದಲ್ಲಿ ದರ್ಶನವನ್ನು ನೀಡುತ್ತಾ ನಿಂತಿರುವ ಶ್ರೀ ವೇಂಕಟೇಶ್ವರಸ್ವಾಮಿಗೆ "ಏಡುಕೊಂಡಲ ವಾಡು, ಶೇಷಾಚಲಪತಿ, ಶ್ರೀವೇಂಕಟಪತಿ, ಅಂಜನಾದ್ರೀಶ್ವರ, ವೃಷಭಾದ್ರೀಶ್ವರ, ತಿರುಮಲೇಶ, ಶ್ರೀನಿವಾಸ ಎಂದೂ ಇನ್ನೂ ಅನೇಕಾನೇಕ ಹೆಸರುಗಳು ಉಂಟಾಗಿವೆ.

ಭಕ್ತರಿಗಾಗಿಯೇ ಶ್ರೀ ವೈಕುಂಠದಿಂದ ಧರೆಗಿಳಿದು ಬಂದಿರುವ ಶ್ರೀ ವೇಂಕಟೇಶ್ವರನನ್ನು ಸ್ಮರಿಸಿದರೆ ಸಾಕು! ಪಾಪಗಳೆಲ್ಲಾ ಹೇಳ ಹೆಸರಿಲ್ಲದೇ ಮಾಯವಾಗುತ್ತವೆ. ಆ ದೇವ ನನ್ನು ಸ್ತುತಿಸಿದರೆ ಸಾಕು ನಮ್ಮೆಲ್ಲಾ ಕೋರಿಕೆಗಳೂ ಈಡೇ ರುತ್ತವೆ. ಆ ದೇವದೇವನನ್ನು ಸಂದರ್ಶಿಸಿದರೆ ಸಾಕು! ಮುಕ್ತಿ ದೊರೆಯುತ್ತದೆ. ಅಂತಹಾ ಮಹಿಮಾನ್ವಿತನಾದ ಶ್ರೀನಿವಾಸ ನನ್ನು ನಿತ್ಯವೂ ಭಜಿಸುತ್ತಾ, ಆ ಸ್ವಾಮಿಯನ್ನು ಆತ ನೆಲೆಸಿರುವ ತಿರುಮಲೆಯ ಕ್ಷೇತ್ರದ ಬಗೆಗೆ ಸಂಕ್ಷಿಪ್ತವಾಗಿ ತಿಳಿದು ಕೊಳ್ಳೋಣ.

ಶ್ಲೋ॥ ಸ್ಮರಣಾ ತ್ಸರ್ವಪಾಪಘ್ನಂ ಸ್ತವನಾ ದಿಷ್ಟವರ್ಷಿಣಂ
ದರ್ಶನಾ ನ್ಮುಕ್ತಿ ದಂ ಚೇಶಂ ಶ್ರೀನಿವಾಸ ಭಜೇ ನಿಶಮ್

(ಸಶೇಷ)



# ಕರ್ನಾಟಕದಲ್ಲಿ ಕಾವೇರಿ ತೀರದ ಪುಣ್ಯಕ್ಷೇತ್ರದಲ್ಲಿ

- ಶ್ರೀಮತಿ. ಸುಮ ಚಂದ್ರಶೇಖರ್

ದಕ್ಷಿಣ ಗಂಗೆ ಎನಿಸಿದ ಕಾವೇರಿ ಉದ್ಭವಗೊಂಡಾಗ ತ್ರಿಮೂರ್ತಿಗಳು ಅವಳಿಗೆ ನಿನ್ನ ಉಭಯ ತಟಗಳಲ್ಲಿ ನಾವು ನೆಲಸಿ ನಿನ್ನಲ್ಲಿ ಸ್ನಾನ ಮಾಡುವವರಿಗೆ ಅಪಾರ ಪುಣ್ಯ ಪ್ರಾಪ್ತಿಯಾಗುವಂತೆ ಮಾಡುತ್ತೇವೆ ಎಂದು ವರಕೊಟ್ಟರಂತೆ. ಅದರಂತೆ ಕಾವೇರಿ ಪ್ರವಹಿಸುವ ಕರ್ನಾಟಕ ಹಾಗೂ ತಮಿಳು ನಾಡುಗಳಲ್ಲಿ ಕಾವೇರಿಯ ಎರಡು ದಡಗಳಲ್ಲಿಯೂ ಪ್ರಸಿದ್ಧ ವೈಷ್ಣವ, ಶೈವ ಕ್ಷೇತ್ರಗಳು ಬಹು ಸಂಖ್ಯಾತವಾಗಿವೆ. ಕರ್ನಾಟಕದಲ್ಲಿ ಕಾವೇರಿಯ ಉಗಮ ಸ್ಥಾನವಾದ ತಲ ಕಾವೇರಿ, ಭಾಗ ಮಂಡಲ, ರಾಮನಾಥಪುರ, ಚುಂಚನ ಕಟ್ಟೆ, ಶ್ರೀರಂಗಪಟ್ಟಣ, ತಿರುಮಲಕೂಡಲ ನರಸೀಪುರ, ತಲಕಾಡು, ಶಿವನ ಸಮುದ್ರಗಳು ಪ್ರಸಿದ್ಧ ಯಾತ್ರಾ ಸ್ಥಳಗಳಾಗಿವೆ.

### ತಲಕಾವೇರಿ

ಕಾವೇರಿ ನದಿಯ ಉಗಮಸ್ಥಾನವಾದ ತಲಕಾವೇರಿ ಬಹು ರಮ್ಯವೂ, ಪವಿತ್ರವೂ, ಪುರಾಣ ಪ್ರಸಿದ್ಧವೂ ಆದ ಸ್ಥಳ. ಮಡಿಕೇರಿಯಿಂದ 44ಕಿ.ಮೀ. ಭಾಗಮಂಡಲದಿಂದ 88 ಕಿ.ಮೀ. ದೂರದಲ್ಲಿರುವ ತಲಕಾವೇರಿ ಸಮುದ್ರಮಟ್ಟಕ್ಕಿಂತ 1535 ಮೀಟರ್‌ಗಳಷ್ಟು ಎತ್ತರದಲ್ಲಿದೆ. 4500- 5500 ಅಡಿ ಎತ್ತರದಲ್ಲಿ ಹರಡಿರುವ ಬೆಟ್ಟದ ತಪ್ಪಲಿನಲ್ಲಿ ಕಾವೇರಿ ಉದಯಿಸುತ್ತಾಳೆ.4 ಅಡಿ 4 ಅಡಿ ಅಗಲವಿರುವ ಪುಟ್ಟ ಹೊಂಡವನ್ನು ಬ್ರಹ್ಮಕುಂಡ ಎಂದು ಕರೆಯುತ್ತಾರೆ.ಕುಂಡಿಕೆಯ ಮುಂಭಾಗದಲ್ಲಿ ಸಣ್ಣ ಗುಡಿಯೊಂದಿದ್ದು ಅಲ್ಲಿ ಕರಿಯ ಕಲ್ಲಿನ ಕಾವೇರಿ ಮಾತೆಯ ವಿಗ್ರಹವಿದೆ. ಅದಕ್ಕೆ ಪೂಜೆ ಸಲ್ಲಿಸಲಾಗುತ್ತದೆ.ಈ ಕುಂಡಿಕೆಗೆ ತಾಗಿಕೊಂಡೆ ದೊಡ್ಡದಾದ ಕೊಳವೊಂದಿದೆ. ಅದು ತುಂಬಿ ಹೊರಬಂದು ಕಾವೇರಿ ನದಿಯಾಗಿ ಹರಿಯ ತೊಡಗುತ್ತಾಳೆ.

ಇಲ್ಲಿ ಮೂಲ ಕಾವೇರಿ, ಅಗಸ್ತ್ಯ ಮುನಿಗಳು ಪ್ರತಿಷ್ಠಾಪಿಸಿದ್ದು ಎನ್ನಲಾದ ಅಗಸ್ತ್ಯೇಶ್ವರ ಎಂಬ ಮರಳು ಲಿಂಗವಿರುವ ಅಗಸ್ತ್ಯೇಶ್ವರ ದೇವಾಲಯಗಳಿವೆ. ಅಗಸ್ತ್ಯ ಮುನಿಗಳೇ ನೆಟ್ಟ ಸಸಿಯೆಂದು ಪ್ರತೀತಿ ಇರುವ ಅಶ್ವತ್ಥ ವೃಕ್ಷವೊಂದಿದೆ. ಬ್ರಹ್ಮಗಿರಿಯ ತುದಿಯಲ್ಲಿ ಸಪ್ತ ಋಷಿಗಳು ಇಲ್ಲಿ ತಪಸ್ಸು ಮಾಡಿದ್ದರೆಂಬುದಕ್ಕೆ ಸಾಕ್ಷಿಯಾಗಿ ಏಳು ಪುಟ್ಟ ಹೊಂಡಗಳಿವೆ. ಬೆಟ್ಟದ ಮೇಲಿನ ಈ ಗುಳಿಗಳಲ್ಲಿ ವರ್ಷವಿಡೀ ನೀರು ನಿಲ್ಲುವುದು ಆ ಮುನಿಗಳ ತಪಸ್ಸಿದ್ಧಿಯ ಪ್ರತೀಕ ಎನ್ನುತ್ತಾರೆ. ಕಾವೇರಿಯ ಈ ಉಗಮ ಸ್ಥಾನವನ್ನು ಆಮೂಲಕ ತೀರ್ಥ,ಶಂಖತೀರ್ಥವೆಂದೂ ಕರೆಯುತ್ತಾರೆ.

ತಲಕಾವೇರಿಯಲ್ಲಿ ತೀರ್ಥೋದ್ಭವಕ್ಕೆ ಹೆಚ್ಚಿನ ಮಹತ್ವ ಇದರಿಂದಾಗಿಯೆ ಈ ನದಿ ಉಳಿದ ನದಿಗಳಿಗಿಂತ ಭಿನ್ನವಾಗಿ ವಿಶಿಷ್ಟ ಸ್ಥಾನ ಪಡೆದಿದೆ. ಪ್ರತಿವರ್ಷ ಅಕ್ಟೋಬರ್ ತಿಂಗಳಿನಲ್ಲಿ ಸೂರ್ಯ ತುಲಾರಾಶಿಗೆ ಪ್ರವೇಶಿಸುವ ಸಮಯಕ್ಕೆ ಸರಿಯಾಗಿ ಕಾವೇರಿ ಕುಂಡಿಕೆಯಲ್ಲಿ ಸಕಲ ಪುಣ್ಯ ನದೀ ತೀರ್ಥಗಳು ಒಗ್ಗೂಡಿ ತೀರ್ಥೋದ್ಭವಾಗುತ್ತದೆ. ತುಲಾರಾಶಿಗೆ ಸೂರ್ಯ ಪ್ರವೇಶಿಸುವ ಘಳಿಗೆಗೆ ಸರಿಯಾಗಿ ಕಾವೇರಿ ಕುಂಡಿಕೆಯಲ್ಲಿ ಬುದ್ಬುದ ರೂಪದಲ್ಲಿ ತೀರ್ಥೋದ್ಭವ ಆಗುತ್ತದೆ.ಇದು ಸಾಮಾನ್ಯವಾಗಿ ರಾತ್ರಿ ವೇಳೆ ಸಂಭವಿಸಿದರೂ, ಸುಮಾರು 10 ರಿಂದ 15 ಸಾವಿರ ಜನ ಸೇರುತ್ತಾರೆ. ತೀರ್ಥೋದ್ಭವದ ನಂತರ ತುಲಾ ಮಾಸದ ಉದ್ದಕ್ಕೂ ತೀರ್ಥಸ್ನಾನ. ಅಸಂಖ್ಯಾತ

ಯಾತ್ರಿಕರು ಆಗ ಇಲ್ಲಿಗೆ ಭೇಟಿ ನೀಡುತ್ತಾರೆ. ಕಾವೇರಿಯ ಪವಿತ್ರ ತೀರ್ಥವನ್ನು ಮನೆಗೆ ಕೊಂಡೊಯ್ಯುತ್ತಾರೆ.

ಇದು ಕೊಡಗಿನ ಮೂರು ಪ್ರಮುಖ ಹಬ್ಬಗಳಲ್ಲಿ ಒಂದು. ಶ್ರಾವಣ ಮಾಸದಲ್ಲಿ ಕೊಡಗಿನಲ್ಲಿ ನಡೆಯುವ ಹಬ್ಬದಲ್ಲಿ ಕಾವೇರಿ ಕೊಡಗಿನ ಮಗಳು, ಅವಳು ಪತಿಯಾದ ಸಾಗರದೊಡನೆ ಸಂಗಮಿಸಲು ಭರದಿಂದ ತೆರಳುತ್ತಿರುವಾಗ ಅವಳನ್ನು ಬೀಳ್ಕೊಡಲೆಂದು ಉಡುಗೊರೆಯಾಗಿ ದುಡ್ಡು ಹಾಗೂ ಮಂಗಳ ದ್ರವ್ಯಗಳನ್ನು ನದಿಗೆ ಅರ್ಪಿಸುವ ಸಂಪ್ರದಾಯವಿದೆ. ಹೀಗಾಗಿ ತಲ ಕಾವೇರಿ ಕರ್ನಾಟಕದ ಕೊಡಗಿನ, ಧಾರ್ಮಿಕ, ಸಾಂಸ್ಕೃತಿಕ, ಪ್ರಾಕೃತಿಕ ಸೌಂದರ್ಯದ ಹಿರಿಮೆಯ ನೆಲೆಯಾಗಿದೆ. ಈ ನದೀ ಮೂಲ, ಭಕ್ತರಿಗೆ ಸಾಧಕರಿಗೆ, ಪ್ರಕೃತಿ ಪ್ರಿಯರಿಗೆ ಸ್ನಾನ ಸ್ಮರಣೆ ದರ್ಶನ ಯೋಗ್ಯ ಕ್ಷೇತ್ರವಾಗಿದೆ.



### ಭಾಗಮಂಡಲ

ತಲಕಾವೇರಿಯಲ್ಲಿ ಹುಟ್ಟಿ ಹರಿಯಲಾರಂಭಿಸಿದ ಕಾವೇರಿ ನದಿಯ ದಡದಲ್ಲಿರುವ ಮೊದಲ ಪುಣ್ಯಕ್ಷೇತ್ರ ಭಾಗಮಂಡಲದಲ್ಲಿ ಸ್ಕಂದ ಪುರಾಣ ಪ್ರಸಿದ್ಧವಾದ ಭಗಂಡೇಶ್ವರನ ದೇವಾಲಯವಿದೆ. ತಲಕಾವೇರಿಯ ಇನ್ನೊಂದು ಬದಿಯಲ್ಲಿ ಹುಟ್ಟುವ ಕನ್ನಿಕಾ ಅಥವಾ ಕನಕಾವತಿ ಎಂಬ ಕಿರುನದಿ ಇಲ್ಲಿ ಕಾವೇರಿಯೊಡನೆ ಸಂಗಮವಿರುತ್ತದೆ. ಗುಪ್ತಗಾಮಿಯಾದ ಸುಜ್ಯೋತಿಯೂ ಸೇರಿ ತ್ರಿವೇಣಿ ಸಂಗಮವಾಗಿ ದಕ್ಷಿಣ ಪ್ರಯಾಗ ಎಂದು ಪ್ರಸಿದ್ಧವಾಗಿದೆ. ಇಲ್ಲಿ ಭಗಂಡೇಶ್ವರ, ಮಹಾವಿಷ್ಣು ಹಾಗೂ ಸುಬ್ರಹ್ಮಣ್ಯನ ದೇವಾಲಯಗಳಿವೆ. ಕೇರಳ ಶಿಲ್ಪ ಕಲಾ ಶೈಲಿಯನ್ನು ಹೋಲುವ ಈ ದೇವಾಲಯಗಳಿಗೆ ತಲಕಾವೇರಿಯ ದರ್ಶನಕ್ಕೆ ಬಂದವರೆಲ್ಲರೂ ಭೇಟಿ ನೀಡುತ್ತಾರೆ.

ಮುಂದೆ ಕಾವೇರಿ ಬಲಮುರಿಗೆ ಬರುತ್ತಾಳೆ. ಅರ್ಥಾತ್ ನದಿ ಇಲ್ಲ ಬಲಕ್ಕೆ ತಿರುಗಿ ಹರಿಯುತ್ತದೆ. ಕಾವೇರಿ ತೀರ್ಥೋದ್ಭವದ ಮರುದಿನ ಬಲಮುರಿಯಲ್ಲಿ ಮತ್ತೊಂದು ಜಾತ್ರೆ ಸೇರುತ್ತದೆ. ಕೊಡವ ಮಹಿಳೆಯರು ನೆರಿಗೆಯನ್ನು ಹಿಂಭಾಗದಲ್ಲಿ ತಂದು ಸೀರೆಯುಡುವುದಕ್ಕೆ ಸಂಬಂಧಿಸಿದಂತೆ ಒಂದು ಕತೆ ಇದೆ. ಬಲ ಮುರಿಯ ಬಳಿ ಕಾವೇರಿ ನದಿಯಲ್ಲಿ ಸ್ನಾನ ಮಾಡುತ್ತಿರ ಬೇಕಾದರೆ ಸೀರೆ ನೆರಿಗೆಗಳು ಹಿಮ್ಮುಖವಾದವಂತೆ. ಅದು ಕಾವೇರಿ ಮಾತೆಯ ಅನುಗ್ರಹ ಅಥವಾ ಆದೇಶವಿರಬಹುದೆಂದು ಭಾವಿಸಿ ಅಂದಿನಿಂದ ಕೊಡವ ಮಹಿಳೆಯರು ನೆರಿಗೆಯನ್ನು ಹಿಂದಕ್ಕೆ ತಂದು ಉಡತೊಡಗಿದಂತೆ. ಇದು ಬಲಮುರಿಯ ಸ್ಥಳಪುರಾಣ.

### ರಾಮನಾಥಪುರ

ರಾಮನಾಥಪುರ ಹಾಸನ ಜಿಲ್ಲೆಯಲ್ಲಿದೆ. ಕಾವೇರಿ ನದಿ ಇಲ್ಲಿ ಬಂಡೆಗಳೆಡೆಯಲ್ಲಿ ನುಸುಳುತ್ತಾ ರಭಸದಿಂದ ಹರಿಯುತ್ತದೆ. ವಹ್ನಿ ತೀರ್ಥವೆಂದು ಪುರಾಣ ಪ್ರಸಿದ್ಧ. ಇಲ್ಲಿರುವ ಅನೇಕ ದೇವಾಲಯಗಳಲ್ಲಿ ಸುಬ್ರಹ್ಮಣ್ಯ ಸ್ವಾಮಿಯ ದೇವಾಲಯವೂ ರಾಮೇಶ್ವರ ದೇವಾಲಯವೂ ಹೆಸರಾದುವು. ಪ್ರಸಿದ್ಧ ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ಒಂದು ಇವುಗಳಲ್ಲದೇ ಅಗಸ್ತ್ಯೇಶ್ವರ, ಪಟ್ಟಾಭಿರಾಮ, ರಾಮಲಿಂಗೇಶ್ವರ ಮತ್ತು ಆಂಜನೇಯನ ದೇವಾಲಯಗಳಿವೆ. ನದಿಯಲ್ಲಿನ ಗೋಗರ್ಭಸ್ನಾನ ಪವಿತ್ರವೆಂದು ಪ್ರಖ್ಯಾತಿ.

### ಚುಂಚನಕಟ್ಟೆ

ಕಾವೇರಿ ತಟದಲ್ಲಿರುವ ಅನೇಕ ಪುಣ್ಯ ಕ್ಷೇತ್ರದಲ್ಲಿನ ಚುಂಚನಕಟ್ಟೆಯೂ ಒಂದು. ಲೋಕಾಭಿರಾಮನಾದ ಶ್ರೀ ರಾಮಚಂದ್ರಸ್ವಾಮಿ ಇಲ್ಲಿನ ಅಧಿ ದೇವತೆ. ಚುಂಚನ ಕಟ್ಟೆ ಮೈಸೂರು ಜಿಲ್ಲೆಯ ಕೃಷ್ಣ ರಾಜನಗರ ತಾಲ್ಲೂಕಿನಲ್ಲಿದೆ. ಮೈಸೂರಿನಿಂದ 12 ಮೈಲಿಗಳ ದೂರದಲ್ಲಿದೆ. ಬಹು ಸುಂದರವಾದ ಸ್ಥಳ. ದೇವಸ್ಥಾನದ ಹಿಂಬದಿಯನ್ನು ಬಳಸಿ ಕಾವೇರಿ ನದಿ ಬಂಡೆಗಳೆಡೆಯಲ್ಲಿ ನುಸುಳಿ ಧುಮುಕಿ ಪುಟ್ಟ ಜಲಪಾತವೊಂದನ್ನು ರಚಿಸಿ ಹರಿಯುತ್ತದೆ. ಜಲಪಾತದ ಬಳಿ ಸೀತಾದೇವಿ ಸ್ನಾನ ಮಾಡಿದಳೆನ್ನುವ ಜಾಗದಲ್ಲಿ ಮಾತ್ರ ಅರಿಶಿನ ಬಣ್ಣದ ನೀರು ಉಕ್ಕಿ ಹರಿಯುತ್ತದೆ. ಕಾವೇರಿ ಇಲ್ಲಿ ಪೂರ್ವವಾಹಿನಿಯಾಗಿ ಹರಿಯುತ್ತಾಳೆ. ನದಿ ದಡದಲ್ಲಿ ಆಂಜನೇಯನ ಸಣ್ಣಗುಡಿಯೊಂದಿದೆ. ಮೂಲ ವಿಗ್ರಹದ ಬಳಿ ಆಂಜನೇಯನಿಲ್ಲ. ಮೈಸೂರು ಅರಸರಾದ ಚಾಮರಾಜ ಒಡೆಯರ್, ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಕಟ್ಟಲ್ಪಟ್ಟ ದೇವಸ್ಥಾನ, ಚಿಕ್ಕದಾದರೂ ಚೊಕ್ಕವಾಗಿದೆ. ಒಳ ಪ್ರಕಾರದಲ್ಲಿ ದಶಾವತಾರದ ಸುಂದರ ಚಿತ್ರಗಳಿವೆ. ಗರ್ಭಗುಡಿಯ ಮುಂದಿನ ಕೈಸಾಲೆಯಲ್ಲಿ ಚುಂಚನಕಟ್ಟೆ ಎಂಬ ಹೆಸರಿಗೆ ಕಾರಣರಾದ ಚುಂಚ ಚುಂಚಿಯರ ಪುಟ್ಟ ವಿಗ್ರಹಗಳಿವೆ. ಬಲಗೈಯಲ್ಲಿ ಬಾಣವನ್ನು, ಎಡಗೈಯಲ್ಲಿ ಬಿಲ್ಲನ್ನೂ ಧರಿಸಿ ಬಲಭಾಗದಲ್ಲಿ ಸೀತಾದೇವಿ

ಯಿಂದಲೂ ಎಡಭಾಗದಲ್ಲಿ ಲಕ್ಷ್ಮಣನಿಂದಲೂ ಭೂಷಿತನಾದ ಶ್ರೀ ಕೋದಂಡರಾಮನ ದಿವ್ಯ ಮಂಗಳ ಮೂರ್ತಿ. ಸೌಮ್ಯ ಸುಂದರವಾಗಿದೆ. ಪೂರ್ವದಲ್ಲಿ ಈ ಸ್ಥಳವು ಚುಂಚು ವನವೆಂದು ಕರೆಯಲ್ಪಡುತ್ತಿತ್ತು. ನದಿಗೆ ಇಲ್ಲಿ ಒಂದು ಸಣ್ಣ ಅಣೆಕಟ್ಟೆಯಿದೆ. ಇಲ್ಲಿ ವರುಷಕ್ಕೆ ಎರಡು ಬಾರಿ ವಿಶೇಷ ಉತ್ಸವಗಳು ನಡೆಯುತ್ತವೆ. ಶ್ರೀರಾಮ ಭಕ್ತರೆಲ್ಲರೂ ಒಮ್ಮೆ ನೋಡಲೇ ಬೇಕಾದ ಸ್ಥಳ ಚುಂಚನಕಟ್ಟೆ.



### ಶ್ರೀರಂಗಪಟ್ಟಣ

ಕಾವೇರಿಯು ಒಮ್ಮೆ ರಂಗನಾಥನನ್ನು ಕುರಿತು ತಪಸ್ಸು ಮಾಡಿದಾಗ ಅವನು ಪ್ರಸನ್ನವಾಗಿ ನೀನು ಹರಿಯುವಾಗ ಎರಡು ಕವಲುಗಳಾಗಿ ಒಡೆಯುವ ಸ್ಥಳಗಳಲ್ಲಿ ನಾನು ವಾಸಮಾಡುತ್ತೇನೆ ಎಂದು ವರಕೊಟ್ಟ ಕಾವೇರಿ ತನ್ನ ಮಾರ್ಗದಲ್ಲಿ ಮೂರು ಕಡೆಗಳಲ್ಲಿ ಎರಡು ಕವಲಾಗಿ ಹರಿದು ಮತ್ತೆ ಸೇರುತ್ತಾಳೆ.ಆ ಸ್ಥಳಗಳಲ್ಲಿ ಮಹಾವಿಷ್ಣುವು ರಂಗನಾಥನಾಗಿ ಮಲಗಿರುವನು. ಅದೇ ಆದಿರಂಗ ಶ್ರೀರಂಗಪಟ್ಟಣ ಮಧ್ಯರಂಗ ಶಿವನ ಸಮುದ್ರ, ಅಂತ್ಯರಂಗ ಶ್ರೀರಂಗ, ಶ್ರೀರಂಗಪಟ್ಟಣವು ಕರ್ನಾಟಕದಲ್ಲಿ ಕಾವೇರಿ ತೀರದ ಬಹು ಪ್ರಸಿದ್ಧ ಪುಣ್ಯಕ್ಷೇತ್ರ ಮಂಡ್ಯ ಜಿಲ್ಲೆಗೆ ಸೇರಿದ್ದು ಮೈಸೂರಿನಿಂದ ಸುಮಾರು 10 ಕಿ.ಮೀ. ದೂರದಲ್ಲಿದೆ. ಇದಕ್ಕೆ ಪಶ್ಚಿಮ ರಂಗನಾಥನೆಂದೂ, ಗೌತಮ ಕ್ಷೇತ್ರವೆಂದೂ ಹೆಸರು. ಗೌತಮರು, ಗೋದಾವರಿ ಉದ್ಭವಿಸಿದ ನಂತರ ವಂಚಕರಾದ ಋಷಿಗಳನ್ನು ಶಪಿಸಿ ಆ ಸ್ಥಳವನ್ನು ತ್ಯಜಿಸಿ ತೀರ್ಥಯಾತ್ರೆ ಮಾಡುತ್ತಾ ಪುರಾಣ ಪ್ರಸಿದ್ಧವಾದ ಶ್ರೀರಂಗ ಪಟ್ಟಣಕ್ಕೆ ಬಂದರು. ಅವರು ಮಾಡಿದ ಪೂಜೆ, ಸ್ತೋತ್ರಾದಿಗಳಿಂದ ರಂಗನಾಥನು ಪ್ರಸನ್ನನಾಗಿ ಅವರಿಗೆ ವರವಿತ್ತು ಇಲ್ಲೇ ನೆಲಸಿದನು. ಆದರಿಂದ ಈ ಕ್ಷೇತ್ರಕ್ಕೆ ಗೌತಮ ಕ್ಷೇತ್ರವೆಂದು ಹೆಸರಾಯಿತು. ಗೌತಮರಿಗೆ ರಂಗನಾಥನು ಪ್ರತ್ಯಕ್ಷವಾದ ದಿನ ಮೇಷ ಶುಕ್ಲ ಸಪ್ತಮಿಯಂದು ಶ್ರೀರಂಗ ಜಯಂತಿ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ.

ಈ ಕ್ಷೇತ್ರಕ್ಕೆ ಆದಿಕಾಲದಲ್ಲಿ ಶ್ರೀರಂಗಪುರಿ ಎಂದು ಹೆಸರಾಗಿತ್ತು. ದೇವಸ್ಥಾನ 9 ನೇ ಶತಮಾನದಲ್ಲಿ ಪ್ರಥಮತಃ ಕಟ್ಟಲ್ಪಟ್ಟಿತೆಂದು ತಿಳಿದು ಬರುತ್ತದೆ. ದೇವಾಲಯಕ್ಕೆ 3 ಪ್ರಾಕಾರಗಳಿವೆ. ಗುಡಿ ಕಣ್ಮನ ಸೆಳೆಯುವ ಶಿಲ್ಪ ಕಲೆಯ ಸೊಬಗಿನಿಂದ ಕೂಡಿದೆ.ರಂಗನಾಥನು ಆದಿಶೇಷನ ಮೇಲೆ ಶಯನಿಸಿ, ಬಲ ಭುಜವನ್ನು ತಲೆ ದಿಂಬಾಗಿಸಿಕೊಂಡು, ಎಡ ಭುಜವನ್ನೂ, ದಕ್ಷಿಣ ಪಾದವನ್ನೂ ನೀಡಿ,ವಾಮಪಾದವನ್ನು ಸ್ವಲ್ಪ ಸಂಕುಚಿತವಾಗಿ ನೀಡಿರುವ, ವಕ್ಷಸ್ಥಳದಲ್ಲಿ ಲಕ್ಷ್ಮೀ,ಪಾದಗಳ ಬಳಿ ಕಾವೇರಿ ಇರುವ ಸ್ವಯಂ ವ್ಯಕ್ತವಾದ ದಿವ್ಯ ಮಂಗಳ ಮೂರ್ತಿ. ದೇವಿಗೆ ರಂಗನಾಯಕಿ ಎಂದೂ ವಿಮಾನಕ್ಕೆ ಬ್ರಹ್ಮಾನಂದವೆಂದೂ ಹೆಸರು.ವರ್ಷವಿಡೀ ಉತ್ಸವಗಳು ಬಹು ವಿಜೃಂಭಣೆಯಿಂದ ನಡೆಯುತ್ತದೆ.

ಶ್ರೀರಂಗಪಟ್ಟಣ ಚಾರಿತ್ರಿಕವಾಗಿಯೂ ಪ್ರಸಿದ್ಧವಾದ ಸ್ಥಳ. ಹೊಯ್ಸಳರ ಪ್ರಸಿದ್ಧರಾಜ ವಿಷ್ಣುವರ್ಧನನ ತಮ್ಮ ಉದಯಾದಿತ್ಯ ಈ ಊರನ್ನು 12 ನೇ ಶತಮಾನ ಆದಿಯಲ್ಲಿ ಕಟ್ಟಿದನು.ಇಲ್ಲಿ ರಂಗನಾಥನ ದೇವಾಲಯವಲ್ಲದೆ ಲಕ್ಷ್ಮೀ ನರಸಿಂಹಸ್ವಾಮಿ,ಗಂಗಾಧರೇಶ್ವರ, ಜ್ಯೋತಿ ಮಹೇಶ್ವರ ಮುಂತಾದ ದೇವಾಲಯಗಳಿವೆ. ಕಾವೇರಿ ತೀರದಲ್ಲಿಯೆ ಪ್ರಸಿದ್ಧವಾದ ಬಹು ಸಂಖ್ಯಾತ ಭಕ್ತರನ್ನುಳ್ಳ ನಿಮಿಷಾಂಭ ದೇವಿಯ ದೇವಸ್ಥಾನವಿದೆ. ಶ್ರೀರಂಗಪಟ್ಟಣದಲ್ಲಿ ಕಾವೇರಿಯು 3 ದಿಕ್ಕುಗಳಲ್ಲಿ ಹರಿಯುವುದರಿಂದ ಇಲ್ಲಿ ಅವಳಿಗೆ ತ್ರಿಪಥಗಾ ಎಂದು ಕರೆಯುತ್ತಾರೆ. ತುಲಾ ಮಾಸ ಕೃಷ್ಣ ಪಕ್ಷ ದಶಮಿ ಕಾವೇರಿ ಅಷ್ಟ ತೀರ್ಥದಲ್ಲಿ ಸ್ನಾನ ಮಾಡಿ ಶ್ರೀರಂಗನಾಥನ ದರ್ಶನ ಬಹು ಪುಣ್ಯಪ್ರದ. ಈ ರಂಗನಾಥನನ್ನೆ ಕನಕದಾಸರು "ಯಾಕೆ ನೀನಿಲ್ಲಿ ಪವಡಿಸಿದೆಯೊ ಪಶ್ಚಿಮ ರಂಗನಾಥ" ಎಂದು ಪ್ರಶ್ನಿಸಿದ್ದಾರೆ. ಪುರಂದರ ದಾಸರಾದಿಯಾಗಿ ಹರಿದಾಸರೆಲ್ಲ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿ ಪಶ್ಚಿಮ ರಂಗನಾಥನನ್ನು ಹಾಡಿ ಕೊಂಡಾಡಿದ್ದಾರೆ.

### ತಿರುಮಕೂಡಲು ನರಸೀಪುರ

ಮೈಸೂರು ಜಿಲ್ಲೆಯಲ್ಲಿ ಕಾವೇರಿ ತೀರದ ಅನೇಕ ಸುಂದರ ರಮಣೀಯ ಪವಿತ್ರ ಕ್ಷೇತ್ರಗಳಲ್ಲಿ ತಿರುಮಕೂಡಲು ನರಸೀಪುರವು ಒಂದು ಮೈಸೂರಿನಿಂದ ಸುಮಾರು 30 ಮೈಲಿ ದೂರದಲ್ಲಿದೆ. ನಂಜುಂಡೇಶ್ವರನ ಕೃಪೆಯೇ ಹೊಳೆಯಾಗಿ ಹರಿದು ಬರುವ ಕಪಿಲಾ ಹಾಗೂ ಕಾವೇರಿ ಮತ್ತು ಗುಪ್ತವಾದ ಸ್ಫಟಿಕ ಸರೋವರಗಳ ತ್ರಿವೇಣಿ ಸಂಗಮ. ಹಸಿರು ಬಣ್ಣದ ಕಪಿಲಾ ಮತ್ತು ನೀಲವರ್ಣದ ಕಾವೇರಿಯ ಸಂಗಮ ನೋಡಲು ಬಹು ಸುಂದರ.ದಕ್ಷಿಣ ಪ್ರಯಾಗವೆಂದು ಕರೆಯುತ್ತಾರೆ. ಪುರಾಣೋಕ್ತವಾಗಿರುವಂತೆ ಹಿಂದೆ ತೀರ್ಥಕ್ಷೇತ್ರಯಾತ್ರೆ ಮಾಡುತ್ತಾ ಅಗಸ್ತ್ಯರು ಇಲ್ಲಿಗೆ ಬಂದಿದ್ದರು. ಸುತ್ತ ಮುತ್ತಲಿನ ಸುಂದರ ಸನ್ನಿವೇಶದಿಂದ ಪ್ರಭಾವಿತರಾಗಿ

ಇಲ್ಲಿ ಒಂದು ಲಿಂಗವನ್ನು ಪ್ರತಿಷ್ಠಾಪಿಸಿದರು. ಅದೇ ತ್ರಿಕೂಟೇಶ್ವರ ಅಥವಾ ಅಗಸ್ತ್ಯೇಶ್ವರ. ವಿಸ್ತಾರವಾದ ದೇವಾಲಯ. ಅಗಸ್ತ್ಯೇಶ್ವರ ದೇವಾಲಯದಲ್ಲಿರುವ ಲಿಂಗದಲ್ಲಿ ಗಂಗಾದೇವಿ (ಅಂದರೆ ನೀರು) ಸದಾ ಸನ್ನಿಹಿತಳಾಗಿರುತ್ತಾಳೆ. ಎಷ್ಟು ತೆಗೆದರೂ ನೀರು ಕಡಿಮೆಯಾಗುವುದಿಲ್ಲ. ಅದನ್ನೇ ತೀರ್ಥವೆಂದು ಕೊಡಲಾಗುತ್ತದೆ. ಸ್ನಾನಕ್ಕೆ ಪ್ರಶಸ್ತವಾದ ಸ್ನಾನ ಘಟ್ಟವಿದೆ. ಸಂಗಮದ ಅಂಚಿನಲ್ಲೇ ಮಾಧ್ವಯತಿಗಳಾದ ವ್ಯಾಸರಾಯ ಮಠದ ಪರಂಪರೆಯ ಶ್ರೀ ಶೇಷ ಚಂದ್ರಿಕಾಚಾರ್ಯರ ಮೂಲ ಬೃಂದಾವನವಿದೆ. ಇವರು ವ್ಯಾಸರಾಯರು ರಚಿಸಿದ ಉದ್ಗ್ರಂಥ "ತಾತ್ಪರ್ಯ ಚಂದಿಕಾ"ದ ಕಡೆಯ ಎರಡು ಅಧ್ಯಾಯಗಳನ್ನು ಬರೆದವರು. ಬಳಿಯಲ್ಲೇ ಬ್ರಹ್ಮಾಶ್ವತ್ಥ ವೃಕ್ಷದ ನೆರಳಿನಲ್ಲಿ ಭಕ್ತಜನ ನೂರಾರು ನಾಗರ ಕಲ್ಲುಗಳನ್ನು ಪ್ರತಿಷ್ಠೆ ಮಾಡಿರು ತ್ತಾರೆ. ಇಲ್ಲಿ ವ್ಯಾಸರಾಯ ಮಠದ ಯತಿಗಳ ನವ ಬೃಂದಾವನ ಸನ್ನಿಧಾನಗಳಿವೆ. ಕಪಿಲಾ ತೀರದಲ್ಲಿ ಗುಂಜಾ ನರಸಿಂಹ ಸ್ವಾಮಿಯ ದೇವಸ್ಥಾನವಿದೆ. ನರಸಿಂಹ ಸ್ವಾಮಿಯ ಹಸ್ತದಲ್ಲಿ ಈ ಕ್ಷೇತ್ರ ಪ್ರಯಾಗಕ್ಕಿಂತಲೂ ಹುಂಜಿ ತೂಕ ಹೆಚ್ಚೆಂದು ಹೇಳುವಂತೆ ಗುಲಗುಂಜಿ ಇದೆ ಎಂದು ದೇವರ ಹೆಸರು ಗುಂಜಾ ನರಸಿಂಹಸ್ವಾಮಿ ಎಂದಿದೆ. ಒಮ್ಮೆ ಸಂದರ್ಶಿಸಲೇ ಬೇಕಾದ ಸ್ಥಳ.

## ತಲಕಾಡು

ತಲಕಾಡು ಮೈಸೂರು ಜಿಲ್ಲೆಯ ತಿರುಮಕೂಡಲು ತಾಲ್ಲೂಕಿನಲ್ಲಿ ಮೈಸೂರು ನಗರಕ್ಕೆ ಆಗ್ನೇಯ ದಿಕ್ಕಿನಲ್ಲಿ 43 ಕಿ.ಮೀ. ದೂರದಲ್ಲಿ ಕಾವೇರಿಯ ಎಡ ದಂಡೆಯ ಮೇಲಿದೆ. ಸುಮಾರು 7-11 ವರ್ಷಗಳಿಗೊಮ್ಮೆ ಇಲ್ಲಿ ನಡೆಯುವ ಪಂಚ ಲಿಂಗೇಶ್ವರ ದರ್ಶನ ಜಗದ್ವಿಖ್ಯಾತವಾಗಿದೆ. ಪುರಾಣ ಮತ್ತು ಇತಿಹಾಸ ಎರಡೂ ಕಾಲದಲ್ಲೂ ಪ್ರಸಿದ್ಧಿ. ಪೂರ್ವದಲ್ಲಿ ಗಜಾರಣ್ಯ ಕ್ಷೇತ್ರವೆಂದೂ ಹೆಸರಾಗಿತ್ತು. ಆನೆಯ ಜನ್ಮ ಪಡೆದಿದ್ದ ಸೋಮದತ್ತನೆಂಬ ಋಷಿಯೂ, ಅವನ ಶಿಷ್ಯರೂ ಇಲ್ಲಿ ಮೋಕ್ಷ ಪಡೆದದ್ದರಿಂದ ಗಜಾರಣ್ಯ ಕ್ಷೇತ್ರ ವೆಂದು ಹೆಸರು ಪಡೆಯಿತು. ಹಿಂದೆ ಇಲ್ಲಿ ವಾಸವಾಗಿದ್ದ ತಲ ಮತ್ತು ಕಾಡ ಎಂಬ ಇಬ್ಬರೂ ಬೇಡರು. ಆ ಕಾಡಿನಲ್ಲಿ ಆನೆಗಳು ನಿತ್ಯವೂ ಸೊಂಡಲಿನಿಂದ ತಂದ ನೀರು ಮತ್ತು ಕಮಲದ ಹೂಗಳನ್ನು ಒಂದು ಪೊದೆಯ ಮೇಲಿಟ್ಟು ನಮಸ್ಕರಿಸುವುದನ್ನು ಕಂಡು ಆ ಪೊದೆಯನ್ನು ಕಡಿದು ನೋಡಲು ಒಂದು ಶಿವಲಿಂಗ ಕಾಣಿಸಿತು. ಕಡಿಯುವಾಗ ಕೊಡಲಿ ತಗುಲಿ ಲಿಂಗದಿಂದ ರಕ್ತ ಸುರಿಯುತ್ತಿರಲು ಭಯಭೀತರಾದರು. ಆಗ ಆ ಗಾಯ ಮಾಗಲು ಶಿವನೇ ಆ ಬೇಡರಿಗೆ ಔಷಧಿ ಸೂಚಿಸಿದ. ತನ್ನ ಗಾಯಕ್ಕೆ ತಾನೇ ವೈದ್ಯವನ್ನು ಸೂಚಿಸಿದ್ದರಿಂದ ಅವನಿಗೆ ವೈದ್ಯನಾಥ ಅಥವಾ ವೈದ್ಯೇಶ್ವರನೆಂದು ಹೆಸರಾಯಿತು. ಪಂಚ ಲಿಂಗಗಳಲ್ಲಿ ಇವನದೇ ಪ್ರಥಮ ದರ್ಶನ.






ತಲಕಾಡು ಬಹುಕಾಲ ಕರ್ನಾಟಕದ ಪ್ರಸಿದ್ಧ ರಾಜ ವಂಶಗಳಲ್ಲೊಂದಾದ ಗಂಗರಾಜರ ರಾಜಧಾನಿಯಾಗಿತ್ತು ತಲವನಪುರ ಎಂಬ ಹೆಸರು ಪಡೆದಿತ್ತು. ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಒಡೆಯರು ಕ್ರಮವಾಗಿ ಆಳಿದರು. ಇಲ್ಲಿನ ವೈದ್ಯನಾಥೇಶ್ವರ ದೇವಾಲಯ ಅತ್ಯಂತ ಪ್ರಾಚೀನವಾದುದು. ತಲಕಾಡಿನ ಪಂಚಲಿಂಗ ದರ್ಶನ ಬಹಳ ಪ್ರಸಿದ್ಧವಾದುದು. ಚಾಂದ್ರ ಕಾರ್ತಿಕ ಮಾಸ ಸೌರ ವೃಶ್ಚಿಕ ಮಾಸ, ಕಡೆಯ ಸೋಮವಾರ ಅಮಾವಾಸ್ಯೆ ಹಾಗೂ ವಿಶಾಖ ನಕ್ಷತ್ರಗಳ ಸಹಯೋಗವಿದ್ದಾಗ ಪಂಚಲಿಂಗ ದರ್ಶನ ಮೇಳ ನಡೆಯುವುದು ತಲಕಾಡಿನಲ್ಲಿ ಕಾವೇರಿ ದಕ್ಷಿಣ, ಉತ್ತರ ಮತ್ತು ಪೂರ್ವವಾಹಿನಿಯಾಗಿ ಹರಿಯುವಳು. ತೀರದ ಮರಳ ರಾಶಿ ದಿಬ್ಬಗಳಂತೆ ಹಬ್ಬಿ ಪಾತಾಳೇಶ್ವರ, ಮರಳೇಶ್ವರ ದೇವಾಲಯಗಳು ಮರಳಿನಲ್ಲಿ ಮುಚ್ಚಿ ಹೋದಂತೆ ಇರು

ತ್ತವೆ. ಪಂಚಲಿಂಗ ದರ್ಶನದ ಸಮಯದಲ್ಲಿ ಈ ಮರಳೆಲ್ಲವನ್ನೂ ತೆರವು ಮಾಡಿ ಯಾತ್ರಿಕರಿಗೆ ದರ್ಶನಕ್ಕೆ ಅನುಕೂಲ ಮಾಡುವರು. ಪಂಚಲಿಂಗ ದರ್ಶನ ಮಾಡುವವರು ಮೊದಲು ವೈದ್ಯೇಶ್ವರ ದೇವಾಲಯದ ಬಳಿ ಇರುವ ಗೋಕರ್ಣ ತೀರ್ಥದಲ್ಲಿ ಮಿಂದು ಅರ್ಕೇಶ್ವರನ ಪೂಜೆಯನ್ನೂ, ಪೂರ್ವವಾಹಿನಿಯಲ್ಲಿ ಮಿಂದು ಮಲ್ಲಿಕಾರ್ಜುನೇಶ್ವರನ ಪೂಜೆಯನ್ನೂ, ದಕ್ಷಿಣವಾಹಿನಿಯಲ್ಲಿ ಮಿಂದು ಸೈಕತೇಶ್ವರನ ಪೂಜೆಯನ್ನೂ, ಸಲ್ಲಿಸುತ್ತಾರೆ. ಒಂದೇ ದಿನದಲ್ಲಿ ಪಂಚಲಿಂಗ ದರ್ಶನ ವಿಶೇಷವೆನಿಸುತ್ತದೆ. ತಲಕಾಡಿನಲ್ಲಿಯೇ ವೈದ್ಯೇಶ್ವರ, ಪಾತಾಳೇಶ್ವರ, ಮರಳೇಶ್ವರ ದೇವಾಲಯಗಳಿದ್ದು ತಲಕಾಡಿನ ಪೂರ್ವಕ್ಕೆ ವಿಜಯಪುರ ಎಂಬವಲ್ಲಿ ಅರ್ಕೇಶ್ವರ ಲಿಂಗವಿದೆ. ಉತ್ತರ ದಿಕ್ಕಿನಲ್ಲಿ ಮುಡುಕು ತೊರೆ ಬೆಟ್ಟದ ನೆತ್ತಿಯಲ್ಲಿ ಮಲ್ಲಿಕಾರ್ಜುನೇಶ್ವರ ಲಿಂಗವಿದೆ. ತಲಕಾಡಿನ ದೇವಾಲಯಗಳಲ್ಲಿ ಕೀರ್ತಿ ನಾರಾಯಣದೇವಸ್ಥಾನವು ಪ್ರಸಿದ್ಧವಾದುದು. ಹೊಯ್ಸಳ ರಾಜರಿಂದ ಹೊಯ್ಸಳ ಶಿಲ್ಪ ಶೈಲಿಯಲ್ಲಿ ಕಟ್ಟಲ್ಪಟ್ಟ ಈ ದೇವಾಲಯ ವಿಷ್ಣುವರ್ಧನ ರಾಜನಿಂದ ನಿರ್ಮಿಸಲ್ಪಟ್ಟ ಪಂಚನಾರಾಯಣರಲ್ಲಿ ಒಂದಾಗಿದ್ದು ಬಹು ಕಲಾತ್ಮಕವೂ ಸುಂದರವೂ ಆಗಿದೆ. ತಲಕಾಡಿನ ಪಂಚಲಿಂಗ ದರ್ಶನ ದಕ್ಷಿಣ ಭಾರತದ ಪ್ರಮುಖ ಮೇಳಗಳಲ್ಲಿ ಒಂದಾಗಿದ್ದು ಲಕ್ಷಾಂತರ ಜನ ಸೇರುತ್ತಾರೆ.

**ಶಿವನ ಸಮುದ್ರ**


ಶಿವನ ಸಮುದ್ರವು ಮಧ್ಯರಂಗ ಎಂದು ಪ್ರಸಿದ್ಧವಾಗಿದೆ. ಎರಡನೆಯ ಬಾರಿ ಎರಡು ಕವಲಾಗಿ ಒಡೆದ ಕಾವೇರಿಯ ಮಧ್ಯದಲ್ಲಿರುವ ಸುಂದರವಾದ ದೇವಸ್ಥಾನ. ಪೂರ್ವದಲ್ಲಿ ಶಿಲಾ ಭೇಧಿ ಕ್ಷೇತ್ರ ಎಂದು ಕರೆಯಲ್ಪಡುತ್ತಿತ್ತು. ಇತಿ ಹಾಸದ ಕಾಲದಲ್ಲಿ ಗಂಗ ರಾಜರ ಊರಾಗಿತ್ತು. ಮೈಸೂರಿನಿಂದ ಸುಮಾರು 30 ಮೈಲಿ ದೂರದಲ್ಲಿದೆ. ಇಲ್ಲಿನ ದೇವಸ್ಥಾನ ಚಿಕ್ಕದಾದರೂ ವಿಶೇಷ ಸೌಂದರ್ಯದಿಂದ ಕೂಡಿದೆ. ಕಾವೇರಿಯ ಎರಡೂ ಪ್ರವಾಹಗಳೂ ಈ ಊರಿನ ಬಳಿ ಗಗನ ಚುಕ್ಕಿ, ಭರ ಚುಕ್ಕಿ ಎಂಬ ಎರಡು ಜಲಪಾತಗಳಾಗಿ ಸುಮಾರು 300 ಅಡಿ ಎತ್ತರದಿಂದ ಧುಮುಕುತ್ತವೆ. ನಂತರ ಭೀಮೇಶ್ವರ ಎಂಬಲ್ಲಿ ಎರಡೂ ಪ್ರವಾಹಗಳೂ ಒಗ್ಗೂಡುತ್ತವೆ. ಶಿವನ ಸಮುದ್ರದಲ್ಲಿ ಹೆಸರಿಗೆ ತಕ್ಕಂತೆ ಒಂದು ಶಿವನ ದೇವಾಲಯವೂ ಇದೆ.

ಕಪಿಲಾ ಗುಂಡ್ಲು ಹೊಳೆಗಳ ಸಂಗಮ ಸ್ಥಳದಲ್ಲಿರುವ ನಂಜಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ ಪ್ರಾಚೀನವೂ ಪ್ರಸಿದ್ಧವೂ ಆದುದು. ಮೈಸೂರಿಗೆ 22 ಮೈಲಿ ದೂರದಲ್ಲಿರುವ ಎಡತೊರೆ ಅಥವಾ ಕೃಷ್ಣರಾಜನಗರದಲ್ಲಿನ ಅರ್ಕೇಶ್ವರ ದೇವಸ್ಥಾನ. ಸೋಮ ನಾಥಪುರದ ಹೊಯ್ಸಳರ ಕಾಲದ ಪ್ರಸನ್ನ ಚೆನ್ನಕೇಶವ ದೇವಸ್ಥಾನ (ಇಲ್ಲಿನ ಶಿಲ್ಪಕಲೆ ಹಳೆಬೀಡು ಬೇಲೂರುಗಳ ದೇವಾಲಯಗಳಿವೆ ಹೊಯ್ ಕೈಯಾಗಿದೆ) ಸೋಸಲೆಯಲ್ಲಿರುವ ವ್ಯಾಸರಾಯ ಮಠದ ಮೂಲ ಸಂಸ್ಥಾನ, ಗಯಾ ಕ್ಷೇತ್ರ ಎನಿಸಿದ ಸತ್ಯಗಾಲ, ಗವಿ ರಾಯನ ಬೆಟ್ಟ ಕಾವೇರಿ ಅರ್ಕಾವತಿಗಳು ಸಂಗಮಿಸುವ ಮೇಕೆ ದಾಟುವಿನಲ್ಲಿರುವ ಸಂಗಮೇಶ್ವರ ದೇವಸ್ಥಾನ, ಇವು ಕರ್ನಾಟಕದಲ್ಲಿ ಕಾವೇರಿ ತೀರದ ಇತರ ಕೆಲವು ಪ್ರಸಿದ್ಧ ಪುಣ್ಯ ಕ್ಷೇತ್ರಗಳು.

ತಲಕಾವೇರಿಯಲ್ಲಿ ಹುಟ್ಟಿ ಕನ್ನಡನಾಡಿನಲ್ಲಿ ಹೀಗೆ ಹರಿಯುವ ಕಾವೇರಿ ನಂತರ ತಮಿಳುನಾಡನ್ನು ಪ್ರವೇಶಿಸಿ ಅಲ್ಲಿ ತಾನು ಹರಿಯುವ ಉದ್ದಕ್ಕೂ - ಸಾಗರ ಸಂಗಮದ ತನಕ-ಪುಣ್ಯ ಕ್ಷೇತ್ರಗಳನ್ನು ನಿರ್ಮಿಸಿದ್ದಾಳೆ. ಈ ಎಲ್ಲ ಕ್ಷೇತ್ರಗಳೂ, ಕಾವೇರಿ ಪುಷ್ಕರದ ಈ ಪರಮ ಪವಿತ್ರ ಕಾಲದಲ್ಲಿ ಭಕ್ತ ಜನರನ್ನು ಮಿಂದು ಪುಣ್ಯ ಭಾಜನರಾಗಲು ಕೈ ಬೀಸಿ ಕರೆಯುತ್ತಿವೆ.



# ಶ್ರೀ ಕೃಷ್ಣಾವತಾರ ಹಿನ್ನೆಲೆ



- ಶ್ರೀಮತಿ. ಸುಧಾಮಧುಸೂದನ್

ಮಧುರಾಪಟ್ಟಣದಲ್ಲಿ ಶೂರಸೇನನೆಂಬ ರಾಜನಿದ್ದನು. ಅವನು ಯದುವಂಶದವನು. ಮಧುರಾಮಂಡಲವನ್ನು ಆಳುತ್ತಿದ್ದನು. ಶೂರಸೇನನ ಮಗನೇ ವಾಸುದೇವನು ಅರಸ ಶೂರಸೇನನ ಆಳ್ವಿಕೆಯಲ್ಲಿ ಮಥುರೆಯು ಯಾದವ ಕುಲದ ಎಲ್ಲಾ ಅರಸರ ರಾಜಧಾನಿಯಾಗಿತ್ತು. ಏಕೆಂದರೆ ಯಾದವರು ದೈವೀ ಭಕ್ತರು.

ಶೂರಸೇನನ ಮಗ ವಸುದೇವನು, ದೇವಕನ ಮಗಳಾದ ದೇವಕಿಯನ್ನು ಮದುವೆ ಯಾದನು. ದೇವಕನ ಸಹೋದರನೇ ಉಗ್ರಸೇನ ಮಹಾರಾಜನು ಉಗ್ರಸೇನನ ಮಗನೇ ಕಂಸ ಮಹಾರಾಜನು ಉಗ್ರಸೇನನು ಭೋಜವಂಶಕ್ಕೆ ಸೇರಿದವನು.

ಶೂರಸೇನನು ಮಗ ವಸುದೇವನನ್ನು ಸೊಸೆ ದೇವಕಿಯನ್ನು ಮದುವೆಯಾದನಂತರ ಇಬ್ಬರನ್ನೂ ದಿವ್ಯವಾಗಿ ಅಲಂಕರಿಸಿದ ರಥದಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿದ್ದನು. ಕಂಸನೂ ಆ ರಥದಲ್ಲಿ ಕುಳಿತು ಲಗಾಮನ್ನು ಹಿಡಿದಿದ್ದನು. ಎಲ್ಲೆಲ್ಲೂ ಸಂತೋಷ ಸಂಭ್ರಮದ ವಾತಾವರಣ ವಾಗಿತ್ತು. ದೇವಕಿಯ ತಂದೆ ದೇವಕನಿಗೆ ಮಗಳೆಂದರೆ ಬಲು ಪ್ರೀತಿ.

ಆದುದರಿಂದ ಯೇಥೇಚ್ಛವಾಗಿ ವರದಕ್ಷಿಣೆಯನ್ನು ಕೊಟ್ಟು ನೂರಾರು ರಥಗಳೊಂದಿಗೆ ಹೊರಟರು ತನ್ನ ತಂಗಿ ದೇವಕಿಗೆ ಸಂತೋಷವಾಗಲೆಂದು ಸಹೋದರ ಕಂಸನೂ ತಾನೇ ವಸುದೇವನ ರಥಕ್ಕೆ ಸಾರಥಿಯಾಗಿ ಬಂದನು ಅನಾದಿಕಾಲದಿಂದಲೂ ಹುಡುಗಿಗೆ ಮದುವೆಯಾದಾಗ ಅವಳ ಸೋದರನೇ ತನ್ನ ಸೋದರಿಯನ್ನು ಭಾವನನ್ನು ಅವರ ಮನೆಗೆ ಕರೆದೊಯ್ಯುವ ವಾಡಿಕೆ ಇತ್ತು ಅದೇ ರೀತಿಯಾಗಿ ಕಂಸನು ತನ್ನ ತಂಗಿ ದೇವಕಿಯನ್ನು ಹಾಗೂ ಭಾವ ವಸುದೇವನ ರಥಕ್ಕೆ ಲಗಾಮು ಹಿಡಿದನು.

ವಧುವಿಗೆ ತನ್ನ ತವರಿನ ಅಗಲಿಕೆಯಾಗಬಾರದೆಂದು ಈ ರೀತಿಯಾಗಿ ಅವಳ ತಂದೆ ಗೃಹದಿಂದ ಅಣ್ಣನೋ ತಮ್ಮನೋ ಅವಳನ್ನು ಪತಿಯ ಗೃಹಕ್ಕೆ ಸೇರಿಸುವ ವಾಡಿಕೆಯಿತ್ತು.

ಚಿನ್ನದ ಹಾರದಿಂದ ಅಲಂಕೃತಳಾದ ದೇವಕಿಯು 400 ಆನೆಗಳೊಂದಿಗೆ 15,000 ಅಲಂಕೃತ ಕುದುರೆಗಳೊಂದಿಗೆ, 1,800 ರಥಗಳ ಜೊತೆ, 200 ಮಂದಿ ಸುಂದರ ಸ್ತ್ರೀಯರನ್ನೂ ಕಳುಹಿಸಿದ ದೇವಕನು. ಭಾರತದಲ್ಲಿ ಈಗಲೂ ಕ್ಷತ್ರಿಯ ಕುಲದ ಮದುವೆ

ಪದ್ಧತಿಯು.ಈ ರೀತಿ ಇದೆ. ಆಗಲೂ ಈ ಪದ್ಧತಿ ನಡೆದು ಬಂದಿದೆ.

ವಧುವರರೂ ರಥದಲ್ಲಿ ಕುಳಿತು ಸಾಗುತ್ತಿರುವಾಗ ವಿಧವಿಧವಾದ ಸಂಗೀತವಾದ್ಯಗಳು, ಶಂಖಗಳೂ, ತುತ್ತೂರಿ, ನಗಾರಿ, ಭೇರಿ, ಬುರಡೆ ಮದ್ದಲೆ ಎಲ್ಲಾ ರೀತಿಯ ವಾದ್ಯ ನುಡಿಸುತ್ತಿದ್ದರು. ಎಲ್ಲೆಲ್ಲೂ ಸಂತೋಷ ಸಂಭ್ರಮ, ಹಬ್ಬದ ವಾತಾವರಣ ಜನರೆಲ್ಲಾ ಹರ್ಷೋಚಿತ್ತರಾಗಿ ಬಹಳ ಆನಂದ ದಿಂದ ನೃತ್ಯ ಗಾಯನ ಮಾಡುತ್ತಿದ್ದರು.

ಕಂಸನು ರಥವನು ನಡೆಸುತ್ತಿದ್ದನು. ಇದ್ದಕ್ಕಿದಂತೆ ದೊಡ್ಡ ಅಶರೀರವಾಣಿ ಕೇಳಿಸಿತು. ಆ ಸದ್ದಿಗೆ ಆಕಾಶವೇ ಕಂಪಿಸಿತು.ಮುಖ್ಯವಾಗಿ ಆ ಧ್ವನಿಯು ಕಂಸನನ್ನು ನಡುಗಿಸಿತು. ಆ ವಾಣಿಯು ಈ ರೀತಿಯಾಗಿ ಇತ್ತು "ಕಂಸಾ! ನೀನೊಬ್ಬ ಮೂರ್ಖ. ಈಗ ನೀನು ಕರೆದೊಯ್ಯುತ್ತಿರುವ ಈ ನಿನ್ನ ತಂಗಿ ದೇವಕಿಯ ಎಂಟನೆ ಗರ್ಭದಲ್ಲಿ ಜನಿಸುವ ಗಂಡು ಮಗುವೇ ನಿನ್ನನ್ನು ಕೊಲ್ಲುತ್ತದೆ" ಎಂದು,

ಕಂಸನೋ ಭೋಜವಂಶದವನು. ಭೋಜವಂಶದ ಎಲ್ಲಾ ರಾಜರುಗಳಲ್ಲಿ ಅತೀ ರಾಕ್ಷಸ ಸ್ವಭಾವ ಉಳ್ಳವ ನಾದವನು ಕಂಸನೆಂದು ಹೇಳುತ್ತಿದ್ದರು. ರಾಕ್ಷಸ ಸ್ವಭಾವದವನಾದ ಕಂಸನು ಆ ಅಶರೀರವಾಣಿಯನ್ನು ಕೇಳಿ ಕೆಂಡಾಮಂಡಲವನ್ನು, ಹೊಂದಿದನು. ಕಂಸನು ದೇವಕಿಯ ಕೂದಲನ್ನು ಹಿಡಿದು ಅವಳನ್ನು ಕೊಲ್ಲುವುದರಲ್ಲಿದ್ದನು. ಕಂಸನ ಈ ನಡವಳಿಕೆಯನ್ನು ಗಮನಿಸಿದ ವಸುದೇವನು ಕಂಸನಲ್ಲಿ ಈ ರೀತಿ ನಿವೇದನೆ ಮಾಡಿಕೊಂಡನು. "ಹೇ ಕಂಸಾ,ನೀನು ಭೋಜವಂಶದ ಅತ್ಯಂತ ಶ್ರೇಷ್ಟಯೋಧ ಪರಾಕ್ರಮಿ,ನೀನು ಈ ಅಶರೀರವಾಣಿಯಿಂದ ಏಕಿಷ್ಟು ಭಯಪಡುವೆ.ನಿನ್ನ ತಂಗಿ ಈಗಷ್ಟೆ ಮದುವೆಯಾಗಿದ್ದಾಳೆ. ಅಷ್ಟಕ್ಕೂ ಈ ವಾಣಿಯು ನಿಜವೋ ಸುಳ್ಳೋ ತಿಳಿಯದು ಹಾಗೆ ಒಂದು ರೀತಿಯಲ್ಲಿ ಈ ವಾಣಿ ನಿಜವಾದರೆ ನಾನು ಈಗಲೇ ಈ ರೀತಿಯಾಗಿ ಆಶ್ವಾಸನೆ ಕೊಡುತ್ತೇನೆ.

ನನ್ನ ಎಂಟನೆ ಮಗನಿಂದ ಸಾವು ಎಂದು ತಾನೆ ಹೇಳಿರುವುದು ಅಷ್ಟಕ್ಕೂ ನಿನ್ನನ್ನು ದೇವಕಿಯೇನು ಕೊಲ್ಲುತಿಲ್ಲವಲ್ಲ ನನಗೆ ಹುಟ್ಟುವ ಮಕ್ಕಳನ್ನು ಮತ್ತು ಎಂಟನೆ ಮಗುವನ್ನು ಹುಟ್ಟಿದ ತಕ್ಷಣ ನಾನೇ ನಿನಗೆ ಕೊಡುತ್ತೇನೆ. ನೀನೇ ನಿನ್ನ ಕೈಯಾರ ಏನಾದರೂ ಮಾಡಿಕೋ ಈ ರೀತಿ ನಿನ್ನ ಶತ್ರುವು ಹತನಾಗುವನು. ಈ ರೀತಿಯಾಗಿ ವಾಗ್ದಾನ ಕೊಡುತ್ತೇನೆ ಎಂದು ವಸುದೇವನು ಸಮಾದಾನ ಚಿತ್ತನಾಗಿ ತನ್ನ ಭಾವ ಮೃದುದನ್ನು ಕೇಳಿಕೊಳ್ಳುವನು.

ಅದೂ ಅಲ್ಲದೆ ಈಗತಾನೆ ಮದುವೆಯಾಗಿರುವ ನಿನ್ನ ತಂಗಿಯನ್ನು ನೀನು ಕೊಂದರೆ ನಿನ್ನ ಕೀರ್ತಿಗೆ ಮಸಿ ಬಳಿದಂತೆ ಆಗುವುದು ಎಂದು ವಸುದೇವನು ಹೇಳುತ್ತಾನೆ. ರಾಜಕುಮಾರ ಕಂಸನೇ ಇವಳು ನಿನ್ನ ತಂಗಿ, ಬಾಲಕಿಯೂ, ದೀನಳು, ಮುಗ್ದಳು, ಅವಳಲ್ಲಿಯ ಆ ಹಸಿ ಅರಿಶಿನ ಮಂಗಳ ದ್ರವ್ಯಗಳು ಇನ್ನು ಆರಿಲ್ಲಾ. ನಿನಗೆ ದೇವಕಿಯಿಂದ ಭಯ ಬೇಡ ಎಂದನು.

ಈ ಮಾತುಗಳಿಂದ ಕಂಸನು ತನ್ನ ನಿಲುವನ್ನು ಬದಲಿಸಿ ದೇವಕಿಯನ್ನು ಕೊಲ್ಲಲು ನಿಲ್ಲಿಸಿದನು. ಆದರೂ ಎಂಟನೆಯ ಮಗುವು ತನ್ನನ್ನು ಕೊಲ್ಲುವುದು ಎನ್ನುವುದನ್ನು ಮರೆಯಲಾಗದೆ ಅದು ಅವನನ್ನು ಭಾದಿಸಲು ತೊಡಗಿತು.

ವಸುದೇವನು ಕೊಟ್ಟ ಮಾತಿಗೆ ಎಷ್ಟು ಬೆಲೆ ಎಂದು ಕಂಸನಿಗೆ ತಿಳಿದಿತ್ತು ಅವನ ವಾದವು ಮನಸ್ಸಿಗೆ ಹಿಡಿಸಿತು ಆ ಸಮಯಕ್ಕೆ ತಂಗಿಯನ್ನು ಕೊಲ್ಲುವ ಹೇಯ ಕೃತ್ಯವನ್ನು ಕೈ ಬಿಟ್ಟುಬಿಟ್ಟು.

ವಸುದೇವನು ತನ್ನ ಹೆಂಡತಿ ದೇವಕಿಯ ವಿಷಯವಾಗಿ ಯೋಚಿಸಲಾರಂಭಿಸಿದನು.ನಾನು ಈಗ ಹೇಗೋ ನನ್ನ ಹೆಂಡತಿಯನ್ನು ರಕ್ಷಿಸಿಕೊಂಡೆ ಮುಂದೆ ಭಗವಂತಾ ಯಾವುದಾದರು ರೀತಿಯಲ್ಲಿ ನನ್ನ ಏಳು ಮಕ್ಕಳನ್ನು ಉಳಿಸುವ ಹಾಗೆ ಮಾಡು ತಂದೆ ಎಂದು ಮನಸ್ಸಿನಲ್ಲೇ ಬೇಡಿಕೊಳ್ಳುತ್ತಾನೆ.

ವಿಧಿಯ ಮುಂದೆ ನಾವೇನು, ಅಶರೀರವಾಣಿಯಂತೆ. ನನ್ನ ಎಂಟನೇ ಮಗನು ತನ್ನ ಮಾವನನ್ನು ಸಂಹರಿ ಸುವನೆಂದು ದೇವಕಿಯ ಗರ್ಭದಲ್ಲಿ ಜನಿಸುವನೆಂದರೆ ಅದು ಸುಳ್ಳಾಗಲಾರದು. ಹೇ ಪ್ರಭು ಈಗ ನನ್ನ ಹೆಂಡತಿ ದೇವಕಿ ಸುರಕ್ಷಿತಳಾಗಿದ್ದರೆ ಸಾಕು ಎಂದು ಮನಸ್ಸಿನಲ್ಲಿಯೇ ಪ್ರಾರ್ಥಿಸಿ ಕೊಂಡನು.

ಲೋಕದಲ್ಲಿ ಜನರು ತಮ್ಮ ಪ್ರಾಣವನ್ನು ಉಳಿಸಿ ಕೊಳ್ಳುವ ಸಲುವಾಗಿ ಕಡು ಲೋಭಿಯಾಗಿ, ಸ್ವಾರ್ಥಿಯಾಗಿ, ತಂದೆ ತಾಯಿ ಅಣ್ಣ ತಮ್ಮಂದಿರನ್ನು, ಸ್ನೇಹಿತರನ್ನು ಅಕ್ಕ ತಂಗಿ ಯನ್ನು ಕೊಲೆ ಮಾಡಲು ಹೇಸುವುದಿಲ್ಲ. ಅದರಲ್ಲಿ ಕಂಸನೂ ಕಮ್ಮಿಯೇನಿಲ್ಲ ಕಂಸನು ಎಲ್ಲಿ ತನ್ನ ತಂದೆ ಉಗ್ರಸೇನನು ದೇವಕಿಗೆ ಕರುಣೆ ತೋರಿಸುವನೋ ಉಗ್ರಸೇನಮಹಾ ರಾಜನು ದೈವಭಕ್ತ ಆದುದರಿಂದ ರಾಜನನ್ನು ಶಂಕಿಸಿ ಉಗ್ರ ಸೇನ ಮಹಾರಾಜರನ್ನು ಕಾರಾಗೃಹದಲ್ಲಿಟ್ಟು ತಾನೇ ರಾಜ್ಯ ವಾಳಲು ತೊಡಗಿದನು.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ (ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿ ನಲ್ಲಿ ಬರಿಯಿರಿ. ಪಿನ್ ಕೋಡ್ ಜೊತೆಗೆ ದೂರವಾಣಿ ಸಂಖ್ಯೆ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

( ದೂರವಾಣಿ ಸಂಖ್ಯೆಯನ್ನು ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಓ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ - ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**

# ಭಕ್ತರ ಸೇವೆಯಲ್ಲಿ .....



ತಿರುಮಲೆ ತಿರುಪತಿ ದೇವಸ್ಥಾನದ ನೇತೃತ್ವದಲ್ಲಿ ನಡೆಸುತ್ತಿರುವ ಶ್ರೀ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನಪ್ರಸಾದ ವಿತರಣಾ ಸಮುದಾಯವನ್ನು ತಿ.ತಿ.ದೇ. ಧರ್ಮಕರ್ತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾ ರೆಡ್ಡಿಯವರು ಆಕಸ್ಮಿಕವಾಗಿ ಸಂದರ್ಶಿಸಿ, ಅಲ್ಲಿ ಊಟ ಮಾಡುತ್ತಿರುವ ಭಕ್ತರೊಂದಿಗೆ ಅನ್ನಪ್ರಸಾದದ ನಾಣ್ಯತೆಯ ಬಗ್ಗೆ ವಿಚಾರಿಸಿದರು.

ತಿರುಮಲೆ ತಿರುಪತಿ ದೇವಸ್ಥಾನದವರಿಂದ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ನಡೆಸುತ್ತಿರುವ 'ಮನಗುಡಿ' ಕಾರ್ಯಕ್ರಮದ ಸಲುವಾಗಿ 2019 ಆಗಸ್ಟ್ 08 ನೇ ತಾರೀಖು ಗುರುವಾರದಂದು ಆಂಧ್ರ, ತೆಲಂಗಾಣ ರಾಜ್ಯಗಳಲ್ಲಿ 11,500 ಆಲಯಗಳಿಗೆ ಪೂಜಾಸಾಮಾಗ್ರಿಗಳನ್ನು ಒದಗಿಸುವುದಕ್ಕೆ ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸಂಬಂಧಿತ ಸಾಮಗ್ರಿಗಳಿಗೆ ಧರ್ಮಕರ್ತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಪ್ರತ್ಯೇಕ ಪೂಜೆಗಳನ್ನು ನಿರ್ವಹಿಸಿದರು.





2019 ಜುಲೈ 16 ನೇ ತಾರೀಖು ಮಂಗಳವಾರದಂದು ತಮಿಳುನಾಡಿನಲ್ಲಿ ಪ್ರಮುಖ ಪುಣ್ಯಕ್ಷೇತ್ರವಾದ ಕಾಂಚೀಪುರದಲ್ಲಿರುವ ಶ್ರೀ ವರದರಾಜ ಸ್ವಾಮಿಯ ಆಲಯದಲ್ಲಿ 40 ವರ್ಷಗಳಿಗೊಮ್ಮೆ ದರ್ಶನ ನೀಡುವ ಶ್ರೀ ಅತ್ತಿವರದ ರಾಜ ಸ್ವಾಮಿಯವರ ದರ್ಶನ ಪಡೆದು ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ. ಧರ್ಮಕರ್ತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು.

2019 ಆಗಸ್ಟ್ 23 ನೇ ತಾರೀಖು ಶುಕ್ರವಾರದಂದು, ಗೋಕುಲಾಷ್ಟಮಿ ಹಬ್ಬದ ಸಂದರ್ಭವಾಗಿ ತಿ.ತಿ. ದೇವಸ್ಥಾನದವರು ಶ್ರೀ ವೆಂಕಟೇಶ್ವರ ಗೋಸಂರಕ್ಷಣ ಶಾಲೆಯ ಪ್ರಾಂಗಣದಲ್ಲಿ ಶ್ರೀ ವೇಣುಗೋಪಾಲ ಸ್ವಾಮಿಯವರ ಆಲಯದಲ್ಲಿ ವೈಭವವಾಗಿ ನಡೆದ ಗೋ ಪೂಜಾ ಮಹೋತ್ಸವದಲ್ಲಿ ಧರ್ಮಕರ್ತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ಪಾಲ್ಗೊಂಡು ಗೋ ಪೂಜೆಯನ್ನು ಮಾಡಿದರು. ಹಾಗೆಯೇ, ಆ ಕಾರ್ಯಕ್ರಮಕ್ಕೆ ಹಾಜರಾದ ಭಕ್ತರಿಗೆ ಗೋಪೂಜೆಯ ಮಹತ್ವವನ್ನು ಗೋವಿನ ವೈಭವದ ಬಗ್ಗೆ ವಿವರಿಸಿದರು.ನಂತರ,ಗೋಸಂರಕ್ಷಣೆಗಾಗಿ ತಿ.ತಿ.ದೇ.ಯವರು ಮಾಡುತ್ತಿರುವ, ಮಾಡಬೇಕಾದ ವಿಧಿ ವಿಧಾನಗಳ ಬಗ್ಗೆ ವಿವರಿಸಿದರು.





Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.



ಚಿತ್ತೂರುಜಿಲ್ಲೆ, ಕಾಣಿಪಾಕದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ಸ್ವಾಮಿಯವರ ಬ್ರಹ್ಮೋತ್ಸವದ ಸಂದರ್ಭವಾಗಿ 2019, ಸೆಪ್ಟೆಂಬರ್ 10 ನೇ ತಾರೀಖಿನಂದು ತಿ.ತಿ.ದೇ ಧರ್ಮಕರ್ತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು,ತಿರುಮಲೆ ಆಲಯದ ಪ್ರತ್ಯೇಕಾಧಿಕಾರಿ ಶ್ರೀ ಎ.ವಿ.ಧರ್ಮಾರೆಡ್ಡಿ ದಂಪತಿಗಳು ತಿ.ತಿ.ದೇ.,ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿದರು.

ಚಿತ್ತೂರು ಜಿಲ್ಲೆ, ಕಾಣಿಪಾಕದಲ್ಲಿರುವ ಶ್ರೀ ವರಸಿದ್ಧಿವಿನಾಯಕ ಸ್ವಾಮಿಯವರ ಬ್ರಹ್ಮೋತ್ಸವದಲ್ಲಿ ತಿರುಮಲೆ ಸ್ವಾಮಿಯವರ ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಲು ಬಂದ ತಿ.ತಿ.ದೇ., ಧರ್ಮಕರ್ತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಮತ್ತು ತಿರುಮಲೆ ಆಲಯದ ಪ್ರತ್ಯೇಕಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ದಂಪತಿಗಳಿಗೆ ಕಾಣಿಪಾಕಂ ಆಲಯದ ಕಾರ್ಯನಿರ್ವಹಣಾಧಿಕಾರಿ ಶ್ರೀ ದೇವುಳ್ಳು ಅವರು ಗೌರವವಾಗಿ ಸ್ವಾಗತಿಸಿ,ತೀರ್ಥ ಪ್ರಸಾದಗಳನ್ನು ನೀಡಿದರು.





2019 ಆಗಸ್ಟ್ 23 ನೇ ತಾರೀಖಿನಂದು ತಿ.ತಿ.ದೇ., ತಿರುಪತಿಯಲ್ಲಿರುವ ಶ್ರೀ ವೆಂಕಟೇಶ್ವರ ಗೋಸಂರಕ್ಷಣಾ ಶಾಲೆಯಲ್ಲಿರುವ ಶ್ರೀ ವೇಣುಗೋಪಾಲ ಸ್ವಾಮಿಯವರ ಆಲಯದಲ್ಲಿ ವೈಭವವಾಗಿ ಗೋಪೂಜಾ ಮಹೋತ್ಸವ ನಡೆಯಿತು. ಆ ಸಂದರ್ಭದಲ್ಲಿ ಧರ್ಮಕರ್ತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಅಲ್ಲಿರುವ ರಾಮಕೋಟಿಸ್ತೂಪದ ಬಳಿಯಿರುವ ಪುಸ್ತಕದಲ್ಲಿ ರಾಮಕೋಟಿಯನ್ನು ಬರೆದರು. ಶ್ರೀ ರಾಮನಾಮಸ್ಮರಣೆ ಭಕ್ತಿ ಮುಕ್ತಿ ಪ್ರದಾಯಕ ಎಂಬ ಮಹತ್ತರ ಸ್ಫೂರ್ತಿಯನ್ನು ಭಕ್ತರಿಗೆ ತಿಳಿಸಿದರು.



ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಆಲಯದಲ್ಲಿ ಶ್ರೀ ವರಲಕ್ಷ್ಮಿ ವ್ರತ ಕಾರ್ಯಕ್ರಮವನ್ನು ತಿ.ತಿ.ದೇ. ನಿರ್ವಹಿಸಿದ ದೃಶ್ಯ
ಕಾರ್ಯಕ್ರಮದಲ್ಲಿ ಪಾಲ್ಗೊಂಡ ಉನ್ನತಾಧಿಕಾರಿಗಳು, ಭಕ್ತರು

SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams 25-09-2019
Regd. with the Registrar of Newspapers under "RNI" No.10742,
Postal Regd.No.TRP/14 - 2018-2020 Licensed to post without prepayment
No.PMGK/RNP/WPP-04/2018-2020

